ಹುಬ್ಬಳ್ಳಿ ತಾ. ೨೯-೧೧-೪೮

ಕರ್ಮವೀರ

ಸಂಪುಟ ೨೦] [ಸಂಚಿಕೆ ೩೦

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು— ನಿರ್ದೇಶಕರು:
ರಂ. ರಾ. ದಿವಾಕರ

★

ಆಧುನಿಕತೆ

★

“ಆಧುನಿಕತೆ ಐರೋಪ್ಯ ಉಡಿಗೆ ಯಲ್ಲಿಲ್ಲ. ಓದುವಾಗ ಅಲ್ಲಿಯ ...ರ್ಥಿ ವಿದ್ಯಾರ್ಥಿನಿಯರು ...ಟ್ಟು ಕುಳಿತುಕೊಳ್ಳುವ ...ರೂಪದ ಕುಚೇಲಗಳಲ್ಲಿಲ್ಲ. ಅಥವಾ ಅವರ ಚಪ್ಪಟೆ ಗೋಡೆಯು, ...ಮಾಂತರ ಕಿಟಿಕಿಗಳ, ಚತುರ್ಭು ...ಕಾರದ ಮನೆಯೆಂಬ ಸೆರೆಮನೆ ...ಲ್ಲಿಲ್ಲ. ಅಲ್ಲಿಯ ಹೆಂಗಸರು ...ತ್ತ ವಿಲಕ್ಷಣವಸ್ತು ಪ್ರದರ್ಶನ ...ಮಾಡುವ ಟೋಪಿಗಳಲ್ಲಂತೂ ಖಂಡಿ ...ವಾಗಿ ಆಧುನಿಕತೆಯಿಲ್ಲ! ಇವೆಲ್ಲ ಆಧುನಿಕವಲ್ಲ, ಕೇವಲ ಐರೋಪ್ಯ ...ನಿಸುವುವಷ್ಟೆ.

ಅಭಿರುಚಿಯ ದಾಸ್ಯವಲ್ಲ, ಮನಃ ...ಸ್ವಾತಂತ್ರ್ಯವೇ ನಿಜವಾದ ಆಧುನಿ ...ತೆ. ಅದು ವಿಚಾರ ಮತ್ತು ಕಾರ್ಯ ...ಗಳ ಸ್ವಾತಂತ್ರ್ಯದಲ್ಲಿದೆ, ಐರೋಪ್ಯರ ...ಗುರುಕುಲ ವಾಸದಲ್ಲಿರುವುದರಲ್ಲಿ ಲ್ಲ. ...ದೇ ವಿಜ್ಞಾನ-ಜೀವನದಲ್ಲಿ ವಿಜ್ಞಾ ...ನವನ್ನು ತಪ್ಪಾಗಿ ಬಳಸಿಕೊಳ್ಳುವದು ...ಎಂದೂ ಆಧುನಿಕತೆಯಾಗದು. ...ಒಂದು ವಿಜ್ಞಾನಭಾಗದ ಅಂಧಾನು ...ಕರಣ ಅಂಧಶ್ರದ್ಧೆಗೆ ಕಾರಣ. ...ವನ್ನು ಸರ್ವರೋಗಸಂಜೀವನಿ ...ತಿಳಿಯುವುದು ಹಾಸ್ಯಾಸ್ಪದ”

— ರವೀಂದ್ರನಾಥ ಠಾಕೂರ

★



ಗೋಕರ್ಣೇಶ್ವರನ ದಿವ್ಯ ಮಂದಿರ

ದಕ್ಷಿಣಕಾಶಿ ಎನಿಸಿದ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಾಲಯ. ಇಲ್ಲಿಯದು ಹಿಂದುಸ್ಥಾನದಲ್ಲಿ ಹೆಸರಾದ ಚತುರ್ದಶ ಜ್ಯೋತಿರ್ಲಿಂಗಗಳಲ್ಲಿ ಒಂದು. ಗಣಪತಿ ನೆಲದಲ್ಲಿಟ್ಟು ಹೋದ ಶಿವನ ಪ್ರಾಣಲಿಂಗವನ್ನು ರಾವಣನು ಕೀಳಹೋದಾಗ ಅವರ ಆಕೃತಿ ಗೋವಿನ ಕಿವಿಯಂತಾಯಿತಂತೆ!

KARMAVEER - KANNADA ILLUSTRATED WEEKLY, HUBLI

ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರ ಸಾಹಸ

(ಕಲಾಭಿಮಾನಿಯಿಂದ)

ನೃತ್ಯ ಕಲೆಯು ನಮ್ಮ ಜನತೆಗೆ ತೀರ ಹೊರ ಗಿನ ಕಲೆಯಾಗಿದೆ. ನಮ್ಮ ಕಾವ್ಯದಲ್ಲಿ, ಶಿಲ್ಪದಲ್ಲಿ ಕಂಡು ಬರುವ ಅದರ ಭವ್ಯ ಚಾರಿತ್ರ್ಯ ಇಂದಿನ ಕಾಲದಲ್ಲಿ ಹೇಳ ಹೆಸರಿಲ್ಲದೆ ಹೋಗಿದೆ. ಈ ವರೆಗೆ ಅಲ್ಲಿಲ್ಲಿ ಚಿಕ್ಕ ಪುಟ್ಟ ಪ್ರಯತ್ನಗಳು ನಡೆದರೂ ಅವು ನಿರ್ದಿಷ್ಟ ಗುರಿಯಿಲ್ಲದೇ ಜನ ತೆಯ ಬೆಂಬಲ ಪಡೆಯದೇ ಹೋಗಿವೆ.

ಗಾಳಿಯಂತೆ ಸುತ್ತಿದ್ದೇಕೆ?

ಧಾರವಾಡದ ಶ್ರೀ ಕುಲಕರ್ಣಿ ಶ್ರೀನಿವಾಸರು ನೃತ್ಯ ಕಲೆಯನ್ನು ಶಾಸ್ತ್ರೋಕ್ತವಾಗಿ ಅಭ್ಯಸಿಸಿ ದಕ್ಷಿಣ ಭಾರತದಲ್ಲಿ ಗಾಳಿಯಂತೆ ಸುತ್ತಿದರು. ಮದರಾಸಿನಲ್ಲಿಯ ತಮ್ಮ ನೃತ್ಯಭಾರತಿ ಕಲಾ ಕೇಂದ್ರದ ಮೂಲಕ ಸಿಲೋನಿನಿಂದ ಮುಂಬಯಿ ವರೆಗೆ ನಗರ—ಗ್ರಾಮಗಳಲ್ಲಿಯೂ ತಮ್ಮ ನೃತ್ಯ ಪ್ರಯೋಗಗಳನ್ನು ನಡೆಸಿದರು. ಪ್ರಾಥಮಿಕ ಪ್ರಯೋಗಗಳನ್ನು ಬಿಟ್ಟರೆ ನೃತ್ಯಕಲಾಕ್ಷೇತ್ರದಲ್ಲಿ ಅವರದು ಹನ್ನೆರಡು ವರುಷದ ದುಡಿಮೆ. ಧಾರವಾಡದಂಥ ಊರಲ್ಲಿ ಅವರ ಅಭ್ಯಾಸಕ್ಕೂ ಪ್ರಯೋಗಕ್ಕೂ ತಕ್ಕ ನೆರವು ಸಿಗದೆ ಅವರು ಮದರಾಸು ನಗರ ಸೇರಿ ಅಲ್ಲಿ ತಮ್ಮ ಹೋರಾಟದ ಜಾಲಿನಲ್ಲಿಯೇ ನೃತ್ಯಕಲೆಯನ್ನು ಆರಾಧಿಸಿದರು. ಕೇರಳ ಕಲಾಮಂಡಲದಲ್ಲಿ ನೃತ್ಯವನ್ನು ಶಾಸ್ತ್ರೋಕ್ತವಾಗಿ ಕಲಿತು ತಮ್ಮ ಸಜೀವ ಅಭಿರುಚಿಗೆ ಅದನ್ನು ಹೊಂದಿಸಿಕೊಂಡು ತಮ್ಮ ದೃಷ್ಟಿಗೆ ಅದನ್ನು ಒಗ್ಗಿಸಿ ಬಗ್ಗಿಸಿಕೊಂಡು ತಮ್ಮನ್ನು ತಿದ್ದಿಕೊಂಡು ಕಲೆಯನ್ನು ತಿದ್ದುತ್ತ ಅದರಲ್ಲಿ ಕುಸರು ಬಿಡಿಸಿ ನಮ್ಮ ಪ್ರಾಚೀನದ ಭವ್ಯತೆಯನ್ನು, ಇತಿಹಾಸದ ದಿವ್ಯತೆಯನ್ನು ಇಂದಿನ ನವ್ಯತೆಯನ್ನು ತಮ್ಮ ಕಲೆಯಲ್ಲಿ ಸಮನ್ವಯಿಸಿ ಹರಿಸಿದರು.

ವಿದ್ಯಾರ್ಥಿಗಳ ಕೊರತೆ ಅವರನ್ನು ಬಿಡಲಿಲ್ಲ. ಮತ್ತೊಂದು ದುಂದಲತ ಅಭ್ಯಾಸ ನಡೆದಿದೆ. ಹೀಗೆ ಇರುತ್ತ ಇರುತ್ತ ತನ್ನ ಸಾಧನ ಕ್ಷೇತ್ರದಲ್ಲಿಯೇ ನೃತ್ಯಕಲೆಯ ಒಂದು ಸಾಧನ ಕುಟೀರ—ಕೇಂದ್ರ—ವನ್ನು ಕಟ್ಟುವ ಹವ್ಯಾಸ ಬೇರೆ. ಧಾರವಾಡದಲ್ಲಿ ಎಲ್ಲೆಲ್ಲೂ ನೃತ್ಯವಿದ್ಯಾಲಯದ ಮಾತು-ಕತೆ. ಕೆಲವು ಸ್ನೇಹಿತರು ಕೂಡ 'ಇನ್ನು ಧಾರವಾಡದಲ್ಲಿಯೇ ಯಾಕೆ ಇರಬಾರದು, ಎಂದು ಕೇಳಿದರು.' ನನ್ನ ಕಲಾರಾಧನೆಗೆ ಇಲ್ಲಿ ಅವಕಾಶ ಕಲ್ಪಿಸಿ ಕೊಡ-ಇರುತ್ತೇನೆ. ನನಗೆ ಧಾರವಾಡ ಕರೆಯುತ್ತಲೇ ಇತ್ತು. ಕಾರಣಾಂತರದ ಈ ನೃತ್ಯಶಾಲೆಯ ಕಾರಣದಿಂದ ನೂರಾರು ವಿದ್ಯಾರ್ಥಿಗಳ ಸಂಬಂಧ- ಹಳೆಯ ಗೆಳೆಯರ ಸೆಳೆತ, ಇವೆಲ್ಲ ನನ್ನನ್ನು ಬಿಡಲಾರವೇನೋ ಅನಿಸುತ್ತದೆಂ' ದರು. ಮಾತು—ಮಾತು ಮಥಿಸಿ ಕಲಾ ಕೇಂದ್ರದ ನವನೀತವೊಂದು ತೇಲಿ ಬಂದಿತು.

ಕನಸಿಗೆ ಮೂರ್ತಸ್ವರೂಪ

ಭಾರತೀಯ ನೃತ್ಯ ಕಲಾ ಕೇಂದ್ರವೆಂದು ಒಂದು ಸಂಸ್ಥೆ ಕಟ್ಟಲ್ಪಟ್ಟಿತು. ಶ್ರೀನಿವಾಸರ ಕನಸಿನ ಕರ್ನಾಟಕ ಕೇಂದ್ರಕ್ಕೆ ಮೂರ್ತಸ್ವರೂಪ ಬಂದಿತು. ಅವರ ಅನುಭವ, ಕಲಾ ಪ್ರೌಢಿಮೆಯನ್ನು ಮೆಚ್ಚಿದ ಅವರ ಕಾಲೇಜ ಗುರುಗಳು ಶ್ರೀ. ಜಿ. ಬಿ. ಜಠಾರರು, ಅವರೀಗ ಮುಂಬಯಿ ಸರಕಾರದ ಸಂಗೀತ ಶಿಕ್ಷಣ ವಿಚಾರಣಾ ಸಮಿತಿಯ ಅಧ್ಯಕ್ಷರು, ಸೇವಾ ನಿವೃತ್ತರಾದರೂ ಧಾರವಾಡದ ಕೆ. ಇ. ಬೋರ್ಡ್ಸ ಕಾಲೇಜಿನ ಪ್ರಿನ್ಸಿಪಾಲರು, ತಮ್ಮ ಕಾಲೇಜ ಕುವರನೊಬ್ಬ ಒಂದು ಕಲಾ ಕೇಂದ್ರ ನಡೆಸುವ ಹೊಣೆ ಹೊತ್ತರೆ ತಮ್ಮ ಅನುಭವದ ಕಾಣಿಕೆ ಕೊಡಲು ಒಪ್ಪಿಕೊಂಡರು.



ನಾಟ್ಯಾಚಾರ್ಯ ಶ್ರೀನಿವಾಸರು ನೃತ್ಯಭಂಗಿಯಲ್ಲಿ

ಇದಾರ ಕೃಷಿಯ ಫಲ?

ಇದರ ಉಪಯೋಗವನ್ನು ಅಳೆದು ನೋಡಿದರೆ ಕಂಡು ಬರಲಿಕ್ಕಿಲ್ಲ. ಈ ಪ್ರಯತ್ನ ನಡೆದದ್ದು ವ್ಯಕ್ತಿ ದೃಷ್ಟಿಯಿಂದಲ್ಲ; ದೇಶದ ದೃಷ್ಟಿಯಿಂದ ನಡೆದದ್ದು. ಸಂಸ್ಕೃತಿಯನ್ನು ಯಾರಾದರೂ ದುಡುಕಿ ತೋರುವದುಂಟೇ? ಅದರ ಕೋಮಲ ಅಂಗವಾದ ಕಲೆಯನ್ನು ದೇಶದಲ್ಲಿ ಎತ್ತಿ ತೋರುವದು ಹೇಗೆ? ಜನತೆಗೆ ದೇಶಕ್ಕೆ ಇರುವ- ಇದ್ದ ಸಂಸ್ಕಾರ ಪ್ರವಾಹದಲ್ಲಿಯ ಕಾಸಂಕಲ್ಲಿನಂತೆ ತಿಕ್ಕಿ ತಿಕ್ಕಿ ಭಿನ್ನ ಭಿನ್ನ ರೂಪ ಪಡೆಯುತ್ತಲೇ ಇರುತ್ತದೆ. ಒಂದು ತೆರೆಯ ಹೊಡೆತ, ಇನ್ನೊಂದು ಕಲ್ಲಿನ ಕೊರೆತ, ಮತ್ತೊಂದು ಉರುಳು ಇವೆಲ್ಲವೂ ಮೂಲ ಕಲ್ಲಿಗೆ ರೂಪ ಕೊಡಲು ಸಹಾಯವಾಗುತ್ತವೆ. ಕಲೆಯು ಕೆಲಸ ಜನರ ಭಾವನೆಗೆ, ದೃಷ್ಟಿಗೆ ಒಂದೊಂದು ಪರಿಣಾಮ ಬೀರಿರುತ್ತದೆ. ಅದು ಇಂಥದು ಎಂದು ಎತ್ತಿ ತೋರಿಸುವುದು ಸಾಧ್ಯವೇ? ಹಾಗೆ ಶ್ರೀನಿವಾಸರ ನೃತ್ಯ ಕಲಾ ಪ್ರಚಾರದಿಂದ ನಾಡಿಗೆ ಏನು ಮಂಗಲವಾಗಿದೆಯೆಂಬುದನ್ನು ಎತ್ತಿ ತೋರಿಸಲು ಬರುವಂತಿಲ್ಲ. ಆದರೆ ಜನತೆಯಲ್ಲಿ ನೃತ್ಯ ಕಲೆಯ ಬಗ್ಗೆ ಕಂಡು ಬರುತ್ತಿರುವ ಅಭಿರುಚಿ ಯಾರ ಕೃಷಿಯ ಫಲವೆನ್ನೋಣ?

ಮಾತು ಮಾತು ಮಥಿಸಿ ನವನೀತ

ಶ್ರೀನಿವಾಸರು ಧಾರವಾಡದಲ್ಲಿ ಮೂರು ತಿಂಗಳ ಒಂದು ಅಭ್ಯಾಸ ಕ್ರಮ ಮುಗಿಸಿ ಹೊರಡಬೇಕೆಂದರೆ ವಿದ್ಯಾರ್ಥಿ

ಈ ಯೋಜನೆಯ ಮೂಲದಲ್ಲಿಯೆ ಕನ್ನಡದ ಕುಲಗುರುಗಳಾದ ಶ್ರೀ ಉರುವಕೊಂಡ ಸಂಸ್ಥಾನದ ಗವೀಮಠದ ಶ್ರೀ ಕರಿಬಸವ ರಾಜೇಂದ್ರ ಮಹಾಸ್ವಾಮಿಗಳು ತಮ್ಮ ತೆರೆಮರೆಯ ಸ್ವಾಗತವನ್ನು ಕೋರಿ ಔದಾರ್ಯದ ಬೆಂಬಲವನ್ನೂ ಆಶೀರ್ವಾದವನ್ನೂ ನೀಡಿ ಪ್ರೋತ್ಸಾಹಿಸಿದರು.

ನಿರ್ದಿಷ್ಟ ಯೋಜನೆ

ಕಾರ್ಯ ಯೋಜನೆಯೊಂದು ಈಗ ಪ್ರಕಟವಾಗಿದ್ದು ಅದರ ವಿವರಗಳು ಕೆಳಗಿನಂತಿವೆ:—

೧. ಈ ಕೇಂದ್ರದ ಪರವಾಗಿ ನೃತ್ಯ, ಸಂಗೀತ ನಾಟ್ಯಕಲೆಗಳ ಸಂಶೋಧನೆ ಅಭ್ಯಾಸ ಹಾಗೂ ಪ್ರಚಾರ ಮಾಡುವದಕ್ಕಾಗಿ ಧಾರವಾಡದಲ್ಲಿ ವಿದ್ಯಾಪೀಠವೊಂದನ್ನು ಸ್ಥಾಪಿಸಿ ಈ ಕಲೆಗಳಲ್ಲಿ ಅಭ್ಯಾಸ ಮಾಡಬಯಸುವವರಿಗೆ ಎಲ್ಲ ಬಗೆಯ ಶಿಕ್ಷಣ ಸೌಕರ್ಯ ಒದಗಿಸಿಕೊಡುವುದು;

೨. ಕಲಾವಿಷಯಕವಾಗಿ ಈ ವರೆಗೆ ಪ್ರಕಟವಾದ ಎಲ್ಲ ಗ್ರಂಥಗಳನ್ನೂ ವಸ್ತುಗಳನ್ನೂ ಸಂಗ್ರಹಿಸುವುದು;

೩. ಈ ಕಲೆಗಳಲ್ಲಿ ಪರಂಪರವಾಗಿ ಬಂದಿರುವ ವಿವಿಧ ಮಾರ್ಗಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿ ಸಂಶೋಧನಾತ್ಮಕ, ವಿಮರ್ಶಾತ್ಮಕ ಗ್ರಂಥಗಳನ್ನು ಪ್ರಕಟಿಸುವುದು;

೪. ಈ ಕಲೆಗಳ ಬೆಳವಣಿಗೆಗಾಗಿ ಒಂದು ಮಾಸಪತ್ರಿಕೆಯನ್ನು ಹೊರಡಿಸುವುದು;

೫. ಉಚ್ಚ ವರ್ಗದ ಕಲಾವಿದರನ್ನು ಒಂದೆಡೆಯಲ್ಲಿ ಸೇರಿಸಿ ವಿವಿಧ ಮಂಡಲಗಳ ಮೂಲಕ ನೃತ್ಯ, ಸಂಗೀತ, ನಾಟಕಗಳ ಹೊಸಮಾದರಿಯ ಪ್ರಯೋಗಗಳನ್ನು ಪ್ರದರ್ಶಿಸುವುದು;

೬. ಪ್ರಾಚೀನ ಕಲೆಗಳ ಅಭ್ಯಾಸ ಮತ್ತು ಪ್ರಚಾರದ ದೃಷ್ಟಿಯಿಂದ ಕೆಲವು ಲಘುಚಿತ್ರಪಟಗಳನ್ನು ತಯಾರಿಸುವುದು.

ಈ ಉದ್ದೇಶಗಳನ್ನು ನೆರವೇರಿಸಲು ಪ್ರಾರಂಭದಲ್ಲಿಯೇ ಶಿಕ್ಷಣ ಹಾಗೂ ಪ್ರದರ್ಶನಗಳಿಗನುಕೂಲವಾಗುವ ರೀತಿಯಲ್ಲಿ ಒಂದು ನಾಟ್ಯಮಂದಿರ, ಲೈಬ್ರರಿ, ವಸ್ತುಸಂಗ್ರಹಾಲಯ,—ಇವಲ್ಲದೆ ಶಿಕ್ಷಕರ ಕುಟೀರ, ವಿದ್ಯಾರ್ಥಿಗಳ ವಸತಿಗೃಹಗಳನ್ನೊಳಗೊಂಡು ಒಂದು ವಿಶಾಲವಾದ ಮಾದರಿಯ ಕಟ್ಟಡದ ಆವಶ್ಯಕತೆಯಿದೆ. ಕಟ್ಟಡದ ನಿರ್ಮಾಣಕ್ಕಾಗಿ ಮತ್ತು ಅವಶ್ಯಕ ಸಾಮಗ್ರಿಗಳ ಜೋಡಣೆಗಾಗಿ ಒಂದು ಲಕ್ಷ ರೂಪಾಯಿಗಳೂ ಮತ್ತು ಕೇಂದ್ರದ ವಿವಿಧ ಕಲಾ ಕ್ಷೇತ್ರದ ಕಾರ್ಯಕಲಾಪಗಳನ್ನು ಸಾಗಿಸಲು ಒಂದು ಲಕ್ಷ ರೂಪಾಯಿಗಳೂ ಹೀಗೆ ಒಟ್ಟು ಎರಡು ಲಕ್ಷ ರೂಪಾಯಿಗಳ ಅಂದಾಜು ಮಾಡಲಾಗಿದೆ.

ಈಗಾಗಲೆ ಹಲವು ಮಹನೀಯರು ಈ ಪ್ರಯತ್ನಕ್ಕೆ ತಮ್ಮ ಹಾರ್ದಿಕ ಬೆಂಬಲವನ್ನಿತ್ತು ಸಹಾಯ ಮಾಡುವ ಆಶ್ವಾಸನವನ್ನು ಕೊಟ್ಟಿದ್ದಾರೆ. ಸಂಗ್ರಹಿಸುವ ನಿಧಿಯನ್ನು ವ್ಯವಸ್ಥಿತ ರೀತಿಯಲ್ಲಿ ಬಳಸುವದಕ್ಕಾಗಿ ನಿಶ್ಚಿತ ಮಂಡಲವೊಂದನ್ನು ನಿಯಮಿಸಲಾಗುವದು. ಈ ನಿಧಿ ಸಂಗ್ರಹದ ಪ್ರಾರಂಭವೆಂದು ಧಾರವಾಡದಲ್ಲಿ ಕಳೆದ ರವಿವಾರ ನೃತ್ಯ ಕಾರ್ಯಕ್ರಮವನ್ನಿಟ್ಟುಕೊಂಡು ಹಿರಿಯರ ಆಶೀರ್ವಾದವನ್ನು ಕೋರಲಾಯಿತು.

ಚಿತ್ರ ಕತೆ

ಎಂಟಾಣೆ

ಕಥೆಗಾರ:— ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಮಂಗಳೂರು

ಮಧ್ಯಾಹ್ನದ ಸೂರ್ಯನ ಪ್ರಖರ ಕಿರಣಗಳು ಪೃಥ್ವಿಯಲ್ಲಿ ಆವರಿಸಿಕೊಂಡಿದ್ದವು. ಗಾಳಿಯು ಬಿಸಿಯೇರಿದ್ದು, ಕಲ್ಲುಗಳೆಲ್ಲವೂ ಬೆಂಕಿಯುಗುಳುವಂತಿದ್ದವು. ಕೆಂಧೂಳು ದಾರಿ ಹೋಕರ ಮೈ ಮೇಲೆ ಹಾರುತ್ತಾ ತನ್ನ ಉದ್ದಂಡತೆಯನ್ನು ತೋರಿಸುತ್ತಿತ್ತು. ಇಂತಹ ನಡು ಬಿಸಿಲನ್ನು ಕೂಡ ಲೆಕ್ಕಿಸದೆ ನಮ್ಮ ಶಾಂತಪ್ಪನು ಹರಕು ಧೋತರ ತುಂಡೊಂದನ್ನು ಸೊಂಟಕ್ಕೆ ಕಟ್ಟಿಕೊಂಡು ಯಾರೋ ಕೊಟ್ಟಿರುವ ಜೈರಾಸೊಂದನ್ನು (ರುಮಾಲು) ತಲೆಗೆ ಸುತ್ತಿ ಹೆಗಲಲ್ಲಿ ಕೊಡಲಿಯಿರಿಸಿ ಬೆವರನ್ನೊಮ್ಮೆ ಒರಸಿಕೊಳುತ್ತಾ ಸರಾಗವಾಗಿ ಮಾರ್ಗದ ಬದಿಯಲ್ಲೆ ಮುಂದಸಾಗುತ್ತಿದ್ದನು. ಬಾಯಾರಿಕೆಯಿಂದ ಗಂಟಲನ್ನು ತಿರುವಿಕೊಳ್ಳುತ್ತಾ ಸಮೀಪದ ಕಾಡಿಗೆ ತಲ್ಪಿ ಒಮ್ಮೆ ಕಣ್ಣೆತ್ತಿ ನಾಲ್ಕು ಕಡೆಗೆ ದಿಟ್ಟಿಸಿ ನೋಡಲಾಗಿ ದೂರದಲ್ಲೊಂದು ಒಣಗಿದ ಮರವು ಗೋಚರಿಸಿತು. ತಿರುಕನಿಗೆ ಸಿರಿ ದೊರೆತಂತಾಯಿತು ನಮ್ಮ ಶಾಂತುವಿಗೆ ಆಗ. ಅತ್ತಿತ್ತ ನೋಡದೆ ಹಟಾತ್ತಾಗಿ ಮರವನ್ನೇರಿ ಒಂದೇ ಸವನೆ ಅದನ್ನು ಕಡಿಯತೊಡಗಿದನು.

ಬೆಳಗಿನಿಂದ ಬರಿ ಹೊಟ್ಟೆಯಲ್ಲಿದ್ದ ಶಾಂತು ಹಸಿವನ್ನು ತಡೆಯಲಾರದೆ ಆಗಾಗ ಕಣ್ಣೀರು ಢುತ್ತಿದ್ದನು. ಎರಡೂವರೆ ಪಾವಿನ ಪಡಿಯಕ್ಕಿ ತಾನು, ತನ್ನೆರಡು ಮಕ್ಕಳು, ತನ್ನ ಹೆಂಡತಿ ಈ ನಾಲ್ಕು ಮಂದಿಗೆ ಎಲ್ಲಿ ಸಾಕಾದೀತು? ಆದುದರಿಂದ ಅತ್ತಿತ್ತ ಅಲೆದಾಡಿ ರಾತ್ರಿ ಮನೆಗೆ ಹೋಗಿ ಒಂದಿಷ್ಟು ಗಂಜಿ ಕುಡಿದು ಈ ದಿನ ಬೆಳಿಗ್ಗೆ ಹೊಟ್ಟೆಗೆ ಕೈ ಇಟ್ಟುಕೊಂಡು ಹೊರಟವನು ನಡು ಮಧ್ಯಾಹ್ನದತನಕ ಏನೂ ದೊರೆಯದೆ ಈಗ ಕಾಡು ಸೇರಿ ಮರಕಡಿಯುತ್ತಿದ್ದಾನೆ. ಮನೆಯಲ್ಲಿ ಐದು ವರ್ಷದ ಮಗ ನಾಣಿ ಮೂರು ವರ್ಷದ ಮಗಳು ಲಚ್ಚು ತನ್ನ ತಾಯಿ ಬಳಿ ಚಾಡಿದ ಮುಚ್ಚಿದೊಂದಿಗೆ ಕುಳಿತುಕೊಂಡು "ಈಗ ನಮ್ಮಪ್ಪ ರೇಷನ್ ತರುತ್ತಾರೆ! ತಂದ ಕೂಡಲೇ ನಮ್ಮಮ್ಮ ಗಂಜಿ ಮಾಡಿಕೊಡುತ್ತಾಳೆ; ಬಿಸಿ-ಬಿಸಿ-ಗಂಜಿ ಮತ್ತು ಹಲಸಿನಹಣ್ಣಿನ ಅಡಿಸಿಪ್ಪೆಯ ಉಪ್ಪಿನ ಕಾಯಿ ಹಾಕಿ ಊಟ ಮಾಡೋಣ!" ಎಂದೆಲ್ಲಾ ಯೋಚನೆಯಿಂದ ಮಗ್ನರಾಗಿ ತಂದೆಯ ಬರೋಣವನ್ನು ನಿರೀಕ್ಷಿಸುತ್ತಿದ್ದರು.

ಇತ್ತ ಶಾಂತು ಮರದ ದೊಡ್ಡ ಕೊಂಬೆಯೊಂದನ್ನು ಕಡಿದುರುಳಿಸಿದನು. ಬೆವರಿಂದ ತೊಯ್ದು ಬಳಲಿಬೆಂಡಾಗಿದ್ದನು. ಹೊಟ್ಟೆಯೊಳಗಿನ ಕರುಳು ಬಾಯಿಗೆ ಬರುವಂತಿತ್ತು. ಆದರೂ ತನ್ನ ಮಕ್ಕಳನ್ನು ನೆನೆದುಕೊಂಡು ಕೂಡಲೇ ಕೆಳಗಿಳಿದು ಕೊಂಬೆಗಳನ್ನು ಸವರಿ ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿ ಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಪ್ರಾಣವನ್ನು ಬಿಗಿ ಹಿಡಿದು ಬಹಳ ಸಂಕಟದಿಂದ ಮನೆಯಂಗಳಕ್ಕೆ ಬಂದು ಕಟ್ಟಿಗೆಯ ಹೊರೆಯನ್ನು ಅಂಗಳದಲ್ಲಿ ಹಾಕಿ ಜಗಲಿಯಲ್ಲಿ ಮೂರು ದೀರ್ಘ ಶ್ವಾಸವನ್ನು ಬಿಡುತ್ತಾ ತನ್ನ ಮಗನನ್ನು ಕರೆದನು. ನಾಣೀ! ಮಗು ನಾಣು!

ಅಪ್ಪಾ ಇದೊ ಬಂದೆ! ಅಕ್ಕಿ ತೆಗೆದುಕೊಂಡು ಬಂದಿರಾ? ಎಂದು ಲವಲವಿಕೆಯಿಂದ ಹೊರಗೆ ಓಡಿ ಬಂದನು. ಆದರೆ ಅಪ್ಪನ ಕೈಯಲ್ಲಿ ಏನೂ ಇರಲಿಲ್ಲ. ನಾಣು! ಅಗೋ ನೋಡು ಅಂಗಳದಲ್ಲಿ ಕಟ್ಟಿಗೆ ಹೊರೆ. ಅದನ್ನು ಈಗಲೇ ಮಾರಿ ಅಕ್ಕಿ ತರುತ್ತೇನೆ. ನಿನಗೆ ಮತ್ತು ಲಚ್ಚುಗೆ ನೆಲ ಕಡಲೆ ತರುತ್ತೇನೆಂದು ಮಕ್ಕಳನ್ನು ಸಂತೈಸಿ ಒಂದು ಚಂಬಿಗೆ ತಣ್ಣೀರು ಕುಡಿದು ಸೌದೆ ಕಟ್ಟನ್ನು ತಲೆಯಲ್ಲಿರಿಸಿಕೊಂಡು ಶಾಂತು ಪೇಟೆ ಕಡೆಗೆ ನಡೆದನು. ಅವನ ಮನೆಗೆ ಪೇಟೆಯು ಎರಡೂವರೆ ಮೈಲು ದೂರದಲ್ಲಿತ್ತು. ಮೊದಲೇ ಉಪವಾಸದ ಆಯಾಸ! ಮೇಲಿಂದ ಬಿಸಿಲಿನ ಏಟು. ಸಾಲದುದಕ್ಕೆ ತಲೆಯ ಮೇಲೆ ಹೊರೆ! ಮತ್ತೊಂದೆಡೆಯಿಂದ ಹೆಂಡತಿ ಮಕ್ಕಳ ಯೋಚನೆ! ಇದನ್ನೆಲ್ಲಾ ನೆನೆ-ನೆನೆದು ಶಾಂತುವು ಸರಾಗವಾಗಿ ನಡೆಯಲಾರದೆ ಅಲ್ಲಲ್ಲಿ ನಿಲ್ಲುತ್ತಾ ಹೇಗಾದರೂ ಪೇಟೆ ಸೇರಿದನು. ಕಂಡವರಿಗೆಲ್ಲಾ ಕಟ್ಟಿಗೆಯನ್ನು ತೋರಿಸುತ್ತಾ, ಒಳ್ಳೆಯ ಸೌದೆ! ಬಹಳ ಚೆನ್ನಾಗಿ ಒಣಗಿದೆ. ಸೌದೆ ಡಿಪ್ಪೋದಲ್ಲಿ ಸಹ ಇಂತಹ ಕಟ್ಟಿಗೆ ದೊರೆಯಲಾರದು. ಬಹಳ ಕಡಿಮೆ ಬೆಲೆಯಲ್ಲಿ ಕೊಡುತ್ತೇನೆ! ಬಹಳ ಕಷ್ಟಪಟ್ಟು ಬಹು ದೂರದಿಂದ ನಿಮಗಾಗಿ ತಂದಿದ್ದೇನೆ, ಇತ್ಯಾದಿ ನಾನಾರೀತಿಯಲ್ಲಿ ಹೇಳತೊಡಗಿದನು.

ಕೆಳಪೇಟೆಗೆ ಹೋಗುತ್ತಲೆ ನಾಗೇಶ ಪೈಗಳ ಪತ್ನಿ ಮನೋರಮಾಬಾಯಿಯವರು ಶಾಂತುವನ್ನು ಕರೆದು ಸೌದೆಯನ್ನು ಕೊಂಡುಕೊಂಡರು. ಒಂದು ರೂಪಾಯಿ ದೊರಕಿತು ಶಾಂತುಗೆ. ಶಾಂತಪ್ಪನ ಸಂತೋಷಕ್ಕೆ ಎಣೆಯಿಲ್ಲದಂತಾಗಿ ಕೂಡಲೇ ರೇಷನ್ ಪಡಕೊಂಡು ಮಕ್ಕಳಿಗೆ ನೆಲ ಕಡಲೆ ತೆಗೆದುಕೊಂಡು ಬೇಗ ಮನೆಗೆ ಹೋಗುತ್ತೇನೆಂದು ಧಾವಿಸಿದನು.

ಎರಡು ದಿನದ ರೇಷನ್ ಪಡಕೊಂಡು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ರೂಪಾಯಿಗೆ ಕೈ ಹಾಕಲು ಶಾಂತುವಿನ ಮೇಲೆ ಆಕಾಶವೇ ಕಳಚಿಬಿದ್ದಂತಾಯಿತು. ತಾನುಟ್ಟ ವಸ್ತ್ರವನ್ನು ಬಿಚ್ಚಿ ಕೊಡುವಿದನು! ತಲೆಯ ವಸ್ತ್ರವನ್ನು ಝಾಡಿಸಿದನು! ಎಲ್ಲಿ ನೋಡಿದರೂ ರೂಪಾಯಿ ದೊರೆಯಲಿಲ್ಲ. ಕಣ್ಣೀರಿನ ಧಾರೆ ಇಳಿಯತೊಡಗಿತು, ಗಟ್ಟಿಯಾಗಿ ಅಳತೊಡಗಿದನು. ಜನರು ಗುಂಪು ಸೇರಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಪ್ರಶ್ನಿಸಿದರು:

ಸ್ವಾಮಿ! ಇಡೀ ಬಿಸಿಲಲ್ಲಿ ಉಪವಾಸವಿದ್ದು ಸೌದೆ ಕಡಿದು ತಂದು ಮಾರಿ ಒಂದು ರೂಪಾಯಿ ಸಂಪಾದಿಸಿದೆನು! ಹಸಿವೆಯಿಂದ ನರಳುತಿದ್ದಾರೆ ಮಕ್ಕಳು ಮನೆಯಲ್ಲಿ! ಈ ದಿನದ ರೇಷನಾದರೂ ಕೊಂಡು ಹೋಗುತ್ತೇನೆಂದು ಇಲ್ಲಿಗೆ ಬಂದೆ! ಈಗ ನೋಡುವಾಗ ನನ್ನ ರೂಪಾಯಿ ಎಲ್ಲಿಯೋ ಬಿದ್ದುಹೋಯಿತು! ಅಯ್ಯೋ ದೇವರೇ! ಮಕ್ಕಳಿಗೆ ಒಂದಿಷ್ಟು ಗಂಜಿಗೂ ಗತಿಇಲ್ಲದೆ ಹೋಯಿತಲ್ಲಾ! ಎಂದು ಬಹಳವಾಗಿ ಗೋಳಾಡಿದನು.

ನೆರೆದವರಲ್ಲೊಬ್ಬರು ಈತನ ಗೋಳನ್ನು ಕೇಳಲಾರದೆ ಮರುಕಗೊಂಡು ತನ್ನಲ್ಲಿದ್ದ ಎಂಟಾಣೆಯನ್ನು ಶಾಂತುವಿನ ಕೈಯಲ್ಲಿಟ್ಟು ಸಂತೈಸಿ ಹೋದರು. ಸುರಿವ ಕಣ್ಣೀರನ್ನೊರಸಿಕೊಳ್ಳುತ್ತಾ ಅಯ್ಯೋ ರಾಮಚಂದ್ರಾ! ಈ ಎಂಟಾಣೆಯಿಂದ ಈ ದಿವಸದ ರೇಷನ್ ಕೂಡಾ ದೊರೆಯಲಿಕ್ಕಿಲ್ಲವಲ್ಲಾ! ಇದರಿಂದ ಏನನ್ನು ಕೊಂಡುಕೊಳ್ಳಲಿ! ಎಂದೆಲ್ಲಾ ಯೋಚಿಸಿ ಕಡೆಗೆ ಮೂರು ಸೇರು ಗೆಣಸು, ಒಂದು ಪಾವು ಪಚ್ಚೆ ಹೆಸರು, ಅರ್ಧ ಸೇರು ಬೆಲ್ಲ ತೆಗೆದುಕೊಳ್ಳುತ್ತೇನೆ. ಗೆಣಸು ಬೇಯಿಸಿ ತಿಂದು ಮಲಗೋಣ! ನಾಳೆ ಪಚ್ಚೆ ಹೆಸರು ಬೇಯಿಸುವುದು ಎಂದು ತೀರ್ಮಾನಿಸಿ ಅಂಗಡಿ ಕಡೆಗೆ ಹೊರಟನು.

ಹೋಗುತ್ತಿದ್ದಂತೆ ಬೆನ್ನು ಮೇಲೆ ಬಲವಾಗಿ ಯಾರೋ ಗುದ್ದಿದರು. ಶಾಂತುವು ಒಮ್ಮೆಗೆ ಗಾಬರಿಗೊಂಡು ಹಿಂತಿರುಗಿ ನೋಡಿದನು. ಕೂಡಲೇ ಬಲಕೆನ್ನೆಗೊಂದು ಏಟು ಬಿತ್ತು. ಮೊದಲೇ ಹಸಿದು ಕಂಗಾಲಾಗಿದ್ದ ಶಾಂತು ಎರಡೇಟುಗಳ ನೋವನ್ನು ತಡೆಯಲಾರದೆ

— ೧೬ ನೇ ಪುಟ ನೋಡಿರಿ

ದೇಶಾಂತರಗಳಿಂದ

ಬರ್ಲಿನ್ ಪ್ರಕರಣ

ಬರ್ಲಿನ್ ಬಿಕ್ಕಟ್ಟಿನ ಸಂದರ್ಭದಲ್ಲಿ ಅಲ್ಲಿಯ ...ರಲ್ ಡೆಮೊಕ್ರಾಟಿಕ್ ಪಕ್ಷದ ಮುಖಂಡ ...ಶ್ವಿನ್ನಿಕ್ಕೆಯು. ಸಂ. ರಾ. ಸಂಘದ ಅಧ್ಯಕ್ಷ ಡಾ. ಹರ್ಬರ್ಟ್ ಇವ್ಯಾಟ್, ಕಾರ್ಯದರ್ಶಿ ಟ್ರೈಗ್ರೀವ್‌ಲೈ, ಭದ್ರತಾಮಂಡಲದ ಅಧ್ಯಕ್ಷ ಡಾ. ಜುವನ್ ಬ್ರಮುಗ್ಲಿಯ ಈ ಮೂವರು ಬರ್ಲಿನ್ನಿಗೆ ಸಂದರ್ಶನ ಕೊಡಬೇಕೆಂದು ಆಮಂತ್ರಿಸಿದ್ದಾನೆ.

ಬರ್ಲಿನ್ನಿನ ತಾತ್ಕಾಲಿಕ ನಗರ ಸಭಾಧ್ಯಕ್ಷ ಡಾ. ಫರ್ಡಿನಾಂಡ್ ಫ್ರೆಂಡೆನ್ಸ್‌ಬರ್ಗ್‌ನಿಗೆ ಸೋವಿಯಟ್ ವಲಯದಿಂದ ನಗರ ಸಭೆಯ ದಫ್ತರನ್ನು ಪಾಶ್ಚಾತ್ಯವಲಯಕ್ಕೆ ಒಯ್ಯಬಾರದೆಂದು ವಿಧಿಸಲಾಗಿದೆ. ಪಾಶ್ಚಾತ್ಯವಲಯದ ಪೋಲೀಸರು ರಶಿಯನ್‌ವಲಯಕ್ಕೆ ಸೈನಿಕ ಸಲಕರಣೆಗಳನ್ನು ಒಯ್ಯದಂತೆ ಕಾದಿದ್ದಾರೆ. ಫ್ರೆಂಚ ವಲಯದಲ್ಲೂ ಪೋಲೀಸ್ ಚಟುವಟಿಕೆ ನಡೆದಿದೆ.

ಚೀನಕ್ಕೆ ಸಹಾಯ

ಜನರಲ್ ಚಿನ್‌ಯೀಯ ಕಮ್ಯುನಿಸ್ಟ ದಲಗಳು ಸುಸಜ್ಜಿತವಾಗಿ ದಕ್ಷಿಣ ಶಾಂಟಂಗಿನಿಂದ ನುಗ್ಗಿಬಂದು ಸರಕಾರದ ಬಲಿಷ್ಠ ಠಾಣೆಯಾದ ಸೂಟೋವಿಂದ ೩೫ ಮೈಲು ದೂರದಲ್ಲಿರುವ ಚಾನ್ ಜುವನ್ನಿನ ಮೇಲೆ ರಭಸದಿಂದ ನುಗ್ಗಿದವು. ಸರಕಾರೀಪರ ಚೀನೀಯರು ಅಮೇರಿಕದ ಅಧ್ಯಕ್ಷ ಟ್ರೂಮನ್ನರು ಜನರಲ್ ಮಾರ್ಶ...ಡನೆ ಚೀನಕ್ಕೆ ಸೈನ್ಯಾದಿ ಸಕಲ ಸಹಾಯ ...ಡುವವರ ವಿಷಯವಾಗಿ ಚರ್ಚಿಸುತ್ತಿರುವುದರ ಫಲಿತಾಂಶವನ್ನು ನಿರೀಕ್ಷಿಸುತ್ತಿದ್ದಾರೆ. ಟ್ರೂಮನ್ನರಿಗೆ ಚೀನೀಸರಕಾರಕ್ಕೊದಗಿದ ಇತ್ತೀಚಿನ ಸೋಲಿನದಸೆಯಿಂದ ಚೀನದ ಬಗ್ಗೆ ಅಮೇರಿಕದ ಧೋರಣೆಯನ್ನು ಪುನಃ ಪರಿಶೀಲಿಸಿ ಅದಕ್ಕೆ ಪರಿಸ್ಥಿತಿಗೆ ಅನುಗುಣವಾದ ಹೊಸರೂಪ ಕೊಡಬೇಕಾಗಿದೆ.

ಚೀನದ ಪರಿಸ್ಥಿತಿಯನ್ನು ನೋಡಿ ಬರಲು ಕಳಿಸಿದ ವಿಶೇಷ ಸಮಿತಿ ಚಿನೀ ಸರಕಾರಕ್ಕೆ ಸೈನ್ಯ, ಶಸ್ತ್ರಾಸ್ತ್ರ ಹಣಕಾಸು, ಮಾರ್ಗದರ್ಶನ ಇವು ಅಮೇರಿಕದಿಂದ ಈಕ್ಷಣ ದೊರಕದಿದ್ದರೆ ಇಡಿ ಚೀನ ಕಮ್ಯುನಿಸ್ಟ ಆಗಬಹುದೆಂದೂ ಚೀನ ಹೋದರೆ ಇಡಿ ದೂರ ಪ್ರಾಚ್ಯ ಕಮುನಿಸ್ಟರದ್ದಾಗುವುದೆಂದೂ ವರದಿಮಾಡಿದೆ ಸದ್ಯದಲ್ಲೇ ಅಮೇರಿಕದ ೧೨॥ ಕೋಟಿ ಡಾಲರ್ ಮತ್ತು ಇನ್ನಿತರಸಹಾಯ ಸಂಪತ್ತುಗಳು ಚೀನಕ್ಕೆ ಹೋಗಲಿವೆಯೆಂದೂ ತೋರುತ್ತದೆ.

ಇಂಡೊನೇಶಿಯದ ಪ್ರಶ್ನೆ

ಇಂಡೊನೇಶಿಯ ಪ್ರಜಾರಾಜ್ಯದ ವ್ಯಾಖ್ಯಾತನು ಅಮೇರಿಕದ ಸಂಯುಕ್ತ ಸಂ...ನದ ಒತ್ತಾಯದ ದೆಸೆಯಿಂದ ಇಂಡೊ...ಯ ಪ್ರಜಾರಾಜ್ಯದ ಬಗ್ಗೆ ಡಚ್ಚರ ಧೋರಣೆ ಸಮೂಲ ಬದಲಾಗಿದೆ ಎಂದು ಹೇಳುತ್ತಾನೆ. ಚೀನದಲ್ಲಿ ಕಮ್ಯುನಿಸ್ಟರ ಕೈಮೇಲಾಗುತ್ತಿರುವುದೇ ಅಮೇರಿಕದ ಒತ್ತಾಯಕ್ಕೆ ಕಾರಣವೆಂಬುದು ಅವನ ಮತ. ಮೊನ್ನೆ ನಿಯಮಿಸಲ್ಪಟ್ಟ ನೆದರ್‌ಲೆಂಡ್ಸ್ ಮಂತ್ರಿಮಂಡಲ ಪ್ರತಿನಿಧಿಗಳು ರಾಜಧಾನಿಗೆ ಬಂದಿಳಿದಕೂಡಲೆ ಅವರೊಡನೆ ಸಂಧಾನ ನಡೆಯಬಹುದೆಂದೂ ಆತನೆನ್ನುತ್ತಾನೆ.

ಕಮ್ಯುನಿಸ್ಟರ ಹಾವಳಿಯೂ ಇಂಡೊನೇಶಿಯದಲ್ಲಿ ನಡೆದಿದೆ. ಪ್ರಜಾಸರಕಾರ ಅದನ್ನು ಪ್ರತಿಭಟಿಸುತ್ತಿದೆ. ಜಾವಾದಲ್ಲಿ ಪ್ರಜಾರಾಜ್ಯದಿಂದ ಹೊರಟು ಗ್ರೋಬೋಗನೆ ಎಂಬ ಮಧ್ಯಜಾವಾದಲ್ಲಿಯ ಸ್ಥಳವನ್ನು ಸುತ್ತುವರಿಯಲು ಪ್ರಯತ್ನಿಸಿದ ಸುದ್ದಿ ಡಚ್ಚರಿಂದ ಬಂದಿದೆ.

ಪಾಲಿಸ್ತಾನದ ರಣಕೋಲಾಹಲ

ದಕ್ಷಿಣ ನೆಗೇವಿನಲ್ಲಿರುವ ಇಜಿಪ್ತದ ಸೈನ್ಯ ಇಸ್ರೇಲ್ ರಾಜ್ಯದಲ್ಲಿ ಹೊಕ್ಕು ರಘಾರೆಗೆ ಮೂಡಲಲ್ಲಿರುವ ಮೂರು ಸ್ಥಳಗಳನ್ನು ಆಕ್ರಮಿಸಿತೆಂದು ಇಸ್ರೇಲಿನ ಒಬ್ಬ ಸೈನಿಕ ...ತ್ರ ಹೇಳುತ್ತಾನೆ. ಇದಲ್ಲದೆ ಬೇರೆ ಬೇರೆ ...ಮೂದಿ ವಸತಿ ಸ್ಥಳಗಳಿಗೆ ಹೋಗುವ ಜಲನಾಳವನ್ನು ಇಜಿಪ್ತದವರು ನಾಶಗೊಳಿಸಿದರಂತೆ. ಇಸ್ರೇಲಿನ ಒಂದು ವಿಮಾನ ಇಜಿಪ್ತದ ಎರಡು ಎಂಜಿನ್ನಿನ ಒಂದು ವಿಮಾನವನ್ನು ಹೊಡೆದು ಕೆಳಗುರುಳಿಸಿತೆಂದು ಸುದ್ದಿ.

ಲಂಡನ್ನಿನ ಓಲೆ

(ನಮ್ಮ ಲಂಡನ ಪ್ರತಿನಿಧಿಯಿಂದ)

ಲಂಡನ ತಾ. ೧೮

ಈ ವಾರ ಹವೆ ಕೆಟ್ಟಿದ್ದರಿಂದ ನಗರದ ನಾಗರಿಕರ ಆರೋಗ್ಯಕ್ಕೆ ಸ್ವಲ್ಪ ಧಕ್ಕೆ ತಗುಲಿದರೂ ರಾಜಕುಮಾರಿ ಎಲಿಜಬೆತ್ತಳಿಗೆ ಪುತ್ರೋತ್ಸವವಾದ್ದರಿಂದ ಕಳೆದ ಉತ್ಸಾಹ ಅವರಲ್ಲಿ ತುಂಬಿ ಬಂದಿದೆಯೆನ್ನಬಹುದು.

ಭಾರತೀಯರು ಬಹಳ ಉದಾರಿಗಳು. ಅವರು ಬಹುಬೇಗ ತಮ್ಮ ದುಃಖ ದೂರುಗಳನ್ನು ಮರೆತು ಹಿಂದಿನ ಆಳರಸರ ಮತ್ತು ದಬ್ಬಾಳಿಕೆಗಾರರ ಬಗ್ಗೆ ಮತ್ಸರ ಪಡದೆ ಇರಬಲ್ಲವರು. ನಾನು ಊಟ ಮಾಡುತ್ತಿದ್ದ ಚೀನೀ ಹೋಟೆಲಿನಲ್ಲಿ ಈ ಮಾತಿಗೆ ನಿದರ್ಶನ ನನಗೆ ಸಿಕ್ಕಿತು. ಅಲ್ಲಿದ್ದ ಭಾರತೀಯರು ಸುದ್ದಿ ಕಿವಿಗೆ ಬಿದ್ದ ಕೂಡಲೆ ರಾಜಕುಮಾರನ ಆರೋಗ್ಯವರ್ಧಿಸಲೆಂದು ಹರಸಿ ಅವನ ಹೆಸರಲ್ಲಿ ೨ ನೆಯ ಬಾರಿ ಪೇಯಗಳನ್ನು ತರಿಸಿ ಕುಡಿದರು. ಇದರ ಮೇಲೆ ಭಾರತದಿಂದ ಪಂಡಿತ ಜವಾಹರಲಾಲರು ಮಗುವಿನ ನಾಮಕರಣಕ್ಕಾಗಿ ಲಂಡನ್ನಿಗೆ ಹೋಗಿ ಅದರ God-Father- ಧರ್ಮಪಿತರಾಗುವರೆಂಬ ಸುದ್ದಿ ಬೇರೆ ಹರಡಿದೆ. ಇದು ಎಷ್ಟು ನಿಜವೋ ಎಷ್ಟು ಸುಳ್ಳೋ ನನಗೆ ಗೊತ್ತಿಲ್ಲ. ಹೀಗೆ ನೆಹರು ಲಂಡನ್ನಿಗೆ ಹೋಗಿ ಕಾಮನ್ವೆಲ್ತಿನ ಮುಂದಿನ ರಾಜನಿಗೆ ಧರ್ಮಪಿತನಾಗುವುದು ಒಂದು ವೇಳೆ ನಿಜವೇ ಆದರೆ ಇದಕ್ಕಿಂತ ಹೆಚ್ಚು ಪಿಚಿತ್ರವಾದ ವಿಧಿಲೀಲೆ ಇನ್ನೊಂದು ಇರದು !



ಇತ್ತೀಚೆಗೆ ಬ್ರಿಟನ್ನಿನಲ್ಲಿ ನಡೆದ "ಬ್ರಿಟನ್ ನಿಮಗೆ ಕೃತಜ್ಞತೆ ಸಲ್ಲಿಸುತ್ತದೆ" ಎಂಬ ವಸ್ತುಪ್ರದರ್ಶನದಲ್ಲಿ ದೇಶಾಂತರದ ಉದಾರಿಗಳಿತ್ತ ದಾನಕ್ಕೆ ಬ್ರಿಟಿಶರು ಕೃತಜ್ಞತೆ ತೋರಿಸುತ್ತಿರುವ ದೃಶ್ಯ.

ರಾಜಪುತ್ರನ ಜನ್ಮೋತ್ಸವ

ರಾಜಕುಮಾರಿ ಎಲಿಜಬೆತ್ತಳ ಬಾಣಂತಿತನದಿಂದ ಪತ್ರಿಕೆಗಳು ಬಹಳ ಲಾಭ ಹೊಡೆಯುತ್ತಿವೆ. 'ಸಂಡೇ ಎಕ್ಸ್‌ಪ್ರೆಸ್' ಎಂಬ ಪತ್ರಿಕೆ ರಾಜಕುಮಾರನ ಭವಿಷ್ಯವನ್ನು ಕೂಡ ಆಗಲೇ ಪ್ರಕಟಿಸಿಬಿಟ್ಟಿದೆ. ಯಾವಾಗಲೂ ಮಿಕ್ಕ ಪತ್ರಿಕೆಗಳನ್ನು ಇಂತಹ ಯಾವುದಾದರೂ ಚಮತ್ಕಾರ ಮಾಡಿ ಹಿಂದೆ ಹಾಕುವ ಲವಲವಿಕೆಯಿಂದಲೇ ಇರುವುದು ಅದರ ಸ್ವಭಾವ. ಆ ಭವಿಷ್ಯದಲ್ಲಿ "ನಕ್ಷತ್ರಗಳ ಭವಿಷ್ಯವಾಣಿ" ಎಂಬ ತಲೆಬರಹದಡಿ ಮಗುವಿಗೆ "Well-balanced mentality— ಸಮಚಿತ್ತತೆ" ಇದೆಯೆಂದೂ ಅದು ಮುಂದೆ ಒಂದು ಮಹಾವ್ಯಕ್ತಿಯಾಗುವದೆಂದೂ ಹೇಳಲಾಗಿದೆ. ಆದರೆ ಕಮ್ಯೂನಿಸ್ಟ ಪತ್ರಿಕೆ "ಡೇಲಿ ವರ್ಕರ್" ಮಾತ್ರ ವಿಲಕ್ಷಣ ವ್ಯಾಖ್ಯೆಯನ್ನು ಪ್ರಕಟಿಸಿದೆ. ಹೊಸ ರಾಜಕುಮಾರನಿಗೆ ಅವನ ಅಜ್ಜನಿಗಿಂತ ಹೆಚ್ಚು ಉತ್ತಮ ಸ್ಥಾನವಿದೆ. ನಮ್ಮ ಕಾಲವೀಗ ವಿಶೇಷ ಪ್ರಗತಿಯಲ್ಲಿ ಸಾಗಿದೆ. ಆದುದರಿಂದ ಹುಡುಗ ಬೆಳೆದು ದೊಡ್ಡವನಾಗುವಷ್ಟರಲ್ಲಿ ಅವನ ತನ್ನ ರಾಜನೆಂಬ ಬಿರುದನ್ನೂ ದುಡಿಯದೆ ಪಡೆದ ಐಶ್ವರ್ಯವನ್ನೂ ತ್ಯಾಗ ಮಾಡಿಬಿಡಬಹುದು. ಅವನು ಹೊಸ ಭವಿಷ್ಯವನ್ನೇ ಕಾಣುವನು; ಒಂದು ವೃತ್ತಿಯಲ್ಲಿ ಶಿಕ್ಷಣ ಪಡೆದು ಅವನೊಬ್ಬ ಮಜೂರ ಸಂಘದ ಸದಸ್ಯನಾದಾನು. ಅಂಥ ದಿನ ಬೇಗನೆ ಬರಲಿ ! ಪೂರ್ಣೋದ್ಯೋಗ ಧೋರಣವೊಂದು ಬಂದರೆ ಅದು ಎಲ್ಲರಿಗೂ ಕೆಲಸ ಕೊಡಿಸುತ್ತದೆ"

ಉಕ್ಕಿನ ಉದ್ಯಮದ ರಾಷ್ಟ್ರೀಕರಣ

ಎರಡನೆಯದಾಗಿ, ಉಕ್ಕಿನ ಮಸೂದೆ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಿತು. ಇದರಲ್ಲಿ ಇಂಗ್ಲೆಂಡಿನ ಇಂದಿನ ಸಾಮ್ಯವಾದೀ ಸರಕಾರಕ್ಕೂ ಬಂಡವಾಳವಾದಿಗಳಿಗೂ ಭಾರೀ ಕಾಳಗ ನಡೆಯಿತು. ಈ ಸಂದರ್ಭದಲ್ಲಿ ಚರ್ಚಿಲ್ಲರು ಪ್ರದರ್ಶಿಸಿದ ಕ್ರೋಧೋನ್ಮಾದಕ್ಕೆ ಎಣೆಯೇ ಇಲ್ಲ. ೧೯೩೫ ರ "ಇಂಡಿಯಾ ಡಿಬೇಟಿನ" ನಂತರ ಅವರು ಹೀಗೆ ಕೋಪಾಟೋಪ ತೋರಿಸಿದ್ದು ಇದೇ ಎರಡನೆಯ ಸಲ. ಉಕ್ಕಿನ ಉದ್ಯಮದ ರಾಷ್ಟ್ರೀಕರಣಕ್ಕಾಗಿ ತಂದ ಈ ಮಸೂದೆಯನ್ನು "ಇದು ಮಸೂದೆಯಲ್ಲ, ಒಂದು ಕಪಟ ತಂತ್ರ" ಎಂದು ಅವರು ಉಗ್ರೋಕ್ತಿಯಿಂದ ಟೀಕಿಸಿದರು. ಅಲ್ಲದೆ, "ಇದು ಸಹನಶೀಲರೂ ಸತತೋದ್ಯಮಿಗಳೂ ಆದ ನಮ್ಮ ವರನೆರವಿಗೆ ಬರುವ ಯೋಜನೆಯಲ್ಲ ಬಂಡವಾಳಸ್ಥರ ಕೋಶಾಗಾರವನ್ನು ಒಡೆಯಲು ದರೋಡೆಗಾರರು ಬಳಸುವ ಹಾರುಗೋಲು ಎಂದು ಅವರು ಬೈದರು. ಆದರೆ ಸರ್ ಸ್ಟಾಫರ್ಡ ಕ್ರಿಪ್ಸರು ಕೇಳಿದ ಪ್ರಶ್ನೆಗಳಿಗೆ ಚರ್ಚಿಲ್ಲರ ಬತ್ತಳಿಕೆಯಲ್ಲಿ ಯಾವ ಉತ್ತರವೂ ಇರಲಿಲ್ಲ. ಇಂಥ ದುರ್ದಿನದಲ್ಲಿ ನಾಡಿನ ಅತ್ಯಂತ ಪ್ರಧಾನವಾದ ಉದ್ಯಮವು ಕೆಲವೇ ಬಂಡವಾಳಸ್ಥರ ಕೈಯಲ್ಲಿ ಉಳಿಯಗೊಡುವುದು ಅಸಾಧ್ಯ; ಅವರು ತಮ್ಮ ಪಾಲುಗಾರರ ಹಿತಕ್ಕೆ ಧಕ್ಕೆ ಬರದಂತೆ ಉತ್ಪಾದನೆಯನ್ನು ನಿಯಂತ್ರಿಸುವರಲ್ಲದೆ ನಾಡಿನ ಹಿತದ ದೃಷ್ಟಿಯಿಂದಲ್ಲ - ಎಂಬುದು ಕ್ರಿಪ್ಸರ ವಾದ. ಖಾಸಗಿ ಉದ್ಯಮಗಳ ಮೇಲಿನ ದಾಳಿಗೆ ವಿರೋಧವನ್ನು ವ್ಯಕ್ತಪಡಿಸುವುದೆಂದರೆ ಖಾಸಗಿ ಔದ್ಯಮಿಕ ಸಾಮ್ರಾಜ್ಯಗಳೊಡನೆ ವ್ಯವಹರಿಸಲು ಪ್ರಜಾಪ್ರಭುತ್ವಕ್ಕಿರುವ ಹಕ್ಕಿಗೊಂದು ಸಮರಾಹ್ವಾನವೇ ಸೈ- ಎಂದೂ ಅವರು ಗರ್ಜಿಸಿದರು.

ಚರ್ಚಿಲ್ಲರ ಮೋರೆ ಬಿಳಿಚಿಕೊಂಡುಹೋಯಿತು. ಅವರು ಒಂದು ವಿಧಿ ಬಿಂದುವನ್ನೆತ್ತಲು ಎದ್ದರು. ಸರ್ ಸ್ಟಾಫರ್ಡರು ತಮ್ಮ ಹಿಡಿತವನ್ನು ಬಿಡಲಿಲ್ಲ. ಈ ವಾಕ್ಕದನದ ಕಟ್ಟಾಳುಗಳಿಗೆ ಅವರವರ ಕಡೆಯವರು ಬೆಂಬಲ ಕೊಡಬಂದರು ಸ್ಪರಲ್ಲಿ ಸಭಾಧ್ಯಕ್ಷರು ಇಬ್ಬರನ್ನೂ ಸುಮ್ಮನಿರುವಂತೆ ಮಾಡಿದರು. ಆದರೂ ಚರ್ಚಿಲ್ಲರು ತಮ್ಮ ಸ್ಥಾನದಿಂದಲೇ ಎದ್ದೆದ್ದು ಹಾರುತ್ತ ಸರ್ ಸ್ಟಾಫರ್ಡರನ್ನು ಕುರಿತು, "ಹಾಗೆಲ್ಲ ಹಿಂಸೆ ಕ್ರಾಂತಿಗಳ ಬೆದರಿಕೆ ಹಾಕಲು ನಿಮಗೆ ಹಕ್ಕಿಲ್ಲ" ಎಂದು ಘೂತ್ಕರಿಸಿದರು. ಅವರ ಮೋರೆಯನ್ನು ನೋಡಿದರೆ ಒಬ್ಬ ರಣೋನ್ಮತ್ತ ಜೂಲೂಯೋಧ ಶತ್ರುವನ್ನು ತುಂಡು ತುಂಡಾಗಿ ಕತ್ತರಿಸಿ ಅವನ ಹೆಣದ ಮೇಲೆ ಭೈರವೀ ನೃತ್ಯವಾಡಲು ನಿಂತರೆ ಹೇಗೋ ಹಾಗೆನಿಸಿತು ನನಗೆ ! ಇಷ್ಟು ವಿರೋಧ ಟೋರಿಗಳಿಂದ ಬಂದರೂ ಮಸೂದೆಯನ್ನು ನಾಡಿಗರು ಸ್ವಾಗತಿಸಿದ್ದಾರೆ, ಅದು ಬ್ರಿಟನ್ನಿನ ಪುನರುತ್ಥಾನಕ್ಕೆ ಸಹಾಯವಾಗುವುದೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ.

ಬ್ರಿಟನ್ನಿನ ಹೊಸದಾಗಿ ಪ್ರಾರಂಭವಾದ ಶಸ್ತ್ರೋತ್ಪಾದನದ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಮೂಲಭೂತ ಉದ್ಯಮಗಳೆಲ್ಲ ಸರಕಾರದ ಸಮನ್ವಿತ ಮೇಲ್ವಿಚಾರಣೆ ಮತ್ತು ನಿಯಂತ್ರಣಗಳಿಗೊಳಗಾಗುವುದು ಅವಶ್ಯಕ. ಈ ಹೋರಾಟದಲ್ಲಿ ಕೆಲವು ಖಾಸಗಿ ಉದ್ಯಮಗಳನ್ನು ಹಾಳುಗೆಡಹಬೇಕಾಗುವದು. ಆದರೆ ಈ ಸಮಸ್ಯೆಯನ್ನು ಕೂಲಿಕಾರ ಸರಕಾರ ಎದುರಿಸುತ್ತಿರುವ ಧೈರ್ಯ ಮತ್ತು ಆತ್ಮವಿಶ್ವಾಸಗಳನ್ನು ಕಂಡರೆ ಪುನಃ ಅದು ಅಧಿಕಾರಕ್ಕೆ ಬರುವುದು ಖಂಡಿತವೆಂದು ನನಗನಿಸುತ್ತದೆ. ೩ ದಿನಗಳ ವರೆಗೆ ನಡೆದ ಈ ಚರ್ಚೆಯನ್ನು ಕಂಡ ಯಾರೇ ಆಗಲಿ ಸಾಮ್ಯವಾದಿಯಾದ ಈ ಸರಕಾರ ಪಕ್ಷಪಾತ ವಹಿಸಿತೆಂದು ಹೇಳಲಾರರು. ರಾಷ್ಟ್ರದ ಅತ್ಯಂತ ಉತ್ತಮ ಹಿತಸಂಬಂಧಗಳಿಗನುಗುಣವಾಗಿಯೇ ಅದು ಸಾಗಿದೆ.

ಲಂಚ ನಿರ್ಮೂಲನ

ಸರಕಾರೀ ಇಲಾಖೆಗಳಲ್ಲಿ ಲಂಚಗುಳಿತನವನ್ನು ಕಂಡುಹಿಡಿಯಲು ಒಂದು ನ್ಯಾಯ ಸಮಿತಿಯಿದೆ. ಅದರ ಕಾರ್ಯವೀಗ ಜನರ ಲಕ್ಷ್ಯಕ್ಕೆ ಬರುವಷ್ಟು ಮಹತ್ವವನ್ನು ಮುಟ್ಟಿದೆ. ವ್ಯಾಪಾರ ಸಮಿತಿಯ ಆಡಳಿತೆಗೆ ನಿಯುಕ್ತರಾದ ಸಾಮ್ಯವಾದಿ ಮಂತ್ರಿ ಜೆಲ್ಬರರೆಂಬವರೀಗ ಲಂಚದ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರೇನಾದರೂ ಅಪರಾಧಿಗಳೆಂದು ಸಿದ್ಧವಾದರೆ ಅದರಿಂದ ಇಂದಿನ ಸಾಮ್ಯವಾದೀ ಸರಕಾರದ ಕೀರ್ತಿಗೆ ಕಳಂಕ ತಟ್ಟದಿರದು. ಬೆಲ್ಚರರ ಈ ಪ್ರಕರಣವನ್ನು ಟೋರಿ ಪತ್ರಿಕೆಗಳು ಅತಿಶಯೋಕ್ತಿಗಳಿಂದ ಬಣ್ಣಿಸಲಾರಂಭಿಸಿವೆ ಕೋರ್ಟಿನಲ್ಲಿ ತೀರ್ಮಾನಿಸಲ್ಪಡದವಿಷಯವಾದುದರಿಂದ ಆದ ವಿಷಯವಾಗಿ ನಾನು ಹೆಚ್ಚಿಗೆ ಹೇಳಲಾರೆ. ಆದರೆ ಇಷ್ಟು ಮಾತ್ರ ನಿಜ: ಸರಕಾರೀ ಇಲಾಖೆಗಳಲ್ಲಿ ಎಲ್ಲ ಸರಿಯಾಗಿ ನಡೆಯುತ್ತದೆ ಎನ್ನಲು ಬರದು. ಭಾರತದಲ್ಲಿ ಈ ನ್ಯಾಯ ಸಮಿತಿಯ ವರದಿ ಪ್ರಕಟವಾಗುವ ವ್ಯವಸ್ಥೆಯನ್ನು ಮಾಡಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಸಮಿತಿಯ ಕಾರ್ಯಕಲಾಪಗಳನ್ನು ಕಣ್ಣಿಟ್ಟು ನೋಡುವುದರಿಂದ ಭಾರತ ಸರಕಾರದ ಆಡಳಿತೆಯ ಯಂತ್ರವನ್ನು ಕೆಡಿಸುತ್ತಿರುವ ಲಂಚಗುಳಿತನದ ಭೂತವನ್ನು ಉಚ್ಚಾಟನೆ ಮಾಡಲು ಸಹಾಯವಾಗಬಹುದು.

ಭಾಷಾನುಗುಣ ಪ್ರಾಂತ ರಚನೆಗೆ ಶ್ರೀ ವಿನೋಬಾರ ಪುರಸ್ಕಾರ

ಆಚಾರ್ಯ ವಿನೋಬಾ ಭಾವೆಯವರು ಸೇವಾಗ್ರಾಮದಲ್ಲಿ ತಾ. ೧೪ರಂದು ಭಾಷಣ ಮಾಡುತ್ತ ಹೀಗೆ ನೇರಲಾಗಿ ಹೇಳಿದರು.

"ಭಾಷಾನುಗುಣ ಪ್ರಾಂತ ರಚನೆಯಾಗಬೇಕೆನ್ನುವವರು ಹಿಂದುಸ್ಥಾನದಿಂದ ಹಿರಿದು ಹೋಗಬೇಕೆಂದೂ ಅನ್ನುತ್ತಿಲ್ಲ, ಇಲ್ಲವೆ ಪಾಕಿಸ್ತಾನ ನಿರ್ಮಾಣಕ್ಕೂ ಹೊರಟಿಲ್ಲ. ಕೇಂದ್ರ ಸರಕಾರವು ಭದ್ರವಾಗಿರಬೇಕೆಂದು ಅವರೂ ಬಯಸುತ್ತಾರೆ. ಜನರ ಭಾಷೆಯಲ್ಲಿ ರಾಜ್ಯಭಾರ ಮಾಡದ ಸರಕಾರವು ಜನತಾ ಸರಕಾರವೆನಿಸೀತು? ಭಾಷಾನುಗುಣ ಪ್ರಾಂತೀಕರಣದಿಂದ ಪ್ರಾಂತ ಪ್ರಾಂತಗಳಲ್ಲಿ ವೈಮನಸ್ಯ ಉಂಟಾಗುವದೆಂಬುದು ತಪ್ಪು. ತದ್ವಿರುದ್ಧವಾಗಿ ಭಾಷಾನುಗುಣವಾಗಿ ಪ್ರಾಂತರಚನೆಯಾಗದಿದ್ದರೆಯೇ ವೈಮನಸ್ಯ ಹೆಚ್ಚುವದು. ಈ ಬಗ್ಗೆ ಉಂಟಾದ ಗೊಂದಲಗಳು ಗಡಿಯ ವಿಷಯಕ್ಕೆ ಸಂಬಂಧಪಟ್ಟವುಗಳಾಗಿವೆ. ಸೀಮಾ ಸಮಿತಿಯು ಇದನ್ನು ಆ ಮೇಲೆ ಸುಲಭವಾಗಿ ನಿಷ್ಕರ್ಷಿಸಬಹುದು. ಒಟ್ಟಿನ ಮೇಲೆ ಭಾಷಾನುಗುಣ ಪ್ರಾಂತೀಕರಣವನ್ನು ಮುಂದೂಡುವದು ಗಂಡಾಂತರದ್ದಾಗಿದೆ"

ಮ. ಗಾಂಧಿಯ ಕೊಲೆಯ ಖಟ್ಲೆಯಲ್ಲಿ ಶ್ರೀ ಸಾವರಕರರ ಹೇಳಿಕೆ

ಈ ಖಟ್ಲೆಯಲ್ಲಿ ೭ ನೇಯ ಆರೋಪಿಯಾಗಿ ನಿಂತ ಶ್ರೀ ವಿನಾಯಕ ದಾಮೋದರ ಸಾವರಕರರು ತಾ ೨೦ ರಂದು ವಿಶೇಷ ನ್ಯಾಯಾಲಯದಲ್ಲಿ ಲಿಖಿತ ಹೇಳಿಕೆಯನ್ನು ಓದಿ ಹೇಳಿದರು. ಅದಕ್ಕೆ ೨॥ ತಾಸು ಬೇಕಾಯ್ತು. ಅದರಲ್ಲಿ ತಾವು ಪೂರ್ಣ ನಿರ್ದೋಷಿಯೆಂದೂ ಯಶಸ್ವಿಗಳಾಗಿ ಬನ್ನಿರಿ ಎಂದು ಆಶೀರ್ವದಿಸಿದ್ದು ಸುಳ್ಳೆಂದೂ ನಿವೇದಿಸಿದರಲ್ಲದೆ ಮಹಾತ್ಮರೊಡನೆ ಮತಭೇದವಿದ್ದರೂ ಅವರ ವಿಷಯದಲ್ಲಿ ಅತ್ಯಂತ ಗೌರವವಿತ್ತೆಂದೂ ಹೇಳಿದರು. ಹೇಳಿಕೆಯ ಒಂದು ಸಂದರ್ಭದಲ್ಲಿ "ನಾನು ಕೂಡ ಭಾರತದ ರಾಜಕೀಯ ಹೋರಾಟದಲ್ಲಿ ಯೋಧನಾಗಿ ದುಡಿದಿರುವೆ. ೫೦ ವರ್ಷಗಳಿಂದ ನನ್ನ ಪೀಳಿಗೆಯ ದೇಶ ಪ್ರೇಮಿಗಳಿಗಿಂತಲೂ ಹೆಚ್ಚಾಗಿ ಸ್ವಾರ್ಥತ್ಯಾಗ ಮಾಡಿರುವೆ. ಈಗ ಭಾರತವು ಸ್ವತಂತ್ರವಾಗಿದೆ" ಎಂದು ನೊಂದಲಾಗಿ ನುಡಿವಾಗ ಭಾವಪರವಶತೆಯಿಂದ ಶ್ರೀ ಸಾವರಕರರ ಧ್ವನಿ ನಡುಗಿ ಕಣ್ಣುಗಳಿಂದ ಅಶ್ರು ಧಾರೆಗಳು ಉರುಳಿದವು.

ಕನ್ನಡ ಪ್ರಹಸನ ಪ್ರಪಿತಾಮಹ ಕೈಲಾಸಂ

ಲೇ.— ಶ್ರೀ ಎ. ಪುಟ್ಟಮಾದಪ್ಪ

ಕನ್ನಡ ರಂಗಸ್ಥಳದಲ್ಲಿ ಕ್ರಾಂತಿಯನ್ನೆಬ್ಬಿಸಿದ ಪ್ರತಿಭಾಶಾಲಿಗಳಾದ ದಿವಂಗತ ಟಿ. ಪಿ. ಕೈಲಾಸಂರವರ ಹೆಸರನ್ನು ಕೇಳದವರುಂಟೆ? ಅವರ ಪ್ರಹಸನವನ್ನೋದಿ, ಆಡಿ, ಕಂಡು, ಕೇಳಿ, ನಕ್ಕುನಲಿದು ಆತ್ಮಶೋಧಮಾಡಿಕೊಳ್ಳದ ಕನ್ನಡಿಗನಿರುವನೆ? ಇಂಥ ಅದ್ಭುತ ಕಲೆಗಾರರ ಅಲ್ಪ ಪರಿಚಯ ನಮ್ಮ ಇಲ್ಲಿ ಮಾಡಿಕೊಡುವ ಪ್ರಯತ್ನ ನಡೆದಿದೆ. ಕೈಲಾಸಂರವರು ಅಮರರಾಗಿ ಇಂದಿಗೆ ೨ ವರ್ಷಗಳು ಕಳೆದವು.

ನಮ್ಮ ಕನ್ನಡ ಪ್ರಹಸನ ಪ್ರಪಿತಾಮಹ ಅಂತರ್ಧಾನರಾಗಿ ಎರಡು ವರ್ಷವಾಯಿತು. ಅವರೇ ಒಮ್ಮೆ ಹೇಳಿದ್ದರು— ಸಹೃದಯ ಓದುಗರಿಂದ ನಾನು ಅಪೇಕ್ಷಿಸುವದು ಕೇವಲ ಒಂದು ಕಂಬನಿ ಮಾತ್ರ ಎಂದು. ಅವರು ಜೀವಿಸಿದ್ದಾಗ ನಾನೇನೋ ಹನಿ ಮಿಡಿದು ದುಂಟು. ಆದರೆ ಅದು ಶೋಕದಿಂದಲ್ಲ— ಹಾಸ್ಯಸ್ವಾದನೆಯಿಂದ. ಆದರೆ ಅದೇ ನಾವು ಇಂದೂ ಹನಿ ಹನಿ ಮಿಡಿಯಬೇಕಾಗಿದೆ; ನಮ್ಮನ್ನು ನಗೆಗಡಲಲ್ಲಿ ಮುಳುಗಿಸಿದ ವ್ಯಕ್ತಿಯ ದೀನ ಬಾಳಿಗೆ,ಸೌಖ್ಯವನ್ನು ಕಂಡರಿಯದ ಕಲೆಗಾರನಿಗೆ ಹನಿಮಿಡಿಯಬೇಕಾಗಿದೆ.

ಪ್ರಕಟವಾಗಿರುವ ಅವರ ಕೃತಿಗಳ ಹೆಸರುಗಳನ್ನು ಓದಿ ನಮಗೆಲ್ಲ ಎಷ್ಟೋ ಸಂತಸವಾಗಿತ್ತು. ತಮ್ಮ ಕೃತಿಗಳಿಗೆ ಅವರಿಡುತ್ತಿದ್ದ ಹೆಸರುಗಳಲ್ಲಿಯೇ ಏನೋ ಒಂದು ತರದ ವೈಶಿಷ್ಟ್ಯ, ವೈವಿಧ್ಯ ಇತ್ತು. ಪ್ರಕಟವಾಗದ ಅವರ ಕೃತಿಗಳು ನಮ್ಮ ಕೈಸೇರದಿರುವದು ನಮ್ಮ ದುರದೃಷ್ಟ ಎನ್ನಬೇಕು.

ನಮ್ಮ ನಾಟಕರಂಗಕ್ಕೆ ಕೀರ್ತಿಯನ್ನು ತಂದ ಮಹನೀಯರು ಕೈಲಾಸಂ. ಹಾಸ್ಯವನ್ನೇ ಪ್ರಧಾನವಾಗಿಟ್ಟುಕೊಂಡು ಗಹನ ವಿಷಯಗಳನ್ನು ಚರ್ಚಿಸುವ ಕೌಶಲ ಕೈಲಾಸಂರವರಿಗಿತ್ತು. ಭಾಷಾಪ್ರವೀಣರು ಕೈಲಾಸಂ. ಕನ್ನಡ, ತೆಲಗು, ತಮಿಳು, ಹಿಂದಿ, ಇಂಗ್ಲೀಷ್ ಮುಂತಾದ ಭಾಷೆಗಳೆಲ್ಲ ಅವರಿಗೆ ಬರುತ್ತಿದ್ದವು. ಆಗಾಗ ಸಮಯೋಚಿತವಾಗಿ ತಮ್ಮ ಕನ್ನಡ ಕೃತಿಗಳಿಗೆ ಇತರ ಭಾಷೆಗಳನ್ನು ಲವಣಿಸಿಕೊಂಡು ತಮ್ಮ ಕೃತಿಗಳ ಹಿರಿಮೆಯನ್ನು ಹೆಚ್ಚಿಸುತ್ತಿದ್ದರು. ತಮ್ಮ ಕೃತಿಗಳಲ್ಲಿ ಪ್ರತಿಯೊಂದು ಪಾತ್ರಕ್ಕೂ ಪ್ರಾಶಸ್ತ್ಯವನ್ನಿತ್ತಿದ್ದಾರೆ.

ನೋಟಕರ ಮನಸ್ಸನ್ನು ರಂಜಿಸುವ ನಾಟಕಗಾರ ಕೈಲಾಸಂ, ನಟರೂ ಹೌದು. ವಿಧವೆಯ ಪಾತ್ರ ವಹಿಸುವದರಲ್ಲಿ ಎತ್ತಿದ ಕೈ ಕೈಲಾಸಂ; Purpose ಎಂಬ ಪುಸ್ತಕದಲ್ಲಿ ಅವರು ಬಣ್ಣಿಸಿರುವ ಬಿಲ್ಲಿನ ಅಭ್ಯಾಸವನ್ನು ಅವರೇ ಮಾಡಿ ತೋರಿಸಬೇಕು. ಜೋಲಿ ಕಟ್ಟೆಯಂತೆ ಅವರೇ ತಮ್ಮ "ಪೈಸೆಸ್ಸ್" ಗಳನ್ನು ಹಾರಿಸಿ ತೋರಿಸಬೇಕು! ಅಂದರೆ, ಕೈಲಾಸಂ ಮತ್ತು ಅವರ 'ಕೃತಿಗಳಲ್ಲಿಯ ಪಾತ್ರಗಳು ಬಹಳ ದೂರವಿರುತ್ತಿರಲಿಲ್ಲ.' ತಮ್ಮ ಪಾತ್ರಗಳ ಜೊತೆಯಲ್ಲಿ ತಾವೇ ಬೆರತು ತಮ್ಮ ಅನುಭವಗಳನ್ನು ತಾವು ಕಂಡ ದೃಶ್ಯಗಳನ್ನು ತಮ್ಮ ನೋಟಕರಿಗೂ ಓದುಗರಿಗೂ ತಿಳುಸುತ್ತಿದ್ದರು. ಅವರ ಕೃತಿಗಳಲ್ಲಿ ನಾವು ಕಾಣುವದು ಸಮಾಜದ ಹಿರಿಯ ವ್ಯಕ್ತಿಗಳನ್ನಲ್ಲ; ಸಂಸಾರದ ಹಿರಿಯ ಕೂಸುಗಳನ್ನು. ಕೈಲಾಸಂರವರಷ್ಟೇ ಅವರ ಪಾತ್ರಗಳೂ ವಿಚಿತ್ರ ತರನಾದವು. ನಾಗತ್ತೆ, ಮಾಧು, ಕಿಟ್ಟಿ, ರಂಗೋಲ್ ರಂಗಣ್ಣ, ತಿಪ್ಪಣ್ಣ, ಗಡಸ್ ಖಾನ ಮುಂತಾದ ಪಾತ್ರಗಳು ಸಮಾಜದ ವ್ಯಕ್ತಿಗಳ ಜೀವನವನ್ನೇ ಪ್ರತಿಪಾದಿಸುತ್ತವೆ. ಹಾಗೂ ಒಂದೇ ಪಾತ್ರವನ್ನು ನಾನಾ ಮುಖಗಳಿಂದ ಅಳೆದು ನೋಡಲು ಸಹಾಯಕವಾಗಿದೆ. ಸುಖ-ದುಃಖ ಹಾಸ್ಯ-ವಿಷಾದಗಳು ಹಾಸು ಹೊಕ್ಕುಗಳಂತೆ ಹೆಣೆದುಕೊಂಡಿರುವ ಒಂದು ಸಂಸಾರದ ಚಿತ್ರವನ್ನು ಓದುಗರ ಮುಂದೆ ತಂದು, ಅವರ ಮನ ಮಿಡಿಯುವದರಲ್ಲಿ ಕೈಲಾಸಂರವರನ್ನು ಮೀರಿಸಿದವರಿಲ್ಲ.

ಅವರ ಇಂಗ್ಲೀಷ್ ಭಾಷಾ ಪಾಂಡಿತ್ಯ ಅವರ ಕೃತಿ ಕೃತಿಗಳಲ್ಲೂ ಕಂಡುಬರುತ್ತದೆ; ಅವರ ಪಾಂಡಿತ್ಯವನ್ನು ಅರ್ಥ ಮಾಡಿಕೊಂಡು ಜೀರ್ಣಿಸಿಕೊಳ್ಳುವವರು ವಿರಳ. ಅವರ ವೈಯಕ್ತಿಕ ಕೃತಿ ಕೇವಲ ಕನ್ನಡದಲ್ಲಿ ಮಾತ್ರವಲ್ಲ. ಇತರ ಭಾಷೆಗಳಲ್ಲಿಯೂ ಎದ್ದು ಕಾಣಿದೆ. ಅವರ Purpose; Karna ಎಂಬ ಗ್ರಂಥಗಳನ್ನು ನಾವೆಲ್ಲ ಓದಿದ್ದೇವೆ. Purpose ನಾಟಕದಲ್ಲಿಯಂತೂ ಕೈಲಾಸಂ ತಮ್ಮನ್ನು ತಾವೇ ಮರೆತಿದ್ದಾರೆ. ಬಿಲ್ಲುಗಾರಿಕೆಯ ದೃಶ್ಯಗಳು, ಅರ್ಜುನನ ಅಬ್ಬ ರ ಕೋಪ, ಏಕಲವ್ಯನ ಗುರುಭಕ್ತಿ ಓದುಗರನ್ನು ತನ್ನ ಕಡೆಗೆ ಸೆಳೆದು ಒಯ್ಯುತ್ತದೆ. ಸಂಭಾಷಣೆಯ ಕೌಶಲ ವಸ್ತುಗಳನ್ನು ವಿಶದೀಕರಿಸುವ ಚಾತುರ್ಯ, ಭಾಷೆಯ ಮೇಲೆ ಕೈಲಾಸಂರವರಿಗಿರುವ ಹಿಡಿತ ಇವುಗಳನ್ನು ಎಷ್ಟು ಹೊಗಳಿದರೂ ಸಾಲದು.

ಮಕ್ಕಳ ಸಂಭಾಷಣೆಯನ್ನು ಎಷ್ಟು ಚೆನ್ನಾಗಿ, ಸ್ವಾಭಾವಿಕವಾಗಿ ಕೈಲಾಸಂ ರಚಿಸಬಲ್ಲರು ಎಂಬುದಕ್ಕೆ ಅವರ "ಹಾಳೇ ಕಟ್ಟೋಕ್ಕೊಲೀಸ್" ಎಂಬ ಪುಸ್ತಕವೇ ಸಾಕ್ಷಿ. ದೈವಶ್ರದ್ಧೆ, ವಂಚಕತನ, ಭೂತಗಳಲ್ಲಿಯ ಮೂಢ ನಂಬಿಕೆ ಮುಂತಾದವುಗಳನ್ನು ಚಿತ್ರಿಸಿರುವ "ತಾವರೆ ಕೆರೆ"ಯ ಹೆಗ್ಗಳಿಕೆ ತಾವರೆಕೆರೆಯಷ್ಟೇ ಇರದೆ ಕಾವೇರಿಯಷ್ಟಿದೆ. "ದಡ ಕುಸ್ದು ಬೀಳ್ತಿದ್ರೂ ಕೆರೆ'' ಯೇನೋ ಇದೆಯಂತೆ. ತಾವರೆಕೆರೆ ಮಣ್ಣಿನ ನೀರಿನಲ್ಲಿ ತಾವರೆದಂಟುಗಳು ಎಷ್ಟಿವೆ ಎನ್ನುವದಕ್ಕೆ ಸಾಕ್ಷಿ. "ಈ ಜೋಡೆ ಸೈ ಅಂತ ಬಟ್ಟೆತಿಗ್ದು, ಒಗ್ಗಿದ್ದ ಇಸ್ಮಗಳು, ಈಜೋದ ಮರ್ತು ಮುಳ್ಗೋದ್ನ ಕಲ್ತು ಇನ್ನೂ ಮೇಲಕ್ಬರ್ತಿದ್ದಾರಂತೆ! ಗಡಸ್ ಖಾನ್ ಕಾಳಿಯ ಅಂಗಸೌಷ್ಠವವನ್ನು ನೋಡಿ ಹೇಳುತ್ತಾನೆ. "ಕ್ಯಾ ಅಜ್ ಕಾಳಿಮ್ಮ ಬಹುತ್ ಬದಲ್ಗೆ ಹೈನಾ" ಎಂದು ಮುಂದುವರಿಯುತ್ತ ನಾಚಿ ಹಾಗೇ "ನಿಮ್ಮ ರಾಮು ಕಿಷ್ಟಕೂಚ್ಚಿ ಹಮಾರಾ ಅಲ್ಲಾಕೂಚ್ಚಿ ಬಹುತ್ ಫರಕ್ ಹೈ . . . ಹತ್ತಲೆ ಇಷ್ಟಕ್ಕೈ ಇಲ್ಲ. ನಮ್ಮಲ್ಲಾಗೆ . . . ಸಬ್ಬಿ ಬೊಮ್ಮೋಂಕೆ ಹಿಕ್ಮತ್ ಕೌಂನಾಲೇಕು ಫರಾನೇಕೆಲಿಯೆ" ಎನ್ನುತ್ತಾನೆ. ಕೈಲಾಸಂ ಯಾವ ಮತಕ್ಕೂ ಸೇರಿದವರಲ್ಲ. ಪ್ರಪಂಚದಲ್ಲಿ ಯಾವುದು ಉತ್ಕೃಷ್ಟ ಮತವೋ ಅದೇ ಅವರ ಮತ. ಅವರಲ್ಲಿ ಸ್ಪೃಶ್ಯ ಅಸ್ಪೃಶ್ಯ ಎಂಬ ಭೇದವಿಲ್ಲ; ರಾಮ, ಕೃಷ್ಣ, ಅಲ್ಲಾ, ಕ್ರೈಸ್ತ, ಮುಂತಾದ ಪವಾಡ ವ್ಯಕ್ತಿಗಳೆಲ್ಲರೂ ಕೈಲಾಸಂರವರಿಗೆ ಪೂಜ್ಯರು.

ನೀರಿಗೆ ಹಾರೋಣ ಎಂದು ಹೋಗ್ತಾನೆ ಧೀರ "ಸತ್ಯವನ ಸಂತಾಪದಲ್ಲಿ' ಇನ್ನೇನು ಹಾರ್ಬೇಕು, ಆಗ ಅವನಿಗೆ ಏನೋ ನೆನಪಾಗುತ್ತದೆ. ತನ್ನನ್ನು ತಾನೇ ನೋಡಿಕೊಂಡು, ಮುಳ್ಳು, ಸ್ಲಿಪ್ಪರು ಮುಂತಾದುವುಗಳ ಕಡೆಗೆಲ್ಲಾ ದೃಷ್ಟಿ ಬೀರಿ ಕೊನೆಗೆ Mal of England ಆಗಿರೋ ತನ್ನ ದೇಹಾನ ನೀರಿನಲ್ಲಿ ಮುಳುಗ್ಗೋಬೇಡ ಎಂದು ಬೇರೊಂದು ಉಪಾಯವನ್ನು ಹುಡುಕುತ್ತಾನೆ.

ಕೈಲಾಸಂರವರ ಒಂದೊಂದು ಕೃತಿಗಳಲ್ಲೂ ಹಾಸ್ಯದ ಔತಣ ಮಾತ್ರವೇ ಅಲ್ಲ; ಹಾಸ್ಯದ ಹಿಂದೆ ಹುದುಗಿದ್ದ ವಿಡಂಬನವಿದೆ; ವಿಡಂಬನದ ಹಿಂದೆ ನೀತಿ. ಹೋಂ ರೂಲು, ವೈದ್ಯನ ವ್ಯಾಧಿ, ಸೀಕರ್ಣೆ ಸಾವಿತ್ರಿ, ನಂ ಬ್ರಾಹ್ಮಣ್ಯ, ಸೂಳೆ ಮುಂತಾದ ಒಂದೊಂದು ಪುಸ್ತಕದಲ್ಲಿಯೂ ಕೈಲಾಸಂ ಸಮಾಜ ಜನಜೀವನವನ್ನು ವಿವಿಧ ಕೋನಗಳಿಂದ ಅಳೆದು ನೋಡಿದ್ದಾರೆ. ಕೋಳಿಯ ಜೀವನವನ್ನು ವಿಡಂಗವಾಗಿ ವರ್ಣಿಸಿ ಕೊನೆಗೆ ಹೇಳಿದ್ದಾರೆ— ಜಗಕ್ಕೆ ಸೂಳೆ ಬೇಡ—ಆದರೆ ಸೂಳೆಗಾರಿಕೆ ಬೇಕು ಎಂದು. ಈ ವರ್ತನೆಯನ್ನು ಕಟುವಾಗಿ ಖಂಡಿಸಿದ್ದಾರೆ. ಕೈಲಾಸಂ ಅವರ ಇತ್ತೀಚಿನ ಹೃದಯದ್ರಾವಕ ರುದ್ರನಾಟಕವಿದು.

ಕೈಲಾಸಂರು ಹಿರಿಯ ಸಾಹಿತಿಗಳಾಗಿದ್ದರೂ ಅವರಿಗೆ ಅಹಂಕಾರವೆಂಬುದು ಕುರುಹಾದರೂ ಇರಲಿಲ್ಲ. ತನ್ನ ಕಲೆಯ ಅಂತಸ್ತಿಗೆ ಪ್ರಶಸ್ತಿಯನ್ನು ಅವರು ಕೇಳಿಲ್ಲ. ಪ್ರಶಸ್ತಿಯೆಂದರೇ ಅವರಿಗಾಗದು. ಯಾವ ಸಭೆಗೂ, ಕೂಟಕ್ಕೂ ಅಷ್ಟಾಗಿ ಬರುತ್ತಿರಲಿಲ್ಲ. ಅವರಿಗೆ ನಿರ್ದಿಷ್ಟ ನೆಲೆಯೊಂದಿರಲಿಲ್ಲ. ಕೈಲಾಸಂರವರ ಸ್ನೇಹಿತರ ಸಂಖ್ಯೆಗೆ ಒಂದು ಮಿತಿ ಇಲ್ಲ. ಒಂದೊಂದು ರಾತ್ರಿ ಒಬ್ಬೊಬ್ಬರ ಮನೆಯಲ್ಲಿ ಕಳೆದದಾಯಿತು. ಕೈಲಾಸಂರವರದು ಪರಿವ್ರಾಜಕ ಬಾಳು.

ಕೈಲಾಸಂ ಅವರ ಜೀವನ ಚರಿತ್ರೆಯನ್ನು ಶ್ರೀಯುತ ಅ. ನ. ಕೃಷ್ಣರಾಯರೂ ರಾಜರತ್ನಂರವರೂ ಬರೆದಿದ್ದಾರೆ. ಕೃಷ್ಣರಾಯರ ಪುಸ್ತಕದಲ್ಲಿ ಕೈಲಾಸಂರವರ ಜೀವನಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು ತಿಳಿದು ಬರುತ್ತವೆ. ಪ್ರಕಟವಾಗದ ಕೈಲಾಸಂರವರ ಕೃತಿಗಳನ್ನು ಕುರಿತು ರಾಜರತ್ನಂರವರು ಅವರ ಪುಸ್ತಕಗಳಲ್ಲಿ ಬರೆದಿದ್ದಾರೆ. ಅವರ ಇತ್ತೀಚಿನ "ಕೈಲಾಸಂ ಕೀಚಕ" ಎಂಬುದನ್ನು ಓದಿದರೆ ಕೈಲಾಸಂರವರ ಅಮೋಘ ಕಲ್ಪನೆಯ ಅರಿವು ನಮಗಾಗುತ್ತದೆ. ಕೈಲಾಸಂರವರ ಕಲ್ಪನೆಯಲ್ಲಿ ಕೀಚಕ ಎಂತಹ ಅಮೋಘ ಪ್ರೇಮಿ! ಅವನ ಪ್ರೇಮವನ್ನು ಕೈಲಾಸಂ ಎಷ್ಟು ನಿಪುಣತೆಯಿಂದ ಹೊರಗೆಡಹಿದ್ದಾರೆ! ಯಾರಿಗೆ ತಾನೇ ಹೊಳೆದಿತ್ತು ಅಂತಹ ಕೀಚಕನ ಪಾತ್ರ?

ಕೈಲಾಸಂ ಪ್ರಸಿದ್ಧ ವಾಗ್ಮಿಗಳು. ಪುಸ್ತಕವನ್ನು ನೋಡದೆ, ಕೃತಿಯಲ್ಲಿಯ ಒಂದು ಪದವನ್ನೂ ಬಿಡದೆ ಕೈಲಾಸಂ ತಮ್ಮ ಕೃತಿಗಳನ್ನು 'ಓದು'ತ್ತಿದ್ದರಂತೆ. ಎಂತಹ ಜ್ಞಾಪಕ ಶಕ್ತಿ!

ಕನ್ನಡ ಸಾಹಿತ್ಯದ ಬೆಳವಣಿಗೆಗೆ ಕೈಲಾಸಂ ಎಷ್ಟು ಸಹಾಯಕರಾದರೋ ಅದು ಒಂದು ಸಮಸ್ಯೆ; ಆದರೆ ಇಷ್ಟು ಮಾತ್ರ ನಿಜ. ಕನ್ನಡ ನಾಟಕರಂಗದ ಮೇಲೆ ಹಾಸ್ಯವನ್ನು ತಂದ ಪ್ರಥಮ ವ್ಯಕ್ತಿ ಕೈಲಾಸಂ. ಅಂತಹ ಪ್ರತಿಭಾಶಾಲಿಗೆ ನಾವಿತ್ತ ಕಾಣಿಕೆಯೇನು? ಒಮ್ಮೆ ಕನ್ನಡ ಸಾಹಿತ್ಯಸಮ್ಮೇಳನಕ್ಕೆ ಅಧ್ಯಕ್ಷರಾಗಿ ಚುನಾಯಿಸಿದೆವು; ಇಂದು ಕಣ್ಣೀರಿಡುತ್ತಿದ್ದೇವೆ. ಅವರು ಬೇಡದ ಕಾಣಿಕೆಯನ್ನೇ ಅವರಿಗೆ ನಾವು ಅರ್ಪಿಸಿದ್ದೇವೆ! ಕೈಲಾಸಂರವರ ಹೆಸರು ಕನ್ನಡ ಸಾಹಿತ್ಯದಲ್ಲಿ ಚಿರಾಯುವಾಗಿದೆ ಎಂದರೆ ಅದರಲ್ಲಿ ಅತಿಶಯೋಕ್ತಿಯೇನೂ ಇಲ್ಲ.



ದಿವಂಗತ ಟಿ. ಪಿ. ಕೈಲಾಸಂ

ಪ್ಯಾರೇಲಾಲರು ಕ್ರಾಂತಿಕಾರರೆ?

ಗಾಂಧೀಜಿಯ ಶಿಷ್ಯರಾದ ಶ್ರೀ ಪ್ಯಾರೆಲಾಲರು ಶಾಂತಿದೂತರಾಗಿ ಪೂರ್ವ ಪಾಕಿಸ್ತಾನದಲ್ಲಿ ಹಗಲಿರುಳು ದುಡಿಯುತ್ತಿದ್ದಾರಷ್ಟೆ! ಪೂರ್ವ ಪಾಕಿಸ್ತಾನದ ಅಧಿಕಾರಿಗಳು ಅವರನ್ನು ಛಲನೆಗೆ ಈಡು ಮಾಡುತ್ತಿದ್ದು ಅದರ ಫಲವಾಗಿ ಅಲ್ಲಿಯ ಪರಿಸ್ಥಿತಿಯು ಅತ್ಯಂತ ವಿಕೋಪಕ್ಕೆ ಹೋಗುತ್ತಿರುವದಾಗಿ ತಿಳಿಯುತ್ತದೆ. ಇದಕ್ಕಾಗಿಯೇ ಪೂ. ಪಾಕಿಸ್ತಾನದಿಂದ ಅಸಂಖ್ಯಾತ ಹಿಂದು ನಿರಾಶ್ರಿತರು ಪಶ್ಚಿಮ ಬಂಗಾಲಕ್ಕೆ ಬರುತ್ತಿದ್ದಾರೆಂದೂ ಶ್ರೀ ಪ್ಯಾರೇಲಾಲರ ವಶತಿಯಲ್ಲಿ ಕೆಲವು ಶಸ್ತ್ರಾಸ್ತ್ರಗಳನ್ನು ತಂದಿಟ್ಟು ಅವರು ಪಾಕಿಸ್ತಾನದ ವಿರುದ್ಧ ಕ್ರಾಂತಿ ಹರಡುವ ಪ್ರಯತ್ನದಲ್ಲಿದ್ದರೆಂದೂ ಪೂರ್ವ ಪಾಕಿಸ್ತಾನ ಸರಕಾರವು ಆರೋಪಿಸಿದೆಯೆಂದು ತಿಳಿಯುತ್ತದೆ. ಈ ಬಗ್ಗೆ ಒಂದು ಸಂದರ್ಭದಲ್ಲಿ ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರು, ಶ್ರೀ ಪ್ಯಾರೇಲಾಲರು ಅಲ್ಲಿ ಶಾಂತಿದೂತನ ಕಾರ್ಯದಲ್ಲಿ ತೊಡಗಿರುವರೆಂದೂ ಪೂರ್ವ ಪಾಕಿಸ್ತಾನವು ಅವರ ಮೇಲೆ ಹೊರಿಸಿದ ಆರೋಪಗಳು ಭ್ರಾಮಕವೂ ಮಿಥ್ಯಾಪೂರ್ಣವೂ ಆಗಿವೆಯೆಂದೂ ಹೇಳಿದ್ದರಾಗಿ ವರದಿಯಿದೆ.

ಹೈದರಾಬಾದ

ತಾಲೂಕದಾರರು ಮಿಲಿಟರಿ ಅಧಿಕಾರಿಗಳಿಗೆ, ಡೆ. ತಾಲೂಕದಾರರು ಡೆ. ಅಧಿಕಾರಿಗಳಿಗೆ, ತಹಸೀಲದಾರರು ಸಹಾಯಕ ಅಧಿಕಾರಿಗಳಿಗೆ ಕೂಡಲೇ ಚಾರ್ಜ ಕೊಡಬೇಕೆಂದು ಸರಕಾರೀ ಪ್ರಕಟನೆ ಹೊರಟಿದೆ.

ಡೀಡೀಟಿ

ತಗಣೆ, ಚಿಕ್ಕಾಡು, ಹೇನು, ಸೊಳ್ಳೆ, ಗುಂಗಾಡುಗಳಿಗೆ ಹೊಲಸು ಅಪಾಯಕ್ಕೆ ಆದುದರಿಂದ ಅವು ಅನೇಕ ರೋಗಗಳ ಪ್ರಸಾರಕ್ಕೆ ಕಾರಣವಾಗಿವೆ. ವಿಜ್ಞಾನಿಗಳು ಅವುಗಳ ನಿರ್ಮೂಲನಕ್ಕಾಗಿ ಅನೇಕ ವರ್ಷಗಳಿಂದ ವಿಷಗಳನ್ನು ಹುಡುಕುತ್ತಿದ್ದಾರೆ. ಪ್ರಾಚೀನ ಕಾಲದಿಂದಲೂ ಈ ವರೆಗೂ ಅನುಕೂಲವಾದ ಯಾವ ಔಷಧಿ ಸಿಕ್ಕಿಲ್ಲ; ಆದರೆ ಯುದ್ಧಕಾಲದಲ್ಲಿ ಡೀಡೀಟಿಯ (dichloro-diphanyl trichloroethane) ಪ್ರಸಾರ, ನೇಪಲ್ಸ ಎಂಬ ಪ್ರದೇಶದಲ್ಲಿ ಆದ ಆದರ ಉತ್ತಮೋತ್ತಮ ಪರಿಣಾಮ ಈ ಪ್ರಯತ್ನದಲ್ಲಿ ಅದೊಂದು ಶ್ರೇಷ್ಠ ಮಜಲಾಗಿದೆ. ಆಗ ಅಲ್ಲಿ ಟೈಫಸ್ ಎಂಬ ಭಯಂಕರ ಪಿಡುಗು ಪ್ರಾರಂಭವಾಗಿತ್ತು. ಜನರ ಮೈಮೇಲೆ ಡೀಡೀಟಿಯ ಪುಡಿಯನ್ನು ಸಿಂಪಡಿಸಿದುದರಿಂದ ಈ ಪಿಡುಗಿನ ಕಾರಣವಾದ ಕ್ರಿಮಿಗಳು ಸತ್ತುಹೋಗಿ ಕೇವಲ ಮೂರು ವಾರಗಳಲ್ಲಿ ಪಿಡುಗು ಇಲ್ಲದಾಯಿತು!

ಜರ್ಮನಿಯ ಓಥ್ಮಾರ್ ಝೀಡ್ಲರನು ೧೮೭೪ ರಲ್ಲಿ ಡೀಡೀಟಿಯನ್ನು ಮೊದಲು ತಯಾರಿಸಿದನು. ಆದರೆ ಡೀಡೀಟಿಯು ಕ್ರಿಮಿನಾಶಕವೆಂದು ಸ್ವಿಟ್ಸರ್ಲಂಡದ ಪೌಲಮುಲ್ಲರನೆಂಬವನು ೧೯೩೯ ರಲ್ಲಿ ಮೊದಲು ಕಂಡು ಹಿಡಿದನು. ಈವರೆಗೆ ಅನೇಕ ಕ್ರಿಮಿನಾಶಕಗಳನ್ನು ನೋಡಿ ಒಂದಿಲ್ಲೊಂದು ರೀತಿಯಲ್ಲಿ ಅನನುಕೂಲವೆಂದು ಬಿಟ್ಟುದಾಗಿತ್ತು. ಒಂದೊಂದು ಮನುಷ್ಯನಿಗೆ ವಿಷಕಾರಿ; ಒಂದೊಂದು ಮನುಷ್ಯಚರ್ಮದ ಮೇಲೆ ಕೂಡಲೇ ಚರ್ಮದ ಒಳಗೆ ವೇದನೆ ಕೊಡುತ್ತಿತ್ತು. ಕಡೆಗೆ ಡೀಡೀಟಿಯು ದೈವವಶದಿಂದ ಕಂಡು ಹಿಡಿಯಲ್ಪಟ್ಟು ಅದು ಯಶಸ್ವಿ ಜಂತುನಾಶಕವೂ ಮನುಷ್ಯನಿಗೆ ಅಪಾಯಕಾರಿಯೂ ಎಂದು ಗುರುತಿಸಲ್ಪಟ್ಟಿತು.

ಡೀಡೀಟಿಯನ್ನು Coal-tar-benzene, Chlorine, Alcohal ಮತ್ತು Sulphuric-acid ಗಳ ದೊಡ್ಡ ಪ್ರಮಾಣಗಳಿಂದ ತಯಾರಿಸುತ್ತಾರೆ. ಡೀಡೀಟಿಯು ಬೆಳ್ಳಗೆ ಇರುತ್ತದೆ. ಅದಕ್ಕೆ ವಾಸನೆಯಿಲ್ಲ. ಬಹುಕಾಲ ತಾಳಿಕೆಯುಳ್ಳದ್ದು. ಅಂದರೆ ಅದು ಬಹಳ ಸಾವಕಾಶವಾಗಿ ತನ್ನ ಗುಣಧರ್ಮಗಳನ್ನು ಕಳೆದುಕೊಳ್ಳುತ್ತದೆ. ಕುದಿಯುವ ನೀರಿನಲ್ಲಿಯಾಗಲಿ ಬೆಳಕಿನ ಪರಿಣಾಮದಿಂದಾಗಲಿ ಅದು ತನ್ನ ಶಕ್ತಿಯನ್ನು ಕಳೆದುಕೊಳ್ಳುವದಿಲ್ಲ. ಮನುಷ್ಯನ ಚರ್ಮದ ಮೇಲೆ ಅದು ಕೆಟ್ಟ ಪರಿಣಾಮ ಮಾಡುವದಿಲ್ಲ. ದೊಡ್ಡ ಪ್ರಮಾಣದಿಂದ ಹೊಟ್ಟೆಯಲ್ಲಿ ತೆಗೆದುಕೊಂಡರೆ ಮಾತ್ರ ವಿಷವಾಗುತ್ತದೆ. ಸಣ್ಣ ಪ್ರಮಾಣದಲ್ಲಿ ಮನುಷ್ಯನ ಹೊಟ್ಟೆಯಲ್ಲಾಗಲಿ ದನದ ಹೊಟ್ಟೆಯಲ್ಲಾಗಲಿ ಹೋದರೆ ಕೆಡುಕಾಗುವದಿಲ್ಲ. ಆದರೆ ಕ್ರಿಮಿಗಳ ವಿಷಯದಲ್ಲಿ ಪರಿಣಾಮ ಬೇರೆ. ಡೀಡೀಟಿಯ ಒಂದು ಕಣ ಕ್ರಿಮಿಯ ದೇಹಕ್ಕೆ ತಾಕಿದರೆ ಅದು ಅದರ ದೇಹದಲ್ಲಿ ಸೇರಿ ಅಕ್ಷಣ ಆ ಕ್ರಿಮಿಯನ್ನು ಸಾಯಿಸುತ್ತದೆ.

ಮನೆಯ ಗೋಡೆಗಳ ಮೇಲೆ ಸಿಂಪಡಿಸುವದರಿಂದ ೨-೩ ತಿಂಗಳುಗಳ ವರೆಗೆ ಅಲ್ಲಿ ಕೂಡ್ರುವ ನೊಣಗಳೆಲ್ಲಾ ಸಾಯುತ್ತವೆ. ಹಾಸಿಗೆಗಳಿಗೆ ನೂರಕ್ಕೆ ಹತ್ತರಷ್ಟಿರುವ ಡೀಡೀಟಿಯನ್ನು ಸಿಂಪಡಿಸುವದರಿಂದ ಮೂರು ತಿಂಗಳಿಗೂ ಹೆಚ್ಚು ಕಾಲ ತಗಣೆಗಳಾಗುವದಿಲ್ಲ. ಪೋಷಾಕುಗಳಿಗೆ ಡೀಡೀಟಿಯ ಧೂಳು ಸಿಂಪಡಿಸುವದರಿಂದ ೬ ರಿಂದ ೮ ವಾರ ಹೇನು, ಕೂರಿ, ಚಿಕ್ಕಾಡುಗಳಾಗುವದಿಲ್ಲ. ಈ ಅವಧಿಯಲ್ಲಿ ೬-೭ ಸಾರೆ ಅರಿವೆಗಳನ್ನು ಒಗೆಯಲಿಕ್ಕೆ ಕೊಟ್ಟರೂ ಡೀಡೀಟಿಯ ಶಕ್ತಿ ಹ್ರಾಸವಾಗುವದಿಲ್ಲ. ಕೊಳಚೆಯ ಗುಂಡಿಗಳಲ್ಲಿ ಡೀಡೀಟಿಯನ್ನು ಸಿಂಪಡಿಸುವದರಿಂದ ಮಲೇರಿಯಕ್ಕೆ ಕಾರಣವಾದ ಗುಂಗಾಡುಗಳ ನಾಶವಾಗುತ್ತವೆ. ಕೋಳಿಯ ಮೈಮೇಲಿನ ಹೇನುಬೆಳೆಗಳ ರೋಗಗಳಿಗೆ ಕಾರಣವಾದ ಕೆಲವು ಹುಳುಗಳು ಡೀಡೀಟಿಯಿಂದ ನಾಶವಾಗುತ್ತವೆ. ಒಳ್ಳೆಯ ಕೆಲಸದ ಜೊತೆ ಕೆಲ ಅಪಾಯಕರ ಕೆಲಸವು ನಡೆಯದಂತೆ ನೋಡಿಕೊಳ್ಳಬೇಕು. ಉದಾಹರಣೆಗೆ ಜೇನು ಹುಳು ಡೀಡೀಟಿಯಿಂದ ಸಾಯುತ್ತದೆ. ಎಚ್ಚರವಿಂದಿರಬೇಕು.

ಒಟ್ಟಿನಲ್ಲಿ ಡೀಡೀಟಿಯು ಒಳ್ಳೇ ಪ್ರಗತಿಯುತ ಶೋಧವಾಗಿದೆ. ಅದರೂ ವಿಜ್ಞಾನಿಗಳು ಇನ್ನೂ ಒಳ್ಳೆಯ ಕ್ರಿಮಿನಾಶಕಕ್ಕಾಗಿ ಶ್ರಮಿಸುತ್ತಲೇ ಇದ್ದಾರೆ. ಪ್ರಗತಿಪರ ವಾಚಕರ ಕೊನೆಯುಂಟೇ?

—ಕೃ. ಗು. ಜೇರಳ

ಶಾಂತಿಕಾಲದ ರಣರಂಗಗಳು

……………ಲೇ— ಶ್ರೀ. ಕೆ. ಎ. ಶೇಖ, ಪಾಚ್ಛಾಪುರ ……………



ಟ್ರೂಮನ್

ಜಗತ್ತು ಮತ್ತೆ ಯುದ್ಧದ ಬಾಗಿಲಲ್ಲಿ ನಿಂತಿದೆ. ಯುದ್ಧವು ಒಪ್ಪಂದದ ನಂತರ ನಿಲ್ಲುವದು ನಮಗೆ ಗೊತ್ತಿದ್ದರೂ, ಒಪ್ಪಂದದ ನಂತರ ಯುದ್ಧವಾಗುವದನ್ನು ನೋಡಿದ್ದೇವೆ. ಹೀಗೆಯೇ ಒಂದನೆಯ ಮಹಾಯುದ್ಧವಾಯಿತು. ಈಗ ಮೂರನೆಯದು ರಾಷ್ಟ್ರಸಂಘದ ಬಾಗಿಲ ಬಡಿಯಹತ್ತಿದೆ.

ರಾಷ್ಟ್ರಸಂಘವು ಶಾಂತತೆಯ ಸಲುವಾಗಿ ರಚಿಸಿದ ಗುಡ್ಡದಂಥ ದೊಡ್ಡ ತತ್ವಗಳನ್ನು ರಣದೇವಿಗೆ ಬಲಿಕೊಡುವ ಪ್ರಸಂಗ ಬಂದಿದೆ. ಐದು ದೊಡ್ಡ ರಾಷ್ಟ್ರ ಮತ್ತು ಐವತ್ತೊಂದು ಸಣ್ಣ ರಾಷ್ಟ್ರಗಳು ಸೇರಿದರೂ ಅದನ್ನು ಉಳಿಸಲು ಆಗದಾಗಿದೆ.

ಹಿಟ್ಲರ, ಮುಸೋಲಿನಿ, ಟೋಜೋ ಅವರನ್ನು ಜಗತ್ತು ಇನ್ನೂ ಮರೆತಿಲ್ಲ. ಅವರು ಅಳಿದುಹೋದರೂ ಅವರ ಸ್ಥಳದಲ್ಲಿ ಟ್ರೂಮನ್, ಸ್ಟಾಲಿನ್, ಅಟ್ಲಿಯವರು ಬಂದು ಕೂತಂತೆ ಭಾಸವಾಗಹತ್ತಿದೆ. ಎರಡನೆಯ ಜಾಗತಿಕ ಯುದ್ಧದ ಮುಂದಾಳುಗಳು ಅವರಾಗಿದ್ದಾರೆ. ಮೂರನೆಯ ಯುದ್ಧಕ್ಕೆ ಇವರಾಗುವ ಸಂಭವನಿದೆ.

ಎರಡನೆಯ ಜಾಗತಿಕ ಯುದ್ಧದ ಮುಂಚೆ, ದೊಡ್ಡ ರಾಷ್ಟ್ರಗಳಲ್ಲಿ ಕೆಳಗೆ ಬರೆದಿರುವ ಮೂರು ಮಾತುಗಳ ಬಗ್ಗೆ ಜಗ್ಗಾಟವಿತ್ತು, ಅವು:— (೧) ಸೈನ್ಯ ಮತ್ತು ಅದರ ಸಾಮಗ್ರಿಯಲ್ಲಿ ಕಡಿತ— (೨) ವಸಾಹತುಗಳನ್ನು ಹಂಚಿಕೊಳ್ಳುವದು (೩) ಸಣ್ಣ ರಾಷ್ಟ್ರಗಳನ್ನು ತಂತಮ್ಮ ಗುಂಪಿನಲ್ಲಿ ಸೇರಿಸಿಕೊಳ್ಳುವದು.

ಈಗ ಇವೇ ಮೂರು ಮಾತುಗಳ ಬಗ್ಗೆ ದೊಡ್ಡ ರಾಷ್ಟ್ರಗಳಲ್ಲಿ ತಿಕ್ಕಾಟ ನಡೆದಿದೆ.

ಎರಡು ಮಹಾಯುದ್ಧಗಳ ಹೊಡೆತದಿಂದ ಜಜ್ಜಲ್ಪಟ್ಟು ಜಗತ್ತು ಮೂರನೆಯ ಯುದ್ಧದ ಶನಿರೂಪ ನೋಡಲು ಸಹ ಇಚ್ಛಿಸುವದಿಲ್ಲ. ಜಗತ್ತಿನ ಸಾಮಾನ್ಯ ಜನತೆಯ ಇಚ್ಛೆಯಾದರೂ ಇದೇ ಆಗಿದೆ.

ಆದರೆ ಜಗತ್ತಿನ ಮುಂದಾಳುಗಳು ಮಾತ್ರ ಅವರ ಮೇಲೆ ಯುದ್ಧದ ಹೊಣೆಯನ್ನು ಹೊರಿಸಲು ಹಾತೊರೆಯುತ್ತಿರುವರು, ಎರಡನೆಯ ಜಾಗತಿಕ ಯುದ್ಧ ಮುಗಿದು ಎರಡು ಪಕ್ಷಗಳಾಗಿ ಹೋದರೂ ಅವರವರ ಸೈನ್ಯ ಹಾಗೆಯೇ ಇದೆ. ಶಸ್ತ್ರಸಂಗ್ರಹ ನಡೆದೇ ಇದೆ. ಅಂತೇ ನಾವು ಮೂರನೆಯ ಮಹಾಯುದ್ಧವನ್ನಾಡುವ ಎರಡು ಬಣಗಳು ತಮ್ಮ ಎರಡು ಕಣಗಳನ್ನು ರಚಿಸುತ್ತವೆ ಎಂದು ಹೇಳುವದು. ಅವೇ ಒಂದು ರಶಿಯದ ಕಣ. ಇನ್ನೊಂದು ಅಮೇರಿಕದ ಕಣ.

ಎರಡು ಜಗತ್ತು

ವಿಶ್ವದ ಎರಡು ದೊಡ್ಡ ರಾಷ್ಟ್ರಗಳು ಆ ಸಣ್ಣ ರಾಷ್ಟ್ರಗಳ ತಲೆಯ ಮೇಲೆ ಸೈನ್ಯದ ಕುಣಿತ ನಡೆಯಿಸಿರುತ್ತವೆ. ಪೇಕಿಗ್ನದಿಂದ ಬರ್ಲಿನ ವರೆಗೆ ಇವರ ಕೈಚಳಕ ಸಾಗಿದೆ. ಒಂದು ದೇಶದ ರುಂಡ ಕತ್ತರಿಸಿದರೆ, ಇನ್ನೊಂದು ದೇಶವನ್ನು ನಡುವೇ ಬೇರೆ ಮಾಡಲಾಗಿದೆ. ನಮ್ಮ ಕಣ್ಣೆದುರಿನಲ್ಲಿ ಚೀನ, ಕೋರಿಯಾ, ಇಂಡೊನೇಶಿಯ, ಮಲಯ ಬ್ರಹ್ಮದೇಶ, ಪಾಲಿಸ್ತಾನ, ಗ್ರೀಸ, ಯುಗೋಸ್ಲಾವಿಯಾ ಮತ್ತು ಜರ್ಮನಿಗಳಲ್ಲಿ ಇದೇ ತಾಲೀಮು ನಡೆದಿದೆ. ದೂರವೇಕೆ? ಹಿಂದ—ಪಾಕಿಸ್ತಾನಗಳ ಭಾಗಗಳಲ್ಲಿ ಇದೇ ಚಿತ್ರ ನೋಡಬಹುದು.

ಈ ಎರಡೂ ರಾಷ್ಟ್ರಗಳ ಯುದ್ಧದ ನಕಾಶೆಯನ್ನು ನೋಡಿದಲ್ಲಿ ಮುಂಬರುವ ಯುದ್ಧದ ಎರಡು ದೊಡ್ಡ ಕಣಗಳು ಒಡೆದು ಕಾಣಿಸುತ್ತವೆ. ಒಂದು ಏಶಿಯದ ಕಣ. ಮತ್ತೊಂದು ಯುರೋಪಿನ ಕಣ. ಇವುಗಳನ್ನು ನಾವು ಸ್ವಲ್ಪ ವಿಸ್ತಾರವಾಗಿ ಅವಲೋಕಿಸುವಾ.

ಏಶಿಯದ ಕಣದ ಬಲಭಾಗ:— ಜಪಾನು ಮತ್ತು ಚೀನ (ಮಂಚೂರಿಯ, ಕೋರಿಯ) ಇರುವವು.

ಮಧ್ಯಭಾಗ:— ಪಾಕಿಸ್ತಾನ, ಕಾಶ್ಮೀರ, ಚೀನ, ತುರ್ಕಸ್ತಾನಗಳು—

ಯುರೋಪಿನ ಕಣ- ದಾರ್ಡನೆಲ್ಸ ಮತ್ತು ಗ್ರೀಸಗಳಿಂದ ಆರಂಭವಾಗಿ, ಬಾಲ್ಕನ್ ರಾಷ್ಟ್ರಗಳಲ್ಲಿ ಹಾಯ್ದು ಬರ್ಲಿನ, ದಾಂಜಿಗದ ವರೆಗೆ ಹೋಗಿರುವದು. ಈ ಕಣಗಳ ಸುತ್ತುಮುತ್ತಲಿನ ದೇಶವನ್ನು ತಮ್ಮ ಕಡೆಗೆ ಎಳೆದುಕೊಳ್ಳುವ ತಂತ್ರ ಕುತಂತ್ರಗಳು ಅವ್ಯಾಹತವಾಗಿ ಸಾಗಿವೆ. ಇನ್ನು ಪ್ರತಿಯೊಂದು ಕಣದ ಬಗ್ಗೆ ಸ್ವಲ್ಪ ವಿಚಾರಿಸೋಣ.

ಏಶಿಯದ ಸೂಕ್ಷ್ಮಸ್ಥಾನಗಳು

ಚೀನ:- ಪೂರ್ವಕಣದ ಮೊದಲನೆಯ ರಣರಂಗವು ಚೀನ ಚೀನದ ಭಾಗವಾದ, ಮಂಚೂರಿಯ, ಮತ್ತು ಅದರ ಸುತ್ತಮುತ್ತಲಿನ ದೇಶ. ಜಪಾನು ಅಮೇರಿಕೆಯ ಜನರಲ್ ಮೆಕಾರ್ಥರರ ಕೈಯಲ್ಲಿಯ. ಆದರೆ ಮಂಚೂರಿಯ ಕೋರಿಯಗಳಲ್ಲಿ ಇವರಿಬ್ಬರ ಜಗ್ಗಾಟ ಜೋರಿನಲ್ಲಿದೆ. ಇದರ ಪರಿಣಾಮ ಏಶಿಯದ ಬಲಭಾಗದ ಕಣದ ಮೇಲೆ ಆಗದೆ ಇರದು.

ಚೀನವು ಜಗತ್ತಿನಲ್ಲೆಲ್ಲ ದೊಡ್ಡ ದೇಶ. ವಿಸ್ತಾರದಲ್ಲಾಗಲಿ ಜನಸಂಖ್ಯೆಯಲ್ಲಾಗಲಿ ಅದನ್ನು ಸರಿಗಟ್ಟುವ ದೇಶ ಬೇರೊಂದಿರಲಾರದು. ಅವರ ಸಂಸ್ಕೃತಿಯು ಪ್ರಾಚೀನ; ಆದರೆ. ಅವರು ಒಂದೇ ಮಂಗೋಲಿಯನ್ ಕುಲದವರು. ೧೯೧೧ ಲ್ಲಿ ಆಧುನಿಕ ಚೀನದ ತಳಹದಿ ಇಡಲಾಯಿತು. ಆದರೆ ಅದಕ್ಕೆ ಇನ್ನೂ



ಸ್ಟಾಲಿನ್

ಶಾಂತಿ ದೊರೆತಿಲ್ಲ. ಮೊದಲು ಜಪಾನರಿಂದ ಮತ್ತು ಈಗ ಕಮ್ಯುನಿಸ್ಟರಿಂದ ಅದು ಯುದ್ಧದಲ್ಲಿ ನರಳಬೇಕಾಗಿದೆ. ೧೯೪೫ರಲ್ಲಿ ಜಪಾನು ಸೋತಾಗ ಸೈಬೀರಿಯದಿಂದ ನುಗ್ಗಿ ರಶಿಯನ್ ಸೈನ್ಯವು ಜಪಾನಿನಲ್ಲಿದ್ದ ಈ ಎಲ್ಲ ಚೀನೀ ಪ್ರದೇಶವನ್ನು ವಶಪಡಿಸಿಕೊಂಡಿತು. ಮುಂದೆ ಯುಕ್ತರಾಷ್ಟ್ರಸಂಘದ ಒತ್ತಾಯದಿಂದ ರಶಿಯವು ತನ್ನ ಸೈನ್ಯವನ್ನು ಹಿಂತೆಗೆದುಕೊಂಡರೂ ಅಲ್ಲಿನ ಕಮ್ಯುನಿಸ್ಟರನ್ನು ಸಂಘಟಿಸಿ ಶಸ್ತ್ರಾಸ್ತ್ರಗಳನ್ನು ಒದಗಿಸಿ ಹೊರಟುಹೋಯಿತು.

ಸ್ವತಂತ್ರ ಚೀನವು ಅಮೇರಿಕನ್ನರ ನೆರಳಿನಲ್ಲಿದೆ. ಕಮ್ಯುನಿಸ್ಟರ ಚೀನವು ರಶಿಯದ ಹಿಡಿತದಲ್ಲಿದೆ. ಎರಡೂ ಪಂಗಡದವರು ಯುದ್ಧ ಮಾಡಿ ಮಾಡಿ ಬಲಹೀನರಾಗಿದ್ದಾರೆ. ಆದರೂ ಅವರಿಗೆ ಎರಡೂ ಬಣಗಳಿಂದ ಸಹಾಯ ಸಿಗುತ್ತಲೇ ಇದೆ. ಒಬ್ಬರ ತಲೆಯ ಮೇಲೆ ಅಮೇರಿಕನ್ ಡಾಲರಗಳ ಸುರಿಮಳೆಯಾದರೆ ಇನ್ನೊಬ್ಬರು ರಶಿಯದ ಭಾಂಡಾರದ ಮೇಲೆ ಕುಣಿಯುಹತ್ತಿದ್ದಾರೆ.

ಕೋರಿಯ

ಏಶಿಯದಲ್ಲಿ ಇದು ಎರಡನೆಯ ರಣರಂಗ. ಮಂಚೂರಿಯದಂತೆ ಕೊರಿಯ ರಾಜಕೀಯ ಮತ್ತು ಸೈನ್ಯದ ದೃಷ್ಟಿಯಿಂದ ಎರಡೂ ರಾಷ್ಟ್ರಗಳಿಗೆ ತಿಮಹತ್ವದ ಸ್ಥಾನವಾಗಿದೆ. ಇದು ಮಂಚೂರಿಯದ ದಕ್ಷಿಣಕ್ಕೆ ಜಪಾನಿನ ಮೇಲೆ ಈಗ ಅಮೇರಿಕೆಯ ಹಿಡಿತವಿದೆ. ಯುದ್ಧಕಾಲದಲ್ಲಿ ಜಪಾನದ ಕಡೆಯಿಂದ, ಚೀನ, ಮಂಚೂರಿಯ ರಶಿಯದ ಪೂರ್ವ ಭಾಗಗಳ ಮೇಲೆ ಏರಿಹೋಗಲು ಕೋರಿಯ ಮೊದಲನೆಯ ಸಂರಕ್ಷಕ ಕೋಟೆಯಾಗುವಂತಿದೆ. ಅಂತೇ ಇದಕ್ಕೆ ಇಷ್ಟು ಮಹತ್ವ ಬಂದಿದೆ. ಕೋರಿಯ ಜಪಾನಿನ ಸ್ವಾಧೀನದಲ್ಲಿತ್ತು. ಜಪಾನವು ಅಪಜಯ ಹೊಂದಿದ್ದೇ ತಡ, ಉತ್ತರದಿಂದ ರಶಿಯ ದಕ್ಷಿಣದಿಂದ ಅಮೇರಿಕೆಗಳು ಒಳಹೊಕ್ಕವು. ಈ ಪ್ರಕಾರ ಕೊರಿಯ ಇಬ್ಭಾಗವಾಯಿತು. ಜಪಾನಿನಿಂದ ಸ್ವತಂತ್ರವಾದರೂ ರಶಿಯ ಅಮೇರಿಕೆಗಳ ಗುಲಾಮವಾಯಿತು. ಮುಂಬರುವ ಯುದ್ಧದಲ್ಲಿ ಕೋರಿಯಾ ಒಂದು ಯುದ್ಧ ಕೇಂದ್ರವಾಗಿ ಜಪಾನ, ಚೀನ, ಪೂರ್ವ ರಶಿಯದ ಮೇಲೆ ಪರಿಣಾಮ ಮಾಡದೇ ಬಿಡಲಿಕ್ಕಿಲ್ಲ.

ಇಂಡೊನೇಶಿಯ

ಏಶಿಯದ ಮೂರನೆಯ ರಣರಂಗವಿದು. ೧೯೪೫ರಲ್ಲಿ ಜಪಾನಿನಪತನವಾದಾಗ ಸ್ವಾತಂತ್ರ್ಯವನ್ನು ಸಾರಿ ಪ್ರಜಾರಾಜ್ಯವನ್ನು ಸ್ಥಾಪಿಸಿದ ಇಂಡೊನೇಶಿಯದಲ್ಲಿ ರಶಿಯದ ವರ್ಚಸ್ಸು ಕೂಡಬಹುದೆಂಬ ಭಯದಿಂದ ಅಂಗ್ಲೋ ಅಮೇರಿಕನರು ಅದರ ಹಳೆ ಒಡೆಯರಾದ ಡಚ್ಚರಿಗೆ ಸಹಾಯ ಮಾಡಿ ಆ ಪ್ರದೇಶವನ್ನು ತಿರುಗಿ ಸಾಮ್ರಾಜ್ಯಶಾಹಿಯ ರೂಪದಲ್ಲಿ ಇಡಲು ಪ್ರಯತ್ನ ಮಾಡಿದರು. ಎಷ್ಟೋ ರಕ್ತಪಾತದ ನಂತರ ಇಂಡೊನೇಶಿಯದ ಸ್ವಾತಂತ್ರ್ಯವನ್ನು ಮನ್ನಿಸಬೇಕಾಗಿ ಬಂದರೂ ಭೇದನೀತಿಯಿಂದ ಇಂಡೊನೇಶಿಯದಲ್ಲಿ ಹಲವು "ರಾಜ್ಯ"ಗಳನ್ನು ಸೃಷ್ಟಿಸುವ ಹಂಚಿಕೆ ಹೂಡಿದ್ದಾರೆ ಅಲ್ಲೀಗ ಕಮ್ಯುನಿಸ್ಟರ ಪ್ರಭಾವ ಹೆಚ್ಚಾಗಿ ಪ್ರಜಾರಾಜ್ಯದ ವಿರುದ್ಧ ದಂಗೆ ನಡೆದಿದೆ. ಹೀಗೆ ಒಂದೆಡೆ ರಶಿಯನ್



ಅಟ್ಲಿ

ಇನ್ನೊಂದೆಡೆ ಅಮೇರಿಕನ್ ವರ್ಚಸ್ಸಿನ ಜಗ್ಗಾಟ ಅಲ್ಲಿಯೂ ನಡೆಸಿದೆ.


ಮಲಯ

ಈಗ ರಶಿಯ ಮಲಯದ ಕಡೆಯಿಂದ ಹಿಂದುಸ್ಥಾನ ಇರಾಣಗಳಲ್ಲಿಯ ಅಮೇರಿಕನ್ ಪಕ್ಷಪಾತಿಗಳನ್ನು ಹೆದರಿಸಹತ್ತಿದೆ. ಮಲಯ ಬ್ರಹ್ಮದೇಶಗಳಲ್ಲಿ ಮಿತ್ರ ರಾಷ್ಟ್ರಗಳು ಜಯಪಡೆದ ನಂತರ ಮಲಯದಲ್ಲಿ ಅರಾಜಕತೆ ತಲೆಎತ್ತಿದೆ. ಕೊಲೆ, ಸುಲಿಗೆಗಳಿಗೆ ಎಣೆಯಿಲ್ಲ, ಇದೆಲ್ಲ ಕಮ್ಯುನಿಸ್ಟರ ಕಾರಸ್ಥಾನ. ಅವನ್ನು ಸದೆಬಡೆಯಲು ಬ್ರಿಟಿಶರ ಉಚ್ಚ ಸೇನೆಯು ಅಲ್ಲಿ ತೊಡಗಿರುತ್ತದೆ. ನೇಪಾಳದಿಂದ ಗುರ್ಖಾ ಸೈನ್ಯ ತರಲಾಗಿದೆ. ಅಂತೂ ಅಲ್ಲಿ ಅಂಗ್ಲೋ-ರಶಿಯನ್ ಜಗ್ಗಾಟ ನಡೆದಿದೆ.

ಬ್ರಹ್ಮದೇಶ

ಇಂಗ್ಲೀಷರು ಬ್ರಹ್ಮದೇಶಕ್ಕೆ ಸ್ವತಂತ್ರತೆಕೊಟ್ಟರು ಬ್ರಹ್ಮೀಯರು ಬ್ರಿ. ಸಾಮ್ರಾಜ್ಯದಿಂದ ಸಹ ಹೊರಬಿದ್ದಿರುತ್ತಾರೆ. ಇದರಿಂದ ಅಲ್ಲಿ ಕಮ್ಯುನಿಸ್ಟರಿಗೆ ಬಂದು ಕೂಡಲು ಅನುವು ಸಿಕ್ಕಂತಾಗಿದೆ. ಸ್ವಾತಂತ್ರ್ಯ ಸಿಕ್ಕನಂತರ ಅಲ್ಲಿಯ ಶ್ರೇಷ್ಠ ಮುಂದಾಳುಗಳಾದ ಅಂಗಸಾನರ ಮತ್ತು ಪ್ರಥಮ ಮಂತ್ರಿಮಂಡಳದ ಅಮಾನುಷ ಕೊಲೆ ಮಾಡಲಾಯಿತು. ಕಮ್ಯುನಿಸ್ಟರಿಗೆ ಈಗ ಅನುಕೂಲ ವಾತಾವರಣ ಉಂಟಾಗಿದೆ. ಅವರು ಬಂಡೆಬ್ಬಿಸಿದ್ದಾರೆ.

ಈ ಎಲ್ಲ ಸಂಗತಿಗಳಿಂದ, ಹಿಂದುಸ್ತಾನವನ್ನು ಇಬ್ಭಾಗಿಸಿ ಪಾಕಿಸ್ತಾನ ನಿರ್ಮಿಸುವ ಅಂಗ್ಲೋ ಅಮೇರಿಕನ ಉದ್ದೇಶವು ಒಡೆದುಕಾಣುವದು.



ಪಂ. ನೆಹರು

ರಶಿಯ ತನ್ನ ವರ್ಚಸ್ಸಿನ ಸರಪಳಿಯನ್ನು ಮಂಚೂರಿಯ, ಕೋರಿಯ, ಇಂಡೊನೇಶಿಯ, ಮಲಯ ಮತ್ತು ಬ್ರಹ್ಮದೇಶಗಳಲ್ಲಿ ಹಾಯಿಸಿ, ಪೂರ್ವ ಮತ್ತು ದಕ್ಷಿಣ ಹಿಂದುಸ್ತಾನದ ವರೆಗೆ ಬೆಳೆಸಿರುತ್ತದೆ. ಸಯಾಮ, ವಿಟನಾಮ, ಆಸಾಮ, ಬಂಗಾಲಗಳಲ್ಲಿ ಅವರ ಗುಪ್ತ ಚಟುವಟಿಕೆಗಳು ನಡೆದಿವೆ. ಅಮೇರಿಕನ್ನರಿಗೆ ಹಿಂದುಸ್ತಾನದ ಬಗ್ಗೆ ಸಂಶಯಇದ್ದೇ ಇದೆ. ಕಾಶ್ಮೀರ, ಮತ್ತು ಹೈದರಾಬಾದದ ಪ್ರಶ್ನೆಗಳಬಗ್ಗೆ ರಾಷ್ಟ್ರಸಂಘದಲ್ಲಿ ನಡೆದಿರುವ ನಾಟಕವೇ ಇದಕ್ಕೆ ಸಾಕ್ಷಿ.

ಇನ್ನು ಏಶಿಯದ ಪಶ್ಚಿಮಕ್ಕೆ ಹೋಗುವಾ ಮುಂಬರುವ ಮಹಾಯುದ್ಧವು ಇಸ್ಲಾಮೀ ರಾಷ್ಟ್ರಗಳಲ್ಲಿ ಆಗುವದರಲ್ಲಿ ಸಂಶಯವಿಲ್ಲ. ತುರ್ಕಿ, ಇರಾಣ, ಅಫಗಾನಿಸ್ತಾನ, ಏಶಿಯಾಮೈನರ, ಇರಾಕ, ಇಜಿಪ್ತ, ಸೌದಿ ಅರೆಬಿಯ ಮತ್ತು ಪಾಲಿಸ್ತಾನ, ಈ ಎಲ್ಲ ದೇಶಗಳು ಆ ಗಂಡಾಂತರದಲ್ಲಿ ಬರಲೇಬೇಕು. ಹಿಂದ—ಪಾಕಿಸ್ತಾನಗಳನ್ನು ಸ್ವತಂತ್ರ ಮಾಡುವಾಗ ಅಂಗ್ಲೋ ಅಮೇರಿಕನ್ನರ ಎರಡು ಉದ್ದೇಶಗಳು ಕಂಡುಬರುವದು. ಒಂದು ಚೀನ ಹಿಂದುಸ್ತಾನಗಳ ನೇತೃತ್ವದಲ್ಲಿ ಅತಿಪೂರ್ವದ ರಾಷ್ಟ್ರಗಳನ್ನು ಸಂಘಟಿಸುವದು, ಎರಡು ತುರ್ಕ, ಪಾಕಿಸ್ತಾನಗಳ ಮುಂದಾಳುತನದಲ್ಲಿ ಇಸ್ಲಾಮೀ ರಾಷ್ಟ್ರಗಳ ಗುಂಪನ್ನು ತಯಾರಿಸುವದು ಅಂದರೆ, ಈ ಎರಡೂ ಗುಂಪುಗಳು ರಶಿಯದ ಪ್ರಥಮ ಹಲ್ಲೆಯನ್ನು ತಡೆಹಿಡಿಯಬೇಕು. ನಂತರ ಅಮೇರಿಕನ್ನರು ಸಾವಧಾನದಿಂದ ರಶಿಯದ ಮೇಲೆ ಪ್ರತಿ ಹಲ್ಲೆ ಮಾಡುವದು- ಇಸ್ಲಾಮೀ ದೇಶಗಳು ಅಮೇರಿಕನ್ನರ ಕೈಯಲ್ಲಿವೆ.

ರಶಿಯ ಇದಕ್ಕೆ ಉಪಾಯ ಹುಡುಕಿರುತ್ತದೆ. ಇಟಲಿಯ ವಸಾಹತುಗಳಾದ ಸೋಮಾಲಿಲ್ಯಾಂಡ, ಲಿಬೇರಿಯಾ, ತ್ರಿಪೋಲಿ, ಲಿಬಿಯಾ, ಮೊದಲಾದವುಗಳ ಪ್ರಶ್ನೆ ಬಿಡಿಸುವಾಗ ಅರಬರಿಗೆ ಅಸಮಾಧಾನವಾಗುವಂತೆ ಮಾಡುವ ಪ್ರಯತ್ನ ರಶಿಯನ್ನರದು ನಡೆದಿದೆ. ವಸಾಹತುಗಳನ್ನು ಇಟಲಿಗೆ ತಿರುಗಿಕೊಡಲಿಲ್ಲ, ಅಥವಾ ಅವುಗಳನ್ನು ಇಟಲಿ, ಬ್ರಿಟಿಶ, ಅಬಿಸೀನಿಯಗಳಲ್ಲಿ ಹಂಚಲಿ, ಈ ಎರಡೂ ಸಂಗತಿಗಳಿಂದ ಅರಬರಿಗೆ ಅಸಮಾಧಾನವಾಗುವದರಲ್ಲಿ ಸಂದೇಹವಿಲ್ಲ. ಇದರ ಲಾಭ ಸಹಜವಾಗಿ ರಶಿಯಕ್ಕೆ ಹೋಗುವದು. ಒಂದು ವೇಳೆ, ಇದಾಗದಿದ್ದರೆ. ಈ ವಸಾಹತುಗಳು ರಾಷ್ಟ್ರಸಂಘದ ಅಧೀನದಲ್ಲಿರಬೇಕು. ಅಂದರೆ ತಾನೂ ಅದರಲ್ಲಿ ಇದ್ದುಕೊಂಡು ಅರಬ ದೇಶದಲ್ಲಿ ತನ್ನ ಕೈವಾಡ ಸಾಗಿಸಲು, ಅನುವು ದೊರೆಯುವದು.

ಪಾಲಿಸ್ತಾನ

ಪಾಲಿಸ್ತಾನದಲ್ಲಿ ಅರಬ ಯಹೂದಿಯರ, ಯುದ್ಧ ನಡೆದಿದೆ. ಪಾಲಿಸ್ತಾನ, ಇಬ್ಭಾಗವಾಗುವದರಲ್ಲಿ ಸಂಶಯವಿಲ್ಲ. ಇಬ್ಭಾಗದ ಪ್ರಶ್ನೆಯು ಸರಳವಲ್ಲ. ಇದರಿಂದ ಇಬ್ಬರೂ ಸಿಟ್ಟಾಗುವರು. ಕೊನೆಗೆ ರಶಿಯದ ಕೂಡ ಗುಪ್ತ ಸಂಧಾನ ನಡೆಯಿಸುವರು. ಅಂತೂ, ಇದರಲ್ಲಿ ಯಾರಾದರೊಬ್ಬರು ರಶಿಯದ ಉಡಿಯಲ್ಲಿ ಬೀಳಲಿಕ್ಕಬೇಕು. ಈ ಪ್ರಕಾರ ಅಲ್ಲಿ ರಶಿಯನ್ ನೀತಿಗೆ ಜಯಸಿಗುವ ಸಂಭವ ಹೆಚ್ಚಿದೆ.

ಆಜರಬಾಯಿಜಾನ

ಇರಾಣದಲ್ಲಿ ಅಮೇರಿಕನ್, ರಶಿಯನ್, ತಿಕ್ಕಾಟ ಮಂದವಾಗಿದ್ದರೂ ಅಲ್ಲಿ ಅದು ನಡದೇ ಅದೆ. ಇರಾಣದ ಉತ್ತರಭಾಗದಲ್ಲಿ ರಶಿಯ ಕಮ್ಯುನಿಷ್ಟ ಇರಾಣ ರಚಿಸುವದರಲ್ಲಿ ತೊಡಗಿದೆ. ಅಜರಬಾಯಿಜಾನ ಪ್ರಾಂತವೇ ಅದರ ಕೇಂದ್ರ. ತಬ್ರಿಜವೇ ಅದರ ರಾಜಧಾನಿ, ಇರಾಣದ ಸುತ್ತುಮುತ್ತು ಕಮ್ಯುನಿಝಂ

(೧೧ನೆಯ ಪುಟಕ್ಕೆ)

ಜನಮತ

ಪತ್ರಗಳ ಸಾರ

ಧಾನ್ಯ ಸಂಗ್ರಹ

ಸೀದಾ ಪದ್ಧತಿಯನ್ನು ಜೋಕೆಯ ಪ್ರಾಂತವಾರಿ ಮುದ್ದಾಮವರೂ ತೆಗೆದುಹಾಕಿ ಮುಕ್ತಿ ಈಗ ಜಾರಿಗೆ ತರಲಾಯಿತಿದೆ. ಒಮ್ಮೆ ಈ ಮಾರಿ ಊರುಬಿಟ್ಟು ಹೋಯಿತೆಂದು ನಿಟ್ಟುಸಿರಿಟ್ಟ ಒಕ್ಕಲಿಗರಿಗೀಗ ಇದರ ಪುನರವತಾರದಿಂದ ದಿಕ್ಕುಗಾಣದಂತಾಗಿದೆ. ಆದರ್ಶ ಸೀದಾ ಪದ್ಧತಿ ಕೇವಲ ಕಲ್ಪಿತ ಕಾಗದದ ಮೇಲೆ ಬರೆದು ಇಟ್ಟಿರುವ ಸಂಗತಿ. ವಸ್ತುಸ್ಥಿತಿಯಲ್ಲಿ ಅದರ ಬಗೆಯೇ ಬೇರೆ. ಒಕ್ಕಲಿಗನ ವಾಸ್ತವಿಕ ಉತ್ಪನ್ನವನ್ನು ಮೊದಲಿನಿಂದಲೂ ಒಂದೆರಡು ಸಂಖ್ಯೆಗಳಿಂದ ಗುಣಿಸಿಯೇ ರಿಕಾರ್ಡ ಮಾಡಿಕೊಳ್ಳುತ್ತ ಬಂದಿದ್ದು ಅವನಿಗೆ ಸೀದಾ ಕಾರ್ಡನ್ನು ಪಡೆವ ಅರ್ಹತೆ ದುರ್ಲಭವಾಗಿದ್ದ ಸಂದರ್ಭಗಳೇ ಹೆಚ್ಚು. ಅದರಿಂದ ಅರೆ ಹೊಟ್ಟೆ ಉಂಡು ದುರ್ಬಲವಾದ ಅವನಿಗೆ ದುಡಿವ ಶಕ್ತಿ ಉತ್ಸಾಹಗಳು ಶಿಥಿಲವಾಗಿ, ಉತ್ಪನ್ನ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತ ಬಂತು. ಉತ್ಪನ್ನ ಕಡಿಮೆ ಉಂಬವರು ಜಾಸ್ತಿ ಎಂಬ ಸ್ಥಿತಿಯುಂಟಾಗಿ, ಧಾರಣಿ ಏರಿತು. ಇದರ ಜೊತೆಗೆ ಈಗ ಸರಕಾರದವರು ದಿಪೋಗಳನ್ನು ವಜಾಮಾಡಿಬಿಟ್ಟಿದ್ದಾರೆ. ಒಡೆಯನಿಗೆ ಗೇಣಿ ಹಾಕಿದ ನಂತರ ರೈತನಿಗೆ ಉಳಿದ ಅಲ್ಪ ಧಾನ್ಯ ಊಟಕ್ಕೇ ಸಾಲದು, ಕೃಷಿಕಾರ್ಯದ ವೆಚ್ಚಕ್ಕೆ ಇದೆಂತು ಅದು ಒದಗೀತು? ಇದರ ಮೇಲೆ ಕೇಂದ್ರ ಸರಕಾರ ಈ ವರ್ಷ ಧಾರಣೆಯನ್ನು ನೂರಕ್ಕೆ ೨೫ ರಷ್ಟು ಏರಿಸಿದ್ದು ಗಾಯದ ಮೇಲೆ ಬರೆ ಕೊಟ್ಟಂತಾಗಿದೆ. ಅಲ್ಲದೆ ಹುಸರ್ಕಾರಯಂತ್ರಣಕ್ಕಾಗಿ ಅಕ್ಕಿಯ ಸಂಗ್ರಹ ಪ್ರಾರಂಭಿಸಿದ ಸರಕಾರವು ಈಗಲೇ ಸ್ಟೋರಿಗೆ ಮೊದಲ ಕಂತಿನ ಅಕ್ಕಿಯನ್ನು ಹಾಕಲು ಆಜ್ಞೆಮಾಡಿದೆ. ಈಯೆಲ್ಲ ತೊಂದರೆಗಳಿಂದ ರೈತನನ್ನು ಪಾರುಮಾಡುವದು ಸರಕಾರದ ಕರ್ತವ್ಯ. ಸದ್ಯ, ಮೊದಲ ಕಂತಿನ ಅವಧಿಯನ್ನು ಡಿಸೆಂಬರದ ಕೊನೆಗಾದರೂ ಮುಂದೂಡಿದರೆ ಬಹಳ ಉಪಕಾರವಾಗುತ್ತಿತ್ತು. ಈ ವಿಷಯವಾಗಿ ಕಳೆದ ೧ ನೆಯ ತಾರೀಕಿನಲ್ಲಿ ಕುಂದಾಪುರ ತಾಲೂಕಿನ ಹೇರಿಂಜಾಲು ಗ್ರಾಮದಲ್ಲಿ ಹತ್ತಾರು ಗ್ರಾಮಗಳ ರೈತರು ಸಭೆ ಸೇರಿ ಜಿಲ್ಲಾಧಿಕಾರಿಗಳಿಗೊಂದು ಮನವಿಯನ್ನು ಕಳಿಸಿದ್ದಾರೆ. ಸರಕಾರ ದಯದೋರುವದೇ?

— ಹಳ್ಳಿಗ

ಕೊರತೆ

ಗಜೇಂದ್ರಗಡದಲ್ಲಿಯ ಜನಸಂಖ್ಯೆ ೧೫ ಸಾವಿರ. ಆದರೂ ಅಲ್ಲಿ ಹಿಂದೀ ಮತ್ತು ಇಂಗ್ಲೀಷ ಕಲಿಸುವ ಶಾಲೆ ಒಂದೂ ಇಲ್ಲ. ಈ ಊರು ೨೭ ಹಳ್ಳಿಗಳ ಜಹಗೀರಿನ ಮುಖ್ಯ ಪೇಟೆಯಾಗಿರುತ್ತದೆ ಮತ್ತು ವ್ಯಾಪಾರದ ಒಂದು ಮುಖ್ಯ ಸ್ಥಳವೆನಿಸಿದೆ. ಇಲ್ಲಿ ಧನಿಕರೂ ಕಾಂಗ್ರೆಸ್ಸಿಗರೂ ಇರುವುದರಿಂದ ಅವರು ವಿದ್ಯಾಭ್ಯಾಸಕ್ಕೆ ನೆರವಾಗುವ ಶಕ್ತಿಯನ್ನು ಹೊಂದಿದವರಿದ್ದಾರೆ. ಆದುದರಿಂದ ಸರಕಾರದವರು ದಯೆಮಾಡಿ ಹಿಂದಿ ಮತ್ತು ಇಂಗ್ಲೀಷುಗಳನ್ನು ಕಲಿಸುವ ಶಾಲೆಯನ್ನು ಇಲ್ಲಿ ತೆರೆಯಲು ವ್ಯವಸ್ಥೆ ಮಾಡಬೇಕೆಂದು ಬೇಡುತ್ತೇನೆ.

—ನರಸಿಂಹಾಚಾರ್ಯ, ಬಿ.
ಉಪಾಧ್ಯಾಯ.

ದನಗಳ ಕಾಹಿಲೆ

ನಮ್ಮಲ್ಲಿ ಜಾನುವಾರುಗಳಿಗೆ ಒಂದೊಂದು ಜಾತಿ 'ಪಿಶಾಚಿ' ಹಿಡಿದ ಹಾಗಾಗುತ್ತದೆ, ನಮ್ಮ ಊರವರೆಲ್ಲ 'ಪಿಶಾಚಿ'ಯೆಂದೇ ಖಂಡಿತ ಹೇಳಿದರೂ ನನಗೆ ಒಪ್ಪಿಗೆಯಾಗುವದಿಲ್ಲ. ಆದರೆ ಅವುಗಳ ಚರ್ಯೆ ತುಂಬ ವಿಲಕ್ಷಣವಾಗಿರುತ್ತದೆ; ಮೈಯೆಲ್ಲ ನಡುಗುತ್ತಿರುವುದು. ಬಾಯಲ್ಲಿ ನೊರೆ ಸುರಿಯುವುದು, ಯಾವ ವಸ್ತುವಿನ—ಕೊನೆಗೆ ತಮ್ಮ ಕರುಗಳ-ಪರಿಚಯವೂ ಇರುವದಿಲ್ಲ. ಮೇವು ತಿನ್ನುವದಿಲ್ಲ. ಮೊಲೆ ಬೊಟ್ಟೆಯಾಗುತ್ತದೆ.

ಈ ವಿಪರೀತಗಳನ್ನು ನೋಡಿದರೆ ಪಿಶಾಚಿಯೋ, ಬ್ರಹ್ಮರಾಕ್ಷಸನೋ ಎಂದೇ ನಂಬಬೇಕು. ಆದರೆ 'ನರಪಿಶಾಚಿ'ಗಿಂತ ದೊಡ್ಡ 'ಪಿಶಾಚಿ' ಇನ್ನಿಲ್ಲವೆಂಬ ನನ್ನ ಭಾವನೆ, ಹೀಗಿರುವಾಗ ಅದು ಪಿಶಾಚಿಯ ಆಳಿಕೆಯೆಂದು ನನ್ನ ಮನ ನಂಬುವದು ಹೇಗೆ? ಇದಕ್ಕೆ ಪರಿಹಾರವೂ ತಿಳಿದಿಲ್ಲ. ಇದೇನಾದರೂ ರೋಗವಿರಬಹುದೇ? ಇದಕ್ಕೆ ಮದ್ದಿದೆಯೊ? ದಯವಿಟ್ಟು ತಿಳಿಸುವಿರಾ? ಈ ಕಾಹಿಲೆ ಬೇರೆಲ್ಲಿಯಾದರೂ ಇದೆಯೊ? ಯಾವುದೋ ಮೂಲೆಯ ಹಳ್ಳಿಯ 'ಗಮಾರ' ಈ ಪ್ರಶ್ನೆ ಕೇಳಿದನೆಂದು ತಾವು ಕಡೆಗಣಿಸಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಮೇಲಿನ ಕಾಹಿಲೆಗೆ ಪರಿಹಾರ ತಿಳಿಸಿ ಉಪಕಾರ ಮಾಡಬೇಕಾಗಿ ಕೋರುತ್ತೇನೆ.

— ಮ. ರಾಮಚಂದ್ರ
ಕೋಟೆಕಲ್ಲು, ಬೆಳ್ಳಂಗಿ, ಶಿವಮೊಗ್ಗ ಜಿಲ್ಹೆ.

ವಿವಿಧ ಪ್ರಪಂಚ

ಹೇಳುವುದು ಶಾಸ್ತ್ರ ಹಾಕುವುದು ಗಾಳ!

"'ಲೇಡೀಸ್ ಹೋಂ ಜರ್ನಲ್" ಎಂಬ ಅಮೇರಿಕದ ಪತ್ರಿಕೆಯಲ್ಲಿ ಸಾಮಾನ್ಯ ಅಮೇರಿಕನ್ ಸ್ತ್ರೀಪುರುಷರ ದೈವಶ್ರದ್ಧೆಯನ್ನು ತುಲನೆ ಮಾಡಿ ಬರೆಯಲಾಗಿದೆ. ಈ ತುಲನಕ್ಕೆ ಅದು ಕೆಲವು ಪ್ರಶ್ನೆಗಳನ್ನು ಹಾಕಿ ಒಂದು ಜನಮತ ಗಣನೆಯನ್ನು ಮಾಡಿತು.

ಅಮೇರಿಕನ್ನರಲ್ಲಿ ನೂರಕ್ಕೆ ೯೫ ಮಂದಿ ದೇವರಿದ್ದಾನೆ ಎನ್ನುತಾರೆ, ೭೬ಮಂದಿ ಚರ್ಚಿನ ಸದಸ್ಯರೆಂದುಕೊಳ್ಳುತ್ತಾರೆ, ೫೬ ಜನರು ಪದೇ ಪದೇ ತಾವು ಪ್ರಾರ್ಥನೆಗೆ ಹೋಗುವುದಾಗಿ ಹೇಳುತ್ತಾರೆ. ನೂರರಲ್ಲಿ ೭೧ ಜನರು ದೇವರು ತಮ್ಮ ಪಾಪಪುಣ್ಯಗಳ ನಿರ್ಣಾಯಕ ಎಂದು ಒಪ್ಪುತ್ತಾರೆ, ೭೩ ಜನರು ಪರಲೋಕವಾಸದಲ್ಲಿ ನಂಬಿಗೆಯುಳ್ಳವರಾಗಿದ್ದಾರೆ, ಪರಲೋಕದಲ್ಲಿ ತಮ್ಮ ಕುಟುಂಬದವರನ್ನು ಅಂತ್ಯದಲ್ಲಿ ಕಾಣುವುದಾಗಿ ಹೇಳುತ್ತಾರೆ. ಸ್ವರ್ಗದಲ್ಲಿ ವಿಶ್ವಾಸವುಳ್ಳವರಲ್ಲಿ ಐದರಲ್ಲಿ ಮೂರಂಶಕ್ಕಿಂತ ಹೆಚ್ಚು ಜನರು ತಾವು ಅಲ್ಲಿಗೆ ಹೋಗುವೆವೆಂದು ನಿರೀಕ್ಷಿಸುತ್ತಿರುವೆವೆನ್ನುತ್ತಾರೆ.

ನೂರರಲ್ಲಿ ೯೧ ನಾಗರಿಕರು ಒಳ್ಳೆಯಬಾಳನ್ನೇ ಸಾಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವೆವೆಂದರು. ಅವರಲ್ಲಿ ನೂರಕ್ಕೆ ೪೪ಮಂದಿ ಆಧ್ಯಾತ್ಮಿಕ ಸಮರದ ನೆನಪು ತಮಗೆ ಸದಾ ಇದೆಯೆಂದರು. ಸಹಜೀವಿಗಳನ್ನು ಪ್ರೀತಿಸುವುದು ಇತ್ತೀಚಿಗೆ ಜನರಿಗೆ ಕಷ್ಟವಾಗುತ್ತಿರುವುದು ಶೋಚನೀಯ ಎಂದು ಅವರು ಅಭಿಪ್ರಾಯಪಟ್ಟರು, ಸ್ವಾರ್ಥಿಗಳು ಹೆಚ್ಚುತ್ತಿರುವುದು ಅನ್ಯಾಯವೆಂದರು. ಕ್ರೈಸ್ತನ ಪ್ರೇಮತತ್ವವನ್ನು ಅನುಸರಿಸಿದರೆ ನಿಮ್ಮ ಜೀವನ ಹೇಗೆ ಬದಲಾಗುವುದೆಂದು ಹಾಕಿದ ಪ್ರಶ್ನೆಗೆ ಉತ್ತರ ಕೊಟ್ಟವರಲ್ಲಿ ಅರ್ಧಜನರು ಇಂದಿನ ತಮ್ಮ ಜೀವನವನ್ನು ಬದಲಿಸುವುದೇ ಇಲ್ಲವೆಂದರು, ಸುಮಾರು ಮೂರನೆಯ ಎರಡಂಶ ಜನರು ಕ್ರೈಸ್ತನ ಬೋಧೆಯಂತೆ ತಾವು ನಡೆದುಕೊಂಡಿದ್ದರೆ ತಮ್ಮ ನಡೆನುಡಿಗಳೇ ಬೇರೆಯವಾಗಿ ಇರುತ್ತಿದ್ದವು ಎಂದೊಪ್ಪಿದರು. ಅದೇ ವೇಳೆಗೆ ನೂರಕ್ಕೆ ೮೦ ಮಂದಿ ಕ್ರೈಸ್ತನ ನೀತಿಯನ್ನು ಸಂಪೂರ್ಣವಾಗಿ ಆಚರಿಸುವವರು ಅತ್ಯಲ್ಪ ಎಂದು ವ್ಯಥೆಪಟ್ಟರು.

ಕಡೆಯಲ್ಲಿ ಪತ್ರಿಕೆ, ನಾಲ್ಕನೆಯ ಒಂದಂಶ ಜನರು ಶತ್ರುವನ್ನೂ ಪ್ರೀತಿಸುವ ಅತ್ಯುದಾತ್ತ ಪ್ರೇಮತತ್ವಾರಾಧಕರೆನ್ನುವರಾದರೂ ಇಂದಿನ ಅಮೇರಿಕನ್ನರ ನಡತೆಯನ್ನು ಕಂಡರೆ ಅದೆಲ್ಲ ಸುಳ್ಳು ಎನ್ನಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೆ ಅವರು ಮಾಡುತ್ತಿರುವೆವೆಂಬುದಕ್ಕೂ ಮಾಡುವ ಕೆಲಸಕ್ಕೂ ಇರುವ ಭೂಮ್ಯಾಕಾಶದಷ್ಟು ಅಂತರ ಭಯಾನಕವಾಗಿದೆ ಎಂದು ತೀರ್ಪು ಕೊಟ್ಟಿದೆ. ಇದೇ ಪರಿಸ್ಥಿತಿ ಪುಣ್ಯಭೂಮಿ ಎನಿಸಿದ ಭಾರತದಲ್ಲೂ ಇದೆ ಈಗ ಎನ್ನಬಹುದು. ಪ್ರಮಾಣ ಮತ್ತು ಸಂಖ್ಯೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಇರಬಹುದಾದರೂ ಒಟ್ಟಿನಲ್ಲಿ ಆಡುವುದಕ್ಕೂ ಮಾಡುವುದಕ್ಕೂ ತಿಳಿಯದೆ ಅಥವಾ ತಿಳಿದೂ ಅಂತರ ವಿಡುವವರೇ ಹೆಚ್ಚಿರುವುದು ಅನುಭವದ ಕಟುಸತ್ಯವಲ್ಲವೆ?

ಕಿವುಡರ ಜಾತಿ

ಬ್ರಿಟನ್ನಿನ ಜನಸಂಖ್ಯೆ ಸುಮಾರು ೪॥ ಕೋಟಿ. ಅವರಲ್ಲಿ ೫೦ಸಾವಿರ ಜನರು ಸಾಮಾನ್ಯ ಸಂಭಾಷಣೆ ಕೂಡ ಕೇಳದಷ್ಟು ಕಿವುಡರಿರುವರು. ಇವರೀಗ ಮಹತ್ವದ ಅಲ್ಪಸಂಖ್ಯರಾಗಿದ್ದಾರೆ ಆ ನಾಡಿನಲ್ಲಿ! ಆದುದರಿಂದ ಇವರ ಕಿವುಡನ್ನು ನಿವಾರಿಸಲು ಎಂದಿಗಿಂತ ಇಂದು ಅಲ್ಲಿಯ ತಜ್ಞರು ಹೆಚ್ಚು ಶ್ರಮವಹಿಸುತ್ತಿದ್ದಾರೆ. ಕಿವುಡರ ಸಮಸ್ಯೆಗಳನ್ನು ಅಭ್ಯಸಿಸಲು ಅವರು ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಈ ಜಾತೀಯತೆಯ ಯುಗದಲ್ಲಿ ಕಿವುಡರು ನಾಳೆ ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡರೆ ತಮಗಾಗಿ ಪ್ರತ್ಯೇಕ ಸ್ಥಾನವನ್ನೂ ವಿಶೇಷ ಹಕ್ಕುಬಾಧ್ಯತೆ ಮತ್ತು ಸಂರಕ್ಷಣೆಗಳನ್ನೂ ಕೇಳಬಹುದಲ್ಲವೆ? ಭಾರತದಲ್ಲಿ ಅಂಗಹೀನರಿಗೆ ಕಡಿಮೆಯಿಲ್ಲ. ಅವರಾರಿಗೂ ಗುಂಪುಕಟ್ಟಿಕೊಳ್ಳುವ ರಚನಾತ್ಮಕ ಹೋರಾಟವನ್ನು ಹೂಡಲು ಯತ್ನಿಸುವ ಬುದ್ಧಿ ಹುಟ್ಟದಿರುವುದು ಆಶ್ಚರ್ಯವಲ್ಲವೆ?

ಇಂದಿನ ವಿದ್ಯಾಭ್ಯಾಸ

ಇಂದಿನ ವಿದ್ಯಾಭ್ಯಾಸ ಪದ್ಧತಿಯಬಗ್ಗೆ ಹಲವರು ಹಲ ವಿಧವಾಗಿ ಹೇಳುತ್ತಾರೆ. ಒಟ್ಟಿನ ಮೇಲೆ ಇದರಿಂದಾದ ಪರಿಣಾಮವೇನೆಂಬುದನ್ನು ಅಮೇರಿಕದ ಇಬ್ಬರು ಮುಖ್ಯ ಶಿಕ್ಷಕಿಯರು ಚೆನ್ನಾಗಿ ಹೇಳಿದರು.

ಡೀನ್ ಮ್ಯಾಕಿಂಟೋಷಳು ತನ್ನ ೨೬ ವರ್ಷಗಳ ಶಿಕ್ಷಣಾನುಭವದಿಂದ ಹೇಳುವುದು ಹೀಗಿದೆ: ನಮ್ಮ ಅಮೂಲ್ಯ ನಾಗರಿಕತೆಯಿಂದು ತಾನು ಹುಟ್ಟಲು ಕಾರಣವಾದ ಆರಂಭೋತ್ಸಾಹ, ಸ್ವಾತಂತ್ರ್ಯಬುದ್ಧಿ, ಪ್ರತ್ಯುತ್ಪನ್ನಮತಿತ್ವಗಳನ್ನು ಸಮೂಲ ನಾಶಮಾಡಲು ತೊಡಗಿದೆ. ಸರಿ ಅಥವಾ ತಪ್ಪು ಎಂಬುದರ ಬಗ್ಗೆ ಇಂದು ತಾಯ್ತಂದೆಯರಿಗೆ ಒಂದು ನಿರ್ದಿಷ್ಟ ನೀತಿಮಟ್ಟವನ್ನು ಹೇಳಲುಬರದು. ಎಲ್ಲ ಗೊಂದಲ, ಗಲಿಬಿಲಿ, ಗಲಾಟೆ, ವ್ಯಕ್ತಿತ್ವ ಪೋಷಣೆ ಮಾಡುವೆವೆಂದು ಹೋದ ಕೆಲವು ಪ್ರಗತಿಶೀಲ ಶಿಕ್ಷಕ ಶಿಕ್ಷಕಿಯರು ಹುಡುಗ ಹುಡುಗಿಯರನ್ನು ಕೃತಕರನ್ನಾಗಿಯೂ ಸ್ವಾರ್ಥಿಗಳನ್ನಾಗಿಯೂ ಅಹಂಭಾವದವರನ್ನಾಗಿಯೂ ಅನಿಯಂತ್ರಿತರನ್ನಾಗಿಯೂ ಅಸಂಸ್ಕೃತರನ್ನಾಗಿಯೂ ತಯಾರುಮಾಡಿದ್ದಾರೆ. ಆದುದರಿಂದ ಇಂದಿನ ನಮ್ಮ ಕರ್ತವ್ಯವೇನಂದರೆ— ಸರ್ವವ್ಯಕ್ತಿಸಾಧಾರಣವಾದ ಒಂದು ನೈತಿಕ ಸಾಮರಸ್ಯದ ತತ್ವಪ್ರಣಾಲಿಯನ್ನು ರಚಿಸಿ ಮಕ್ಕಳಿಗೆ ಅವನ್ನು ಕಲಿಸುವುದು. ಹೀಗೆ ಮಾಡಬೇಕಾದರೆ, ಅಧ್ಯಾತ್ಮದ ಗುರಿಯಿಂದ ಮಕ್ಕಳ ಪ್ರಾಪಂಚಿಕತೆ ನಿಯಂತ್ರಿತವಾಗಿ ಸಂಯಮದ ಸಮನ್ವಯ ಜೀವನವೆನಿಸಬೇಕಾದರೆ ಸ್ವತಂತ್ರವಿಚಾರ, ಚರ್ಚೆ, ಸ್ವಂತ ಆಚರಣೆ ಇವುಗಳ ಮೂಲಕ ಜ್ಞಾನದ ನೈತಿಕ ಮತ್ತು ಆಧ್ಯಾತ್ಮಿಕ ಮುಖಗಳನ್ನು ಬಿಂಬಿಸುವ ನಡೆನುಡಿಗಳನ್ನು ಶಿಕ್ಷಕ ಶಿಕ್ಷಕಿಯರು ಅಳವಡಿಸಿಕೊಳ್ಳಬೇಕು.

ಕುಮಾರಿ ಮ್ಯಾಕಳ ಪ್ರಕಾರ ಹೆಂಗಸಿಗಿಂದು ತನ್ನ ಗುರಿಯೇನೆಂಬುದೇ ತಿಳಿಯದಾಗಿದೆ. ಅವಳು ಜಗನ್ಮಾನ್ಯ ಗುರಿಗಳನ್ನು ಅರಿಯಳು. ಸ್ವಬುದ್ಧಿಯಿಂದ ವಿವೇಚಿಸಲೂ ಅರಿಯಳು. ಹೀಗಾಗಿ ಅವಳಿಗೆ ಇಹವೂ ಅತೃಪ್ತಿಕರ ಪರವೂ ಅತೃಪ್ತಿಕರ ಎನಿಸಿದೆ. ಈ ನಾಗರಿಕೆಯರು ಮಕ್ಕಳಿಗೆ ಸರ್ವಜನೀನವೃತ್ತಿಯ ಸಾಮ್ಯದ ಸದಾದರ್ಶಗಳನ್ನು ಕಲಿಸಬಲ್ಲರೆಂತು? ವೈವಾಹಿಕ ಜೀವನವನ್ನು ಬಿಡದೆ ಸತಿಯು ಪತಿಯ ಕೆಲಸ ಕಾರ್ಯದಲ್ಲಿ ಸಮಭಾಗಿಯಾಗಿ ನಡೆದುಕೊಂಬ ಸಮಂಜಸ ಬುದ್ಧಿಯನ್ನು ತಾಳುವಂತೆ ಅವಳಿಗೆ ವಿದ್ಯಾಭ್ಯಾಸ ಮಾಡಬೇಕು. ಇದು ಸಹವಿದ್ಯಾಭ್ಯಾಸದಿಂದ ಸಾಧ್ಯ, ಗಂಡಸರ ಪಾಂಡಿತ್ಯವನ್ನು ಗಳಿಸಲು ಅವರೊಡನೆಯೇ ಓದಬೇಕು; ಆದರೆ ಅದು ಅನಿವಾರ್ಯವೆನಿಸಬಾರದು, ಅಷ್ಟೇ, ಆದರಿಂದ ಗಂಡು ಮಕ್ಕಳು ಹೆಣ್ಮಕ್ಕಳು ಇಬ್ಬರೂ ವಿದ್ಯಾವಿಮುಖರಾಗುತ್ತಾರೆ. ಈ ಎಚ್ಚರಿಕೆಯಿಂದ ನಾವು ಮಕ್ಕಳನ್ನು ತರಬೇತು ಮಾಡಿದರೆ ಹೆಂಗಸಿನ ಆದರ ಜೊತೆಗೆ ಆ ಮೂಲಕ ಗಂಡಸಿನ ಬಾಳೂ ಯೋಗ್ಯವಾಗುತ್ತದೆ, ತೃಪ್ತಿಕರವಾಗುತ್ತದೆ. ಹುಡುಗರೊಡನೆ ಸಾಮರಸ್ಯದಿಂದ ನಿರ್ಮಲ ನೀತಿಯಿಂದ ಇರಬಲ್ಲ ವಿದ್ಯಾರ್ಥಿನಿಗೆ ಪ್ರತ್ಯೇಕ ಓದಿಗಿಂತ ಹೆಚ್ಚು ಲಾಭವುಂಟು, ಆದರಿಂದ ಸ್ತ್ರೀಪುರುಷರ ವಿವಿಧ ಮಾನಸಿಕ ಅವ್ಯವಸ್ಥೆ ಅದರಲ್ಲೂ ಹೆಚ್ಚಾಗಿ ಸ್ತ್ರೀಯ ಮೌಢ್ಯ ಇಲ್ಲದಂತಾಗುವದು. ಇದಕ್ಕಾಗಿ ಶಿಕ್ಷಕ ಶಿಕ್ಷಕಿಯರೂ ತಾಯ್ತಂದೆಗಳೂ ಎಚ್ಚರದಿಂದ ಮೇಲ್ವಿಚಾರಣೆ ನಡೆಸುತ್ತ ಮಕ್ಕಳನ್ನು ನಿಜವಾದ ಮನುಷ್ಯರನ್ನಾಗಿ ಮಾಡಲು ಪ್ರಯತ್ನಿಸಬೇಕು. ಅದೇ ಮಹಾಸುದಿನವಲ್ಲವೆ ಜಗತ್ತಿನ ನಾಗರಿಕತೆಗೆ?

ಪಾಶ್ಚಾತ್ಯ ಸಮಾಜದ ಅಳಿಗಾಲ!

ನಾಗರಿಕತೆ ಜನನವಾಗಿದು ಸಾಂಘಿಕ ಸಮಾಜ ಜೀವನದಿಂದ ವ್ಯಕ್ತಿ, ವ್ಯಕ್ತಿಗಳ ಸಹಜೀವನಗಳಿಂದ. ಇದಕ್ಕೆ ಪ್ರಥಮ ... ಸಿದ್ದು ಕುಟುಂಬ, ಇದರ ಬುಡಕ್ಕೆ ಪಾಶ್ಚಾತ್ಯ ನಾಗರಿಕತೆ ಕೊಡಲಿ ಹಾಕಿದೆ. ಅಂದ ಮೇಲೆ ಅದರ ಅವಸಾನ ಬಹಳ ದೂರ ಉಳಿಯಿತೆನ್ನಲು ಬಂದೀತೇ?

ವೆಸ್ಟ್‌ಮಿನಿಸ್ಟರಿನಲ್ಲಿ ಇತ್ತೀಚಿಗೆ ನಡೆದ ಅಂತಾರಾಷ್ಟ್ರೀಯ ಮಾನಸಿಕ ಆರೋಗ್ಯ ಪರಿಷತ್ತಿನಲ್ಲಿ ಈ ಸಂಗತಿ ಹೊರಬಿತ್ತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮದುವೆ ಆಗುವುದು ಕಡಿಮೆಯಾಗುತ್ತಿದೆ. ೧೦೦ ರಲ್ಲಿ ೨೫ ವಿವಾಹಗಳು ಅಯಶಸ್ವಿಯಾಗಿವೆ. ಕೆಲವು ನಾಡಿನಲ್ಲಿ ಐದರಲ್ಲಿ ಒಂದು ಕೆಟ್ಟು ಹೋಗಿದೆ. ಬ್ರಿಟನ್ನಿನಲ್ಲಿ, ಮೊದಲನೆಯ ಬಾರಿಗೆ ಮದುವೆಯಾದ ಬ್ರಿಟಿಶ ಹೆಂಗಸರಲ್ಲಿ ೪ ರಲ್ಲಿ ಒಬ್ಬಳು ಮದುವೆಗೆ ಮೊದಲೇ ಗರ್ಭಿಣಿಯಾಗಿದ್ದವಳು. ವಿಧಿಬಾಹಿರ ಶಸ್ತ್ರಚಿಕಿತ್ಸೆ, ಅಧಾರ್ಮಿಕ ಸಂಪರ್ಕ, ಅಯೋಗ್ಯ ಸಂಯೋಗ, ವೇಶ್ಯಾರೋಗಗಳು ದಿನೇ ದಿನೇ ಅತಿರೇಕವಾಗುತ್ತಿವೆ.

೧೯೦೦ ರಲ್ಲಿ ಬ್ರಿಟನ್ನಿನಲ್ಲಿ ೫೦೦ ವಿವಾಹ ವಿಚ್ಛೇದ ಮತ್ತು ಪ್ರತ್ಯೇಕೀಕರಣದ ಪ್ರಕರಣಗಳಿದ್ದವು. ಈ ವರ್ಷ ಸುಮಾರು ೫೦೦೦೦ ದಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ಇದಕ್ಕೆ ಆರ್ಥಿಕ ಅನಿಶ್ಚಿತತೆ, ಚಾರ್ವಾಕ ಬುದ್ಧಿ, ಸಾಮಾಜಿಕ ವಿಪರ್ಯಾಸ, ರಚನಾತ್ಮಕ ಭಾವನೆಗೆ ಪ್ರಕಾಶನಸಾಧನವಿಲ್ಲದ್ದು ಮತ್ತು ಅಜ್ಞಾನಗಳು ಇವೇ ಕಾರಣ ಎಂದು ವಿವಾಹ ಮಂತ್ರಣ ಸಮಿತಿಯ ಪಂಡಿತ ಡಾ. ಇ. ಎಫ್. ಗ್ರಿಫಿತ್ಸರು ಹೇಳಿದರು. ಅಲ್ಲದೆ ವ್ಯಕ್ತಿಗಳಿಗೆ ತಂತಮ್ಮ ಮತ್ತು ತಂತಮ್ಮ ಪಾಲುಗಾರ ಪಾಲುಗಾರ್ತಿಯರ ಪರವಾಗಿ ಮತ್ತು ಸರಕಾರದ ಬಗ್ಗೆ ಇರಬೇಕಾದ ಹೊಣೆಯೇನೆಂಬುದನ್ನು ಕಲಿಸುವುದೇ ಪರಿಷತ್ತಿನ ಉದ್ದೇಶವೆಂದೂ ಅವರು ಅರುಹಿದರು.

ಬಹಳ ಜನರಿಗೆ ಹಿಂದಿನ ನಡತೆ ಮರೆತು ಹೋಗಿದೆ. ಹೊಸದೇನೂ ಗೊತ್ತಿಲ್ಲ. ಕುಟುಂಬ ಅಳಿದ ಮೇಲೆ ಅದರ ಬದಲು ಅಷ್ಟು ಯೋಗ್ಯವಾದ ಯಾವ ತೃಪ್ತಿಕರ ಸೌಖ್ಯಕಲ್ಪನೆಯನ್ನೂ ನಮಗೆ ನಿರ್ಮಿಸಿಕೊಳ್ಳಲಾಗಲಿಲ್ಲ. ಆದುದರಿಂದ ವಿಶ್ವಪ್ರಯತ್ನ ಮಾಡಬೇಕು. ಗರ್ಭಪಾತದ ಆಧಿಕ್ಯಕ್ಕೆ ಅವಿವಾಹಿತ ತಾಯಿಯ ಬಗ್ಗೆ ಸಮಾಜಕ್ಕುಂಟಾದ ಕ್ರೋಧವೇ ಕಾರಣ. ಈ ಭಾವ ಬದಲಾದರೆ ಗರ್ಭಪಾತದ ಸಂಖ್ಯೆ ಕಡಿಮೆಯಾದೀತು. ಎಂದು ಉಪ್ಸಲಾ ವಿಶ್ವವಿದ್ಯಾಲಯದ ಸಮಾಜನೀತಿ ಶಾಸ್ತ್ರದ ಪ್ರಾಧ್ಯಾಪಕರಾದ ತೋರ್ಗ್ನಿ ಸೀಜರ್ ಸ್ಟೆಟ್ಟರು ಅಭಿಪ್ರಾಯಪಟ್ಟರು.

ತಂದೆತಾಯ್ತನದ ಮಟ್ಟವನ್ನು ಮೇಲಕ್ಕೆತ್ತಲು ನಿಜವಾದ ಪ್ರಯತ್ನ ಮಾಡಬೇಕು. ಚರ್ಚಿಗೂ ಶಾಲೆಗೂ ಮಕ್ಕಳನ್ನಟ್ಟಿದರೆ ತನ್ನ ಕರ್ತವ್ಯ ಮುಗಿಯಿತೆಂಬ ತರುಣಿಯ ಹೊಣೆಗೇಡಿತನ ಹೋಗಬೇಕು ಎಂದು ಡಾ. ಲೆಸ್ಲಿ ಹೌಸ್‌ಡನ್ನರೆಂದರೆ ಮೃತ್ಯುತಾಂಡವವನ್ನು ತೆರೆದಿಟ್ಟ ವಿಜ್ಞಾನಭೂತವನ್ನೋಡಿಸಿ ನಿಜವಾದ ದೇವರನ್ನು ಪುನಃ ಹೃದಯದಲ್ಲಿ ಸ್ಥಾಪಿಸದೆ ಉದ್ಧಾರವಾಗದೆಂದು ಡಾ. ಪೆಟ್ರಿಕ್ ಮೋರನ್ನರೆಂದರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೨೪

ಜವಳಿ

ಕೋಹಿನೂರು	೨೬೫-೦-೦
ಮುಂಬಯಿ ಡಾಯಿಂಗ್	೧೦೦೮-೧೨-೦
ಗೋಕಾಕ	೨೬೨-೦-೦
ಸ್ವದೇಶಿ	೨೮೪-೦-೦
ಸೆಂಚುರಿ	೨೫೦-೦-೦
ಸಿಂಪ್ಲೆಕ್ಸ	೧೬೪-೦-೦
ಬೇಲಾಪುರ ಸಕ್ಕರೆ	೨೩೬-೦-೦
ಸಿಂಧ್ಯ ಸ್ಟೀಮ	೨೦-೧೫-೦
ಅಸೊ. ಸಿಮೆಂಟ್ಸ	೧೪೯-೧೨-೦
ಟಾಟಾ ಸ್ಟೀಲ ಡೆಫರ್ಡ	೧೫೩೦-೦-೦
ಸೆಂಟ್ರಲ ಬ್ಯಾಂಕ	೮೪-೮-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೧೬೩೦-೦-೦
ರಿಝರ್ವ ,,	೧೧೩-೮-೦

ಇತರ

ಅಹಮದಾಬಾದ ಅಡ್ವಾನ್ಸ	೨೮೦-೦-೦
ಸೆಂಟ್ರಲ ಇಂಡಿಯಾ	೨೫೪-೦-೦
ಮುಂಬಯಿ ಬರ್ಮಾ	೩೩೦-೦-೦
ಇಂಡಿಯನ್ ಬ್ಯಾಂಕ	೧೮೯-೦-೦
ಫಿನಿಕ್ಸ	೫೪೩-೧೨-೦
ಗೋಕಾಕ	೨೮೭-೦-೦
ಸೆಂಟ್ರಲ ಇಂಡಿಯಾ	೨೬೮-೦-೦
ಹೆಚ್ಚು	೫೫೮-೮-೦ ರಿಂದ ೫೫೯-೦-೦
ಕಡಿಮೆ	೫೪೨-೦-೦
ಅಂದಾಜಿನ ಧಾರಣೆ–	
ಅಹಮದಾಬಾದ ಅಡ್ವಾನ್ಸ	೨೭೭-೧೨-೦

ಚಿನ್ನ--ಬೆಳ್ಳಿ

ತಯಾರಿ ಚಿನ್ನ	೧೧೨-೧೩-೦
ವಾಯದಾ	೧೧೨-೭-೦
ಸಾವರಿನ ಬೆಳ್ಳಿ	೭೫-೪-೦
ತಯಾರಿ ಬೆಳ್ಳಿ	೧೭೬-೬-೦
ವಾಯದಾ ,,	೧೭೬-೬-೦
ಚಂಬರ	೧೭೬-೨-೦

ಅರಳಿ

ಫೆಬ್ರುವರಿ	೫೯೯-೮-೦ ರಿಂದ ೫೯೯-೧೨-೦
ಮೇ	೫೯೯-೦-೦
ಜೂನ	೫೯೮-೮-೦
ಮಾರ್ಚ	೫೯೪ ೪-೦
ಹೆಚ್ಚು	೬೦೦-೮-೦ ರಿಂದ ೬೦೦-೧೨-೦
ಕಡಿಮೆ	೫೯೯-೦-೦

ಎಣ್ಣೆಕಾಳು

ಶೇಂಗಾ	೧೭೨-೮-೦
ಅಗಸಿ	೨೬-೧೦-೦
,, ಹೊಸ ಬೆಳೆ	೨೭-೧೦-೦
ಅಗಸಿ ಎಣ್ಣೆ	೧೬-೮-೦

ಸಾಗರ

ತಾ. ೨೫

ಗುಂಡು ಅಡಿಕೆ ನಂ. ೧	೨೮
ಗುಂಡು ಅಡಿಕೆ ನಂ. ೨	೨೭।
ಬೆಟ್ಟೆ ,, ೨	೨೬।।।
ರಾಶಿ ,, ೨	೨೮
ಕೆಂಪು ಗೋಟು	೧೮
ನಿಕಾಳಿ	೩೨॥

ಶಿವಮೊಗ್ಗೆ ಅಡಿಕೆ

ತಾ. ೨೫

ದೇಶಾವರ ನಂ. ೧ ಮಣ ೧ ಕ್ಕೆ	೩೦-೩೩
,, ,, ೨	೨೭.೩೦
,, ,, ೩	೨೫-೨೭
ರಾಜಾಅಲವು	೨೭-೩೦
ತೊರಸಾಲು	೨೨-೨೭
ಬೆಟ್ಟೆವಂತಿ	೧೮-೧೯
ಬೆಟ್ಟೆ	೧೬-೧೭

ಅಡಿಕೆ ಬೇಡಿಕೆ ಹೆಚ್ಚಿದೆ. ಹೊಸ ಅಡಿಕೆ ಪೇಟೆಗೆ ಬರುತ್ತಿದೆ. ಅಕಾಲವೃಷ್ಟಿ ಮಲೆನಾಡಿನ ಭತ್ತ ಮತ್ತು ಅಡಿಕೆ ಬೆಳೆಗಳಿಗೆ ಶತ್ರುವಾಗಿದೆ.

ಸಾಂಗಲಿ

ತಾ. ೨೬

ಅರಸಿಣ ಹೊಸ (ಹೇರು)	೧೩೦-೧೩೨
ಮೆಣಸಿನಕಾಯಿ ಹೊಸ ಹೇರು	೧೨೫-೧೮೦
ಬೆಲ್ಲ	೬೨-೬೩
ಶೇಂಗಾ ಖಂಡಿ	೯೦-೧೨೬

ಹುಬ್ಬಳ್ಳಿ

ತಾ. ೨೬

ಜ. ಹತ್ತಿ ನಗಕ್ಕೆ	೪೩೫-೪೫೦
,, ಅರಳೆ ,,	೨೬೫-೨೮೫
ಜ. ಹತ್ತಿಕಾಳು ರೂ.ಗೆ	೬¾ ಪೌಂಡ
ಎ. ಹತ್ತಿಕಾಳು ,,	೬॥ ,,
ಜೋಳ (ಚೀಲಕ್ಕೆ)	೩೮-೪೧
ಕೆಂಪು ಗೋದಿ ಚೀಲಕ್ಕೆ	೧೦೦-೧೦೬
ಬಿಳಿ ಗೋದಿ ಚೀಲ	೮೫-೯೦
ಸಣ್ಣ ಭತ್ತ ,,	
ದೊಡ್ಡ ,, ,,	—
ಕುಸುಬಿ ,,	೩೨-೩೨।।
ಶೇಂಗಾ (ಹಳೆ) ಹೇರು	೪೯-೫೦
,, (ಹೊಸ) ,,	೪೬-೪೮

ನಾಲ್ಕು ಮಾತು — ರಂಗನಾಥ ದಿವಾಕರ

೧ ಸುಂಟರ ಗಾಳಿ

ಪುರಾಣ ಕಾಲದಲ್ಲಿ 'ವಾಯು ವೇಗ' ಎಂಬುದು ಬಹಳ ದೊಡ್ಡವೇಗ ಎನಿಸುತ್ತಿತ್ತು. ಆದರೆ ನಿಜವಾಗಿ ವಾಯುವು ಸಾಮಾನ್ಯತಃ ಗಂಟೆಗೆ ೬-೮ ಮೈಲಿಗಿಂತ ಹೆಚ್ಚಿನ ವೇಗದಿಂದ ಹರಿಯುವದಿಲ್ಲ, ಬಹಳ ವೇಗದಿಂದ ಹರಿದರೆ ೧೦-೧೨ ಮೈಲು ಹೋಗುತ್ತಿರಬಹುದು ಆದರೆ ಬಿರುಗಾಳಿಬಿಟ್ಟಾಗ ಅದರ ವೇಗ ೫೦-೬೦ ಮೈಲುಆಗುವುದುಂಟು ಸುಂಟರಗಾಳಿಬಿಟ್ಟಾಗ (ಸಾಯಕ್ಲೋನ) ೯೦-೧೦೦ ಮೈಲಿಗೆ ಮಟ್ಟುವದು!

× × ×

ಮೊನ್ನೆ ಮುಂಬಯಿ ಹಾಗೂ ಸುತ್ತಲೂ ಸುಳಿದ ಸುಂಟರಗಾಳಿಯ ವೇಗವು ೯೦ ಮೈಲಿ ಇತ್ತು. ಅದರಿಂದಾದ ಪ್ರತ್ಯಕ್ಷ ಹಾವಳಿಯನ್ನು ನಾನು ಕಣ್ಣಾರೆ ಕಂಡೆನು. ಮನುಷ್ಯನು ಕಟ್ಟಬೇಕಾದರೆ ನೂರಾರು ದಿನ ಬೇಕಾದ ಕಟ್ಟಡಗಳನ್ನು ಇಲ್ಲವೆ ಬೆಳೆಯಲು ನೂರಾರು ವರುಷ ಬೇಕಾಗುವ ಗಿಡ ಮರಗಳನ್ನು ಈ ಸುಂಟರಗಾಳಿಯು ಒಂದೇ ಒಂದು ಅರೆಕ್ಷಣದಲ್ಲಿ ನೆಲಸಮ ಮಾಡಿಬಿಡುವದನ್ನು ನೋಡಿದರೆ ಮನುಷ್ಯನ ಶಕ್ತಿಗೆ ಹಾಗೂ ನಿಸರ್ಗದ ಶಕ್ತಿಗೆ ಇದ್ದ ಅಂತರವನ್ನು ಸಹಜವಾಗಿ ಕಲ್ಪಿಸಬಹುದು. ಕುಂಬಾರನು ಚಿಟಪಿಟಿ ಬಿಟ್ಟು ಮಾಡಿದ ಗಡಿಗೆಗಳನ್ನು ಒಂದೇ ಕೋಲಿನ ಪೆಟ್ಟಿನಿಂದ ಒಡೆದು ಬಿಡಲು ತಡವಾಗುವದಿಲ್ಲ. ಈ ಸುಂಟರಗಾಳಿಯ ಕಥೆಯೂ ಹಾಗೆ ಆಯಿತು. ಭೂಕಂಪ, ಬೆಂಕಿ ಇವುಗಳಾದರೂ ಅದೇ ಮಾದರಿಯ ಶಕ್ತಿಗಳು. ಮನುಷ್ಯನ ಅಲ್ಪತ್ವವನ್ನು ಅವು ಕೈಯೆತ್ತಿ ತೋರುವವು.

× × ×

ಆದರೆ ಮಾನವನು ಇದರಿಂದ ಎದೆಗುಂದ ಬಲ್ಲನೇ? ಎದೆಗುಂದುವನೆ? ಇಲ್ಲಿಯ ಅಂದರೆ ಹಿಂದುಸ್ತಾನದಲ್ಲಿಯ ಸುಂಟರ ಗಾಳಿಗಳು ಇನ್ನೂ ಅಷ್ಟೊಂದು ದುಷ್ಟವಲ್ಲ! ಮುಂಬೈಯಲ್ಲಿ ನಡೆದ ಸುಂಟರಗಾಳಿಯ ತಾಂಡವವನ್ನು ನೋಡಿ ಒಬ್ಬ ಜಪಾನೀ ಗೃಹಸ್ಥನು ಅಂದದ್ದೇನಂದರೆ, 'ನಮ್ಮಲ್ಲಿಯ ಸುಂಟರ ಗಾಳಿಯ ಮುಂದೆ ಈ ಸುಂಟರ ಗಾಳಿ ಏನೂ ಅಲ್ಲ. ನಮ್ಮಲ್ಲಿ ನಾಲ್ಕಾರು ದಿನಗಳ ವರೆಗೆ ಒಮ್ಮೊಮ್ಮೆ ಈ ಪರಿಸ್ಥಿತಿ ಹಾಗೆಯೇ ಇರುತ್ತದೆ.' ಆದರೂ ಜಪಾನಿಗಳು ಹೊಸ ಪಟ್ಟಣಗಳನ್ನು ಕಟ್ಟುವದನ್ನು ಬಿಟ್ಟಿಲ್ಲ. ಕಟ್ಟಡಗಳು ಬಿದ್ದ ಬಿದ್ದ ಹಾಗೆಲ್ಲ ಮತ್ತೆ ಕಟ್ಟುತ್ತ ಹೋಗುವರು! ಮಾನವನಲ್ಲಿಯ ಈ ಪುನರ್ನಿರ್ಮಾಣ ಶಕ್ತಿಯು ಅಗಾಧವಾದುದೆಂದೇ ಹೇಳಬಹುದು. ಕೂಸುಗಳು ದಂಡೆಯಲ್ಲಿ ಮಳಲಿನ ಮನೆ ಮಾಡಿ ಆಡುತ್ತಿರುವಾಗ ಅವುಗಳನ್ನು ಯಾರಾದರೂ ಮುರಿದರೆ ಮಕ್ಕಳು ಪುನಃ ಕಟ್ಟುವದನ್ನೆ ಕೈಕೊಳ್ಳುವವೇ ಹೊರತು ಅಳುತ್ತ ಕೂಡುವದಿಲ್ಲ.

× × ×

ಸೋಲಿನಿಂದ ನೊಂದ ಮನಸು ಕ್ಷಣಕೊತ್ತು ಖಿನ್ನವಾಗಿ ಮತ್ತೆ ಹೋರಾಟಕ್ಕೆ ಸಿದ್ಧವಾಗಬೇಕೇ ಹೊರತು ಕೈಕಾಲು ಕಳಕೊಂಡು ಕುಳಿತು ಉಪಯೋಗವಿಲ್ಲ. ಸೋಲುಗಾರಿಕೆಯ (ಡಿಫೀಟಿಝಮ್) ವೃತ್ತಿ ಹೇಡಿಯದು, ಶೂರನದಲ್ಲ. ಜೀವನದಲ್ಲಿ ಸೋಲು ಗೆಲವುಗಳು ಹಗಲಿರುಳು ಇದ್ದಂತೆ; ಅವು ಅಪರಿಹಾರ್ಯ. ಅವು ಯಾವದೇ ಕಾರ್ಯದ ಗುಣಧರ್ಮಗಳು ಹೊರತು ಅವುಗಳಿಂದ ನಮ್ಮ ಮನೋವೃತ್ತಿ ಬದಲಾಗುವ ಕಾರಣವಿಲ್ಲ.

೨. ಕರ್ನಾಟಕ ಪ್ರಾಂತೀಕರಣ

ಕರ್ನಾಟಕ ಪ್ರಾಂತದ್ದು ಏನಾಗುವದು? ಏಕೀಕರಣವಾಗುವದೊ ಇಲ್ಲವೊ? ಎಂದಾಗುವದು? ಈ ಮುಂತಾದ ಅನೇಕ ಪ್ರಶ್ನೆಗಳನ್ನು ಜನರು ನನ್ನನ್ನು ಕೇಳುವರು. ಭಾಷಾನುಗುಣ ಪ್ರಾಂತರಚನಾ ಸಮಿತಿಯು ನೇಮಿಸಲ್ಪಟ್ಟ ಬಳಿಕಂತೂ ಈ ಬಗ್ಗೆ ಕೇಳುವವರ ಸಂಖ್ಯೆ ಮಿತಿಮೀರಿದೆ. ಈ ಪ್ರಶ್ನೆಗೆ ನಾನೇ ಉತ್ತರ ಕೊಡುವದಕ್ಕಿಂತ ಮೊದಲು ನಡೆದು ಹೋದ ಒಂದು ಸಂಗತಿಯನ್ನು ಇಲ್ಲಿ ಹೇಳುವೆ.

× × ×

ಅವರು ಮೈಸೂರಿನವರು ಒಳ್ಳೆ ನುರಿತ ಕಾರ್ಯಕರ್ತರಲ್ಲೊಬ್ಬರು; ಶಾಂತ ಮನಸಿನವರು ಧೀರರು. ಸಹಸಾ ಕದಲದವರು. ಒಂದು ತಿಂಗಳಾಚೆ ನಾನು ಅವರಿಗೆ ಭೆಟ್ಟಿಯಾದೆ. ಅವರಿಗೆ ಒಂದು ಪ್ರಶ್ನೆ ಕೇಳಿದೆ. ಅತ್ತ ಭಾಷಾನುಗುಣ ಪ್ರಾಂತ ರಚನಾ ಸಮಿತಿ ಕೆಲಸ ಮಾಡುತ್ತಿದೆ, ಇತ್ತ ಮೈಸೂರಿನ ಹಲವು ಮುಖಂಡರು ಅಖಂಡ ಕರ್ನಾಟಕದ ಬಗ್ಗೆ ಉದಾಸೀನರಿದ್ದಾರೆ. ಈ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂದು ನಾನು ಕೇಳಿದೆನು. ಒಂದರೆಕ್ಷಣ ಶಾಂತವಾಗಿದ್ದು ಅವರು ಅಂದದ್ದು, ಏನು ಮಾಡುವದು? ಮೂವತ್ತು ವರುಷ ಮಾಡಿದ ಮಾಡಿಕೆ ಒಡೆದು ಹೋಯಿತು. ಮತ್ತೆ ಮಣ್ಣು ಮೆದ್ದಿ ಹೊಸ ಮಡಕೆ ಮಾಡುವದಕ್ಕೆ ಕೈಹಾಕಬೇಕು, ಮತ್ತೇನು? ನನಗೇನೂ ಈ ಸಮಿತಿಯ ಲಕ್ಷಣ ಚನ್ನಾಗಿ ತೋರುವದಿಲ್ಲ. ಅದೇ ಮೇರೆಗೆ ನಾಲ್ಕು ಮುಖಂಡರಿಗೆ ಬುದ್ಧಿ ಹೇಳಿ ವೇಳೆ ಹಾಳು ಮಾಡುವದಕ್ಕಿಂತ ಜನರಿಗೇ ನಾವು ನಾಲ್ಕು ಮಾತು ಹೇಳಬೇಕು. ಹೊಸದಾಗಿ ಮಣ್ಣು [illegible] ಮಾಡಬೇಕೆ?

× × ×

ಆ ಹಿರಿಯರು ಹೇಳಿದ ಮಾತುಗಳಲ್ಲಿ ಬೇಕಾದಷ್ಟು ಅರ್ಥ ತುಂಬಿಕೊಂಡಿದೆ. ನಾವು ಹೊಸದಾಗಿ ಪ್ರಯತ್ನ ಮಾಡಬೇಕು. [illegible] ಕರ್ನಾಟಕ [illegible] ಜನತಾ ಜನಾರ್ದನನ ಎದುರು ನಮ್ಮ [illegible] ಕಟ್ಟಬೇಕು. ಇದೇ ಅವರ ಮಾತಿನ ಅರ್ಥ, ಎಂದು ನಾನು ತಿಳಿದೆನು.

× × ×

ಭಾಷಾನುಗುಣ ಪ್ರಾಂತರಚನಾ ಸಮಿತಿಯು ಮೊನ್ನೆ ೨೧ ನೆಯ ತಾರೀಖಿನ ದಿವಸ ಎಲ್ಲ ಸಹಸಭಾಸದರೊಡನೆ ಸಭೆ ಸೇರಿತ್ತು. ಅಲ್ಲಿ ಕೊನೆಯ ಚರ್ಚೆಯಾಯಿತು ಎಂದು ಹೇಳಬಹುದು. ಕರ್ನಾಟಕದವರು ಎಲ್ಲ ಪ್ರಾಂತಗಳಿಗಿಂತ ತಮ್ಮ ಪಕ್ಷವನ್ನು ಬಹಳ ಸುಂದರವಾಗಿ ಮಂಡಿಸಿದರು ಎಂಬುದನ್ನು ಅಧ್ಯಕ್ಷರು ಎಲ್ಲ ಸಭಾಸದರಿಗೆ ಸ್ಪಷ್ಟವಾಗಿ ಹೇಳಿದರು. ಕರ್ನಾಟಕದ ಪರವಾಗಿ ಅಲ್ಲಿ ಇದ್ದ ಸಭಾಸದರು ತಮ್ಮ ಅಭಿಪ್ರಾಯವನ್ನು ನಿರ್ಧಾರವಾಗಿ ಸಭೆಯ ಮುಂದೆ ಇಟ್ಟರು. ಈ ಪ್ರಶ್ನೆಯನ್ನು ಮುಂದೆ ಹಾಕುವದು ರಾಷ್ಟ್ರದ ದೃಷ್ಟಿಯಿಂದ ಹಾಗೂ ವಿಶೇಷತಃ ಕರ್ನಾಟಕದ ದೃಷ್ಟಿಯಿಂದ ಯೋಗ್ಯವಾಗಲಾರದೆಂದು ಪ್ರತಿಪಾದಿಸಿದರು. ಸಮಿತಿಯವರು ತಮ್ಮ ವರದಿಯನ್ನು ಇದೇ ತಿಂಗಳ ೩೦ನೆಯ ತಾರೀಖಿನೊಳಗಾಗಿ ಒಪ್ಪಿಸಲಿಕ್ಕಿರುವರು. ಮುಂದೆ ಆ ವಿಷಯವು ಯಥಾವಕಾಶ ಘಟನಾ ಸಮಿತಿಯ ಮುಂದೆ ಬರುವದು. ಅಲ್ಲಿ ಇಡೀ ರಾಷ್ಟ್ರದ ಪ್ರತಿನಿಧಿಗಳು ವಿಚಾರ ಮಾಡುವರು. ಹಾಗೂ ಯಾವದೊಂದು ನಿರ್ಧಾರಕ್ಕೆ ಬರುವರು. ಆದರೆ ಕರ್ನಾಟಕದವರು, ಹಾಗೂ ಕರ್ನಾಟಕದ ಪ್ರತಿನಿಧಿಗಳು ತಮ್ಮ ಕರ್ತವ್ಯವನ್ನು ಸಾಕಷ್ಟು ದಕ್ಷತೆಯಿಂದ ಮಾಡಿರುವರು ಎಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಸಾಕ್ಷಿ ಪುರಾವೆ ಕೊಡುವ ವಿಷಯದಲ್ಲಿ, ಪಕ್ಷದ ಮಂಡನದ ವಿಷಯದಲ್ಲಿ, ಕರ್ನಾಟಕಸ್ಥರೆಲ್ಲರೂ ಬಹಳ ಉತ್ತಮ ರೀತಿಯಿಂದ ಕೆಲಸ ಮಾಡಿರುವರು. ಇನ್ನು ಯಶಾಪಯಶ ದೇವರನ್ನು ಕೂಡಿದೆ. ಆದರೆ ಪ್ರಯತ್ನ ಮಾತ್ರ ನಮ್ಮ ನಿಮ್ಮನ್ನು, ಮಾನವರನ್ನು ಕೂಡಿದೆ. 'ಲಾಭಾಲಾಭೌ ಜಯಾ ಜಯೌ' ಎಂಬ ಭಾವದಿಂದ ಪ್ರಯತ್ನ ಮಾಡುವದೇ ನಿಜವಾದ ಜಯವನ್ನು ಪಡೆಯುವ ಉತ್ತಮ ಮಾರ್ಗವು.

× × ×

[೧೦ನೆಯ ಪುಟ ನೋಡಿರಿ]

ದಿಲ್ಲಿಯಲ್ಲಿ ಡಾ. ವಿ. ಕೆ. ಆರ್. ವಿ. ರಾವ ಅವರು ಮನವಿ ಒಪ್ಪಿಸಲು ಹೋಗುವ ಮುನ್ನ



ಡಾ. ವಿ. ಕೆ. ಆರ್. ವಿ. ರಾವ ಅವರು ಹೊಸದಿಲ್ಲಿಯಲ್ಲಿ ದಾರ್ ಸಮಿತಿಯೆದುರು ೧೬-೧೧-೪೮ ಕ್ಕೆ ತಮ್ಮ ಸಾಕ್ಷಿ ನುಡಿಯಲು ಹೋಗುವ ಮುನ್ನ ತಮ್ಮ ಮಿತ್ರಮಂಡಳಿಯೊಡನೆ

ಎಡದಿಂದ ಬಲಕ್ಕೆ- ಡಾ. ಹರ್ಡಿಕರ, ಗುರುರಾವ ಪಾಳಸೇಕರ, ಡಾ ವಿ. ಕೆ. ಆರ್. ವಿ. ರಾವ, ರಂಗನಾಥ ದಿವಾಕರ, ಎಚ್. ಎಸ್. ಪಾಟೀಲ, ಎಸ್. ಆರ್. ಕಂಠಿ, ಎಸ್. ವಿ. ಕೃಷ್ಣಮೂರ್ತಿರಾವ, ಎಲ್. ಸಿದ್ದಲಿಂಗಪ್ಪ, ಜಿನರಾಜ ಹೆಗಡೆ.

ಕರ್ಮವೀರ

[illegible] ಕಾರ್ತಿಕ ಬ. ೧೧ ಸೋಮವಾರ

ಕಾಶ್ಮೀರ ಸಮಸ್ಯೆ

ಕಾಶ್ಮೀರಪ್ರಕರಣದಲ್ಲಿ ಪಾಕಿಸ್ತಾನ ಸರಕಾರವು ಎಷ್ಟೊಂದು ಆಕ್ರಮಕ ಧೋರಣವನ್ನು ವಹಿಸಿದೆಯೆಂಬುದು ಇದೀಗ ಸಿದ್ಧವಾಗಿಬಿಟ್ಟಿದೆ. ಭದ್ರತಾ ಮಂಡಳವು ನೇಮಿಸಿದ್ದ ಕಾಶ್ಮೀರ ಸಮಿತಿಗೆ ಕೂಡ ಅದು ಮನವರಿಕೆಯಾಗಿದೆ. ಪಾಕಿಸ್ತಾನವು ಆ ಸಮಿತಿಯೆದುರು ಸಾಕ್ಷಿ ಕೊಡುವಾಗ ತನ್ನ ಸೈನಿಕರು ಕಾಶ್ಮೀರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವದನ್ನು ಒಪ್ಪಿಕೊಂಡಿದೆ. ಪಾಕಿಸ್ತಾನ ಸೈನಿಕರು ಕಾಶ್ಮೀರ ಯುದ್ಧದಲ್ಲಿ ಭಾಗವಹಿಸುತ್ತಿರುವದಿಷ್ಟೇ ಅಲ್ಲ, ಪಾಕಿಸ್ತಾನ ಸೇನಾಪಕ್ಷದ, ನೇರವಾದ ನಿಯಂತ್ರಣದಲ್ಲಿಯೇ ಆಜಾದ ಸೈನಿಕರು ಕಾಶ್ಮೀರ ರಂಗದಲ್ಲಿ ಯುದ್ಧವನ್ನು ನಡೆಸಿರುವರೆಂಬುದು ಕಾಶ್ಮೀರ ಸಮಿತಿಯ ನಿದರ್ಶನಕ್ಕೆ ಬಂದಿದೆ. ಈ ಕಾರಣದಿಂದ ಕಾಶ್ಮೀರ ಪರಿಸ್ಥಿತಿಯೇ ಹೊಸದಾಗಿ ಮಾರ್ಪಟ್ಟಂತಾಗಿದೆಯೆಂದು ಸಮಿತಿಯ ಅಭಿಪ್ರಾಯ. ಸಮಿತಿಯ ಧುರೀಣರಾದ ಅಲ್ಫ್ರೇಡೊ ಲೋಝಾನೋ ಇವರು ಭದ್ರತಾ ಮಂಡಳಕ್ಕೆ ವರದಿಯೊಪ್ಪಿಸುವಾಗ ಈ ಮಾತನ್ನೂ ಹೇಳಿರುವರು. ಹಿಂದುಸ್ತಾನದ ಪರವಾಗಿ ಸರ್ ಗಿರಿಜಾಶಂಕರರು ಸ್ಪಷ್ಟೀಕರಣ ಮಾಡಿರುವರು.

ಪಾಕಿಸ್ತಾನದ ವಿದೇಶ ಮಂತ್ರಿ ಜಾಫರುಲ್ಲಾಖಾನರು ಭದ್ರತಾ ಮಂಡಳಕ್ಕೊಂದು ಪತ್ರ ಬರೆದು, ಹಿಂದುಸ್ತಾನವು ಪಶ್ಚಿಮ ಕಾಶ್ಮೀರ ಪ್ರದೇಶವನ್ನು ವಶಪಡಿಸಿಕೊಳ್ಳಲು ದೊಡ್ಡ ದಾಳಿಯನ್ನೇ ಪ್ರಾರಂಭಿಸಿದೆ. ಇದನ್ನು ತಡೆಯಲು ಭದ್ರತಾ ಮಂಡಳವು ಬೇಗ ಉಪಾಯವನ್ನು ಕೈಕೊಳ್ಳದಿದ್ದರೆ ಪಾಕಿಸ್ತಾನವು ಹಿಂದುಸ್ತಾನದ ವಿರುದ್ಧ ಪ್ರಚಂಡ ಪ್ರಮಾಣದಲ್ಲಿ ಪ್ರತಿದಾಳಿಯನ್ನು ಪ್ರಾರಂಭಿಸಬೇಕಾಗುವದು. ಇದರಿಂದ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಭೀಕರ ಯುದ್ಧ ನಡೆಯಬಹುದು ಎಂದು ಮುಂತಾಗಿ ಎಚ್ಚರಿಕೆ ಕೊಟ್ಟಿದ್ದಾರೆ. ಕಾಶ್ಮೀರ ಚಟುವಟಿಕೆ ಪ್ರಾರಂಭವಾದಂದಿನಿಂದ ಅದನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದವರಿಗೆ ಹಿಂದುಸ್ತಾನ ಸರಕಾರದ ಧೋರಣವು ಎಷ್ಟು ಸಮಂಜಸ ಮತ್ತು ಕೇವಲ ಆತ್ಮರಕ್ಷಣೆಯದಾಗಿದೆ ಎಂಬುದು ಸ್ಪಷ್ಟವಾಗದಿರದು. ಕಾಶ್ಮೀರದ ಮೇಲೆ ಅನ್ಯಾಯವಾಗಿ, ದಾಳಿಗಾರರ ಹೆಸರಿನಲ್ಲಿ ಪಾಕಿಸ್ತಾನದ ಸೈನಿಕರು ನಡೆಸಿದ ದಾಳಿಯನ್ನು ಹತ್ತಿಕ್ಕುವುದಕ್ಕಾಗಿಯೇ ಹಿಂದುಸ್ತಾನ ಸರಕಾರವು ತನ್ನ ಸೈನಿಕರನ್ನು ಸಹಾಯಕ್ಕೆಕೊಟ್ಟಿರುವದು. ಪಾಕಿಸ್ತಾನದ ಮೇಲೆ ದಾಳಿ ಮಾಡಲಿಕ್ಕಾಗಲಿ ಇಲ್ಲವೆ ಅದರ ಪ್ರದೇಶವನ್ನು ವಶಪಡಿಸಿಕೊಳ್ಳುವುದಕ್ಕಾಗಲಿ ಹಿಂದುಸ್ತಾನ ಸರಕಾರವೆಂದೂ ಬಯಸಿಲ್ಲ, ಈಗಲೂ ಬಯಸುವದಿಲ್ಲ. ಕಾಶ್ಮೀರಯುದ್ಧದಲ್ಲಿ ಅನ್ಯಾಯವಾಗಿ ತಮ್ಮ ಸೈನಿಕರನ್ನೂ ಸೇನಾಪಕ್ಷದ ಸಲಹೆ ಸೂಚನೆಗಳನ್ನೂ ಕೊಟ್ಟು ಆಕ್ರಮಕ ವೃತ್ತಿಯನ್ನು ತಳೆದ ಪಾಕಿಸ್ತಾನವು ತಿರುಗಿ ಹಿಂದುಸ್ತಾನವನ್ನೆ ದೂಷಿಸಬೇಕೆಂದರೆ ಅದೆಂತು ಅದಕ್ಕೆ ಸಲ್ಲುವದೊ ತಿಳಿಯದು!

ಜಾಫರುಲ್ಲಾಖಾನರ ಈ ಎಚ್ಚರಿಕೆಗೆ ಹಿಂದುಸ್ತಾನ ಸರಕಾರದ ಅನಧಿಕೃತ ಪ್ರತಿಕ್ರಿಯೆಯೂ ಪ್ರಸಿದ್ಧವಾಗಿದೆ. ಭದ್ರತಾ ಮಂಡಳವು ಆದೇಶವಿತ್ತರೂ ಯುದ್ಧ ನಿಲ್ಲಿಸಲು ತನ್ನ ಒಪ್ಪಿಗೆಯನ್ನು ಕೊಡದಿದ್ದ ಪಾಕಿಸ್ತಾನವು ಈಗ ಹಿಂದುಸ್ತಾನವನ್ನು ದೂಷಿಸುವದರಲ್ಲಿ ಅರ್ಥವೇನಿದೆ? ಭದ್ರತಾಮಂಡಳದ ಬಿನ್ನಹದ ಮೇರೆಗೆ ಯುದ್ಧ ನಿಲ್ಲಿಸಲು ಹಿಂದುಸ್ತಾನವು ತನ್ನ ಒಪ್ಪಿಗೆಯಿತ್ತಿತ್ತು. ಆದರೆ ಪ್ರತಿಪಕ್ಷಿಯು ಅದಕ್ಕೆ ಒಪ್ಪದ್ದರಿಂದ ಅನಿವಾರ್ಯವಾಗಿ ಹಿಂದುಸ್ತಾನವು ತನ್ನ ಸಂರಕ್ಷಕ ಧೋರಣವನ್ನು ಮುಂದುವರಿಸಬೇಕಾಯಿತು. ದಾಳಿಗಾರರು ಕಾಶ್ಮೀರವನ್ನು ಬಿಟ್ಟು ಹೋಗುವ ವರೆಗೆ ಹಿಂದುಸ್ತಾನ ಸರಕಾರವು ತನ್ನ ಚಟುವಟಿಕೆಗಳನ್ನು ಬಿಡಲಾರದೆಂಬುದು ಸುಸ್ಪಷ್ಟವಿದೆ. ಹಿಂದುಸ್ತಾನದಲ್ಲಿ ಸೇರ್ಪಡೆ ಹೊಂದಿದ ಕಾಶ್ಮೀರಸಂಸ್ಥಾನದ ಮೇಲೆ ಪರಕೀಯರು ದಾಳಿ ಮಾಡುತ್ತಿರುವಾಗ ತಾನು ಅದೆಂತು ಕಣ್ಣು ಮುಚ್ಚಿಕೊಂಡು ಕೂಡ್ರಬಲ್ಲದು? ಜಾಫರುಲ್ಲಾಖಾನರು ಕೊಟ್ಟ ಈ ಆಹ್ವಾನವನ್ನು ಸ್ವೀಕರಿಸಲು ಹಿಂದುಸ್ತಾನ ಸರಕಾರವೂ ಸಿದ್ಧವಿದೆಯೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಜಾಫರುಲ್ಲಾಖಾನರಂಥವರು ಕಾಲುಕೆದರಿ ಹಿಂದುಸ್ತಾನದ ಕೂಡ ಯುದ್ಧವನ್ನು ಹೂಡಬಯಸಿದರೆ ಹಿಂದುಸ್ತಾನವೂ ಅದಕ್ಕೆ ನಿರ್ವಾಹವಿಲ್ಲದೆ ಸಿದ್ಧವಾಗಬೇಕಾಗುವದು. ಪಾಕಿಸ್ತಾನ ಸರಕಾರದವರಲ್ಲಿ ಇನ್ನು ಮೇಲಾದರೂ ವಿವೇಕೋದಯವಾಗಿ ಎರಡೂ ರಾಷ್ಟ್ರಗಳು ಸೌಹಾರ್ದದಿಂದ ಇರುವಂತೆ ತಮ್ಮ ಧೋರಣ ಮತ್ತು ಚಟುವಟಿಕೆಗಳನ್ನು ಅವರು ಮಾರ್ಪಡಿಸಿಕೊಳ್ಳಲಿ ಎಂದು ನಾವು ಹಾರಯಿಸುತ್ತೇವೆ.

ದಿಲ್ಲಿಯಲ್ಲಿ ಬ್ರಿಟನ್‌ದ ಹಾಯುಕಮೀಶನರರು



ಹಿಂದುಸ್ತಾನದಲ್ಲಿ ಬ್ರಿಟನ್‌ದ ಹೊಸ ಹಾಯುಕಮೀಶನರರಾದ ಸರ್ ಆರ್ಚಿಬಾಲ್ಡ ನೈ ಇವರಿಗೆ ದಿಲ್ಲಿಯಲ್ಲಿ ಪ್ರಚಂಡ ಸ್ವಾಗತವೀಯಲಾಯಿತು. ಈ ಚಿತ್ರದಲ್ಲಿ ಚೀನದ ರಾಯಭಾರಿಗಳಾದ ಡಾ. ಲೋ ಚಿಯಾ ಲುಯೆನ್, ಬ್ರಿಟನದ ಡೆಪುಟಿ ಹಾಯುಕಮೀಶನರ ಸಿ. ಬಿ. ಸಾಯುಮನ್ ಮತ್ತು ಲೆ. ಜ. ಸರ್ ಆರ್ಚಿಬಾಲ್ಡ ನೈ ಇವರು ಇರುವರು.

ವಾರದ ಸಿಂಹಾವಲೋಕನ

ಕಾಶ್ಮೀರ ಸಮಿತಿಯ ವರದಿ

ಭದ್ರತಾಮಂಡಲವು ನೇಮಿಸಿದ್ದ ಕಾಶ್ಮೀರ ಸಮಿತಿಯು ತನ್ನ ತಾತ್ಪೂರ್ತಿಕ ವರದಿಯನ್ನು ಇದೇ ತಾನೇ ಪ್ರಸಿದ್ಧಿಸಿದೆ. ಕಾಶ್ಮೀರ ಚಟುವಟಿಕೆಗಳಲ್ಲಿ ಪಾಕಿಸ್ತಾನ ಸೈನಿಕರು ಭಾಗ ವಹಿಸುತ್ತಿರುವದು ಮತ್ತು ಕಾಶ್ಮೀರ ಸೇನಾಪಕ್ಷದ ಸಲಹೆ ಸಹಾಯ ದಾಳಿಗಾರರಿಗೆ ಸಿಕ್ಕುತ್ತಿರುವದು ಸಮಿತಿಗೆ ಮನವರಿಕೆಯಾಗಿದ್ದರೂ ಪಾಕಿಸ್ತಾನವನ್ನು ಆಕ್ರಮಕ ರಾಷ್ಟ್ರವೆಂದು ಸಾರಿ ಅದರ ವಿರುದ್ಧ ಯೋಗ್ಯ ಶಾಸನ ಕ್ರಮ ತೆಗೆದುಕೊಳ್ಳತಕ್ಕದ್ದೆಂಬ ಸೂಚನೆಯನ್ನು ಸಮಿತಿಯು ಮಾಡದಿರುವದು ಆಶ್ಚರ್ಯಕರ ಮತ್ತು ವಿಷಾದಾಸ್ಪದವಾಗಿದೆ. ಆಕ್ರಮಕ ರಾಷ್ಟ್ರಗಳಿಗೆ ಇಂತು ಸವಲತ್ತು ತೋರಿಸುತ್ತ ಹೋಗುವುದೆ ಜಗತ್ತಿನ ಪರಿಸ್ಥಿತಿ ಹದಗೆಡುವುದಕ್ಕೆ ಕಾರಣವಾಗುತ್ತದೆ. ಪಾಕಿಸ್ತಾನವು ಯುದ್ಧ ನಿಲ್ಲಿಸುವದಕ್ಕೆ ಒಪ್ಪದ್ದರಿಂದ ಜಮ್ಮೂ ಮತ್ತು ಕಾಶ್ಮೀರಗಳಲ್ಲಿ ಜನಮತಗಣನೆ ನಡೆಸುವದು ಕಠಿನವಾಗುವದೆಂದು ಸಮಿತಿಯು ಅಭಿಪ್ರಾಯಪಟ್ಟಿದೆ. ಜನತೆಯ ಅಭಿಪ್ರಾಯವನ್ನು ಲಕ್ಷಿಸಿ ಎರಡೂ ಪಕ್ಷದವರು ಪರಸ್ಪರ ಸಮ್ಮತವಾಗುವಂತೆ ಒಡಂಬಡಿಕೆಯನ್ನು ಮಾಡಿಕೊಳ್ಳುವದು ಶಕ್ಯವಾಗಲೆಂದು ಸಮಿತಿಯು ಮಧ್ಯದಲ್ಲಿಯೇ ಕೈಬಿಟ್ಟಿದೆ. ಸಮಿತಿಯು ಈ ರೀತಿ ತನ್ನ ಮೇಲಿನ ಹೊಣೆಯನ್ನು ಹಾರಿಸಿಕೊಳ್ಳಲು ಪ್ರಯತ್ನಿಸದೆ ನಿರ್ದಿಷ್ಟವಾದ ಅಭಿಪ್ರಾಯವನ್ನು ವ್ಯಕ್ತ ಮಾಡಬೇಕಾಗಿದ್ದಿತು. ಹೊಣೆಗಾರ ಭದ್ರತಾಮಂಡಳವು ಹೀಗೆ ಮೀನಮೇಷ ವೃತ್ತಿಯನ್ನು ತಾಳುತ್ತಿರುವದು ಸರಿಯಲ್ಲ ಇನ್ನಾದರೂ ಭದ್ರತಾ ಮಂಡಳವು ನಿರ್ದಿಷ್ಟವಾದ ಧೋರಣ ಸ್ವೀಕರಿಸಿ ಆಕ್ರಮಕ ರಾಷ್ಟ್ರಗಳೆಂದು ಸಿದ್ಧವಾದವುಗಳ ಮೇಲೆ ಯೋಗ್ಯ ಶಾಸನ ಕ್ರಮವನ್ನು ಕೈಕೊಂಡರೆ ಅನೇಕ ಅಂತರ್ ರಾಷ್ಟ್ರೀಯ ಸಮಸ್ಯೆಗಳು ಬಗೆಹರಿದು ಜಾಗತಿಕ ಪರಿಸ್ಥಿತಿ ಬಹು ಮಟ್ಟಿಗೆ ಸುಧಾರಿಸಬಲ್ಲದು.

ಮೈಸೂರು ನ್ಯಾಯಾಧೀಶರ ನಿವೃತ್ತಿ!

ಪ್ರಜಾ ಪ್ರಭುತ್ವದ ಯುಗದಲ್ಲಿ ಪ್ರಜಾ ಪ್ರತಿನಿಧಿಗಳಾದ ಮೈಸೂರು ಸಂಸ್ಥಾನ ಸರಕಾರದವರು ಅನುಸರಿಸುತ್ತಿರುವ ಧೋರಣವು ಟೀಕೆಗೆ ಅವಕಾಶವೀಯುತ್ತಿರುವದು ನಿಜವಾಗಿ ವಿಷಾದಕರವಾಗಿದೆ. ಗೋಪಾಳರಾವ ವಿಚಾರಣಾ ಸಮಿತಿಯ ಸಂಬಂಧದಲ್ಲಿ ಸರಕಾರವು ಅನುಸರಿಸಿದ ಮಾರ್ಗವು ನ್ಯಾಯ್ಯವಾದುದಿರಲಿಲ್ಲೆಂದು ಬರೆದ ಸ್ವಲ್ಪ ಕಾಲದಲ್ಲಿಯೇ ಶ್ರೇಷ್ಠ ನ್ಯಾಯಾಧೀಶರ ಒತ್ತಾಯದ ನಿವೃತ್ತಿಯ ಸಂಬಂಧದಲ್ಲಿ ಟೀಕೆ ಮಾಡುವ ಪ್ರಸಂಗ ಬಂದುದು ನಿಜವಾಗಿ ಶೋಚನೀಯವಾಗಿದೆ. ಕಳೆದ ಜೂನದಲ್ಲಿಯೇ ನೇಮಕ ಹೊಂದಿದ್ದ ಮೈಸೂರಿನ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಶ್ರೀ ಜಿ. ಪರಮಶಿವಯ್ಯನವರನ್ನು ನಿವೃತ್ತ ಮಾಡಿ ಅವರ ಸ್ಥಳಕ್ಕೆ ಶ್ರೀ ಮೇದಪ್ಪನವರನ್ನು ನೇಮಿಸಲಾಗಿದೆ. ನ್ಯಾಯಮೂರ್ತಿ ಪರಮಶಿವಯ್ಯನವರು ೧೯೫೦ ನವಂಬರದಲ್ಲಿ ನಿವೃತ್ತರಾಗತಕ್ಕವರಿದ್ದರು. ಎರಡು ವರ್ಷ ಮುಂಚಿತವಾಗಿಯೇ ಅವರನ್ನೇಕೆ ನಿವೃತ್ತಗೊಳಿಸಿದರೊ ತಿಳಿಯದಾಗಿದೆ! ಸರಕಾರದವರು ಕೊಟ್ಟ ಹುಕುಮಿನಲ್ಲಿ ಕಾರಣಗಳನ್ನೇನೂ ಕೊಟ್ಟಿರುವುದಿಲ್ಲ. ಸ್ವತಃ ಪರಮಶಿವಯ್ಯನವರೂ ತಮ್ಮನ್ನು ನಿವೃತ್ತ ಮಾಡಬೇಕೆಂದು ಕೇಳಿಕೊಂಡದ್ದು ಎಲ್ಲಿಯೂ ಪ್ರಸಿದ್ಧವಾಗಿಲ್ಲ; ಕಾರಣಗಳನ್ನು ಕೊಡದೆ ಶ್ರೇಷ್ಠ ನ್ಯಾಯಾಧೀಶರಂಥ ಹೊಣೆಗಾರ ಅಧಿಕಾರಿಗಳನ್ನು ನಿವೃತ್ತ ಮಾಡುವದೆಂದರೆ ಸರಕಾರದ ಧೋರಣದ ಕೀಲು ಎಲ್ಲಿಯೋ ತಪ್ಪುತ್ತಿದೆಂದು ಹೇಳಬೇಕಾಗುವದು. ಕಾರಣ ಕೊಡದೆ ನಿವೃತ್ತ ಮಾಡುವದರಿಂದ ಬಗೆ ಬಗೆಯ ತರ್ಕ ಊಹೆಗಳಿಗೆ ಸರಕಾರದವರೇ ಅವಕಾಶ ಕೊಡುತ್ತಿರುವರು. ಗೋಪಾಳರಾವ ವಿಚಾರಣಾ ಸಮಿತಿಯ ಸಂಬಂಧದಲ್ಲಿ ಶ್ರೀ ಪರಮಶಿವಯ್ಯನವರು ಸರಕಾರದ ವಿರುದ್ಧ ತೀರ್ಪು ಕೊಟ್ಟಿದ್ದೇ ಅವರ ನಿವೃತ್ತಿಗೆ ಕಾರಣವೆಂದು ಅನೇಕರು ತರ್ಕಿಸುತ್ತಿರುವರು. ಇದು ನಿಜವಾಗಿದ್ದರೆ ನ್ಯಾಯದಾನದಲ್ಲಿ ಸರಕಾರದವರು ಅನ್ಯಾಯವಾಗಿ ಕೈಹಾಕುತ್ತಿರುವರೆಂದು ವಿಷಾದಿಸಬೇಕಾಗುವದು. ಮೈಸೂರು ಸರಕಾರದವರು ಈ ಪ್ರಕರಣದಲ್ಲಿ ತಮ್ಮ ಸ್ಪಷ್ಟೀಕರಣವನ್ನು ಪ್ರಸಿದ್ಧಿಸುವದವಶ್ಯವಾಗಿದೆ.

ಅಲ್ಪಸಂಖ್ಯರ ರಕ್ಷಣೆ

ಪೂರ್ವ ಪಾಕಿಸ್ತಾನದಲ್ಲಿಯ ಅಲ್ಪಸಂಖ್ಯ ಹಿಂದುಗಳಿಗೆ ಅಲ್ಲಿನ ಬಹುಸಂಖ್ಯ ಮುಸಲ್ಮಾನರಿಂದ ಬಗೆ ಬಗೆಯ ತೊಂದರೆಯಾಗುತ್ತಿರುವದು ನಿಜವಾಗಿಯೂ ಶೋಚನೀಯವಾಗಿದೆ. ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಕತ ಅಲ್ಲೀಖಾನರು ಢಾಕಾದಲ್ಲಿ ಭಾಷಣ ಮಾಡುತ್ತ ಬಹುಸಂಖ್ಯ ಜಾತಿಯವರು ಅಲ್ಪಸಂಖ್ಯ ಜಾತಿಯವರ ರಕ್ಷಣೆಯ ಹೊಣೆ ಹೊರುವದು, ಅವರು ತಮ್ಮ ಮನೆ ಮಾರುಗಳನ್ನು ಬಿಟ್ಟು ಹೋಗದಂತೆ ಅಭಯ ಪ್ರದಾನಮಾಡುವದು ಕರ್ತವ್ಯವಾಗಿದೆ; ದುರ್ಬಲರನ್ನು ರಕ್ಷಿಸತಕ್ಕದ್ದು ಎಂಬುದಾಗಿ ಇಸ್ಲಾಮದ ಆದೇಶವಿದೆ. ಕಾಯದೆ ಆಜಂ ಜಿನ್ನಾ ಇವರೂ ಈ ಬಗ್ಗೆ ಹಿಂದೆ ಅನೇಕ ಸಲ ನಮಗೆ ಬೋಧಿಸಿದ್ದುಂಟು ಎಂದು ಮುಂತಾಗಿ ಹೇಳಿದರು. ಪಾಕಿಸ್ತಾನದ ಗವರ್ನರ ಜನರಲ್ ನಾಜೀಮುದ್ದೀನರೂ ಇದೇ ಬಗೆಯ ಬೋಧ ಮಾಡಿರವರು. ಪ. ಬಂಗಾಲದ ಮುಖ್ಯಮಂತ್ರಿಗಳಾದ ಡಾ. ಬಿಧನಚಂದ್ರ ರಾಯರು ಪೂರ್ವ ಪಾಕಿಸ್ತಾನದಲ್ಲಿ ನಡೆದ ಹಿಂದುಗಳ ಛಲನೆಯನ್ನು ವಿವರಿಸಿ ಪಾಕಿಸ್ತಾನ ಸರಕಾರ ಮತ್ತು ಮುಸ್ಲಿಮರು ಈ ಬಗ್ಗೆ ಗಂಭೀರ ರೀತಿಯಿಂದ ವಿಚಾರಿಸಬೇಕೆಂದು ಕೇಳಿಕೊಂಡಿರುವರು. ಪೂರ್ವ ಪಾಕಿಸ್ತಾನ ಸರಕಾರದವರು ಹಿಂದುಗಳ ರಕ್ಷಣೆಯ ಬಗ್ಗೆ ಬದ್ಧ ಪ್ರತಿಜ್ಞರಾಗಿದ್ದರೂ ಅವರ ಕೃತಿಗಳು ಮಾತ್ರ ಇದಕ್ಕೆ ತೀರ ವಿರುದ್ಧವಾಗಿವೆ. ಹಿಂದುಗಳನ್ನು ಬಹುಸಂಖ್ಯ ಪ್ರಮಾಣದಲ್ಲಿ ಸೆರೆಹಿಡಿಯುವದು, ಅವರಲ್ಲಿದ್ದ ಮದ್ದು ಗುಂಡುಗಳನ್ನೆಲ್ಲ ..ಂಪೂರ್ಣವಾಗಿ ಜಪ್ತ ಮಾಡುವದು, ಹಿಂದು ಪತ್ರಿಕೆಗಳನ್ನೆಲ್ಲ ನಿರ್ಬಂಧಿಸುವದು ಇವೇ ಮೊದಲಾದ ಕೃತಿಗಳು ಅಲ್ಲಿ ಅನಿರ್ಬಂಧವಾಗಿ ಸಾಗಿವೆ. ಪಾಕಿಸ್ತಾನದಲ್ಲಿ ಹಿಂದುಗಳಿಗೆ ಸ್ಥಾನವಿಲ್ಲ ಎಂಬುದಾಗಿ ಹಿಂದುಗಳ ಅಭಿಪ್ರಾಯವಾಗುವಂತೆ ಮುಸಲ್ಮಾನರುವ ರ್ತಿಸುತ್ತಿರುವರು ಎಂದು ಶ್ರೀ. ಪ್ರಕಾಶರು ಅಭಿಪ್ರಾಯಪಟ್ಟಿದ್ದಾರೆ. ಜನಾಬ ಲಿಯಾಕತ ಅಲ್ಲಿಖಾನರು ತಮ್ಮ ಸಂಚಾರದಲ್ಲಿ ಪ್ರತ್ಯಕ್ಷವಾಗಿ ಇದೆಲ್ಲವನ್ನು ನೋಡಿರಲು ಸಾಕು ಇನ್ನು ಮೇಲಾದರೂ ಈ ಬಗೆಯ ಛಲನೆ ನಡೆಯದಂತೆ ಅವರು ನೋಡಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಔದ್ಯಮಿಕ ಕೂಲಿಕಾರರು

ಸ್ವಾತಂತ್ರ್ಯವನ್ನು ಪಡೆದ ಹಿಂದುಸ್ತಾನವು ತನ್ನ ಉತ್ಪಾದನೆಯನ್ನು ಸರ್ವ ವಿಧವಾಗಿ ಹೆಚ್ಚಿಸಿಕೊಳ್ಳುವದು ಅವಶ್ಯವಾಗಿದೆ. ಸರಕಾರದವರು ಈ ದಿಸೆಯಲ್ಲಿ ಸತತ ಪ್ರಯತ್ನಿಸುತ್ತಿರುವದು ಅಭಿನಂದನೀಯವಾಗಿದೆ. ಬಂಡವಲುಗಾರರು ಮತ್ತು ಕೂಲಿಕಾರರಲ್ಲಿ ಸೌಹಾರ್ದವುಂಟಾಗಬೇಕು; ಕೂಲಿಕಾರರಿಗೆ ಯೋಗ್ಯ ವೇತನ ದೊರೆತು ರಾಷ್ಟ್ರದ ಉತ್ಪತ್ತಿಯನ್ನು ಹೆಚ್ಚಿಸುವಲ್ಲಿ ಅವರು ಉತ್ಸಾಹದಿಂದ ಪರಿಶ್ರಮ ಪಡಬೇಕು ಎಂಬುದೇ ಕೇಂದ್ರ ಸರಕಾರದ ಮನೀಷೆಯಾಗಿದೆ. ಈ ದೃಷ್ಟಿಯಿಂದಲೆ ಕೇಂದ್ರ ಸರಕಾರದವರು ಬಂಡವಲುದಾರರು ಮತ್ತು ಕೂಲಿಕಾರರಲ್ಲಿ ತಾತ್ಪೂರ್ತಿಕ ಒಡಂಬಡಿಕೆ ಮಾಡಿಸಿರುವರು. ತತ್ಪರಿಣಾಮವಾಗಿ ಕೂಲಿಕಾರ ಮತ್ತು ಒಡೆಯರಲ್ಲಿ ಬಹಳಮಟ್ಟಿಗೆ ಸೌಹಾರ್ದ ಬೆಳೆಯುತ್ತಿದೆ ಎಂಬುದನ್ನು ಹಿಂದಿನ ಒಂದುವರುಷದ ಅನುಭವದಿಂದ ಕಂಡುಕೊಳ್ಳಬಹುದಾಗಿದೆ. ಈ ವರುಷದ ಮೊದಲಿನ ಎಂಟು ತಿಂಗಳಲ್ಲಿ ಸುಮಾರು ೧೦ ಲಕ್ಷ ಕೂಲಿಕಾರರ ೭೦ ಲಕ್ಷ ದಿನಗಳು ಸಂಪು, ಹೊರಗೀಲಿ ಮೊದಲಾದ ಕಾರಣಗಳಿಗಾಗಿ ನಿರರ್ಥಕವಾದುವೆಂದೂ ಕಳೆದ ವರುಷ ಇಷ್ಟು ಅವಧಿಯಲ್ಲಿ ೨೦ ಲಕ್ಷ ಕೂಲಿಕಾರರ ೧೬.೫ ಲಕ್ಷ ಕೆಲಸದ ದಿನಗಳು ನಿರರ್ಥಕವಾಗಿದ್ದವೆಂದೂ ಕೂಲಿಕಾರ ಮಂತ್ರಿಗಳು ಲಖನೌದಲ್ಲಿ ಕೂಡಿದ ಕೇಂದ್ರ ಕೂಲಿಕಾರ ಸಲಹೆ ಮಂಡಳದ ಸಭೆಯಲ್ಲಿ ಹೇಳಿದರು. ಇದನ್ನು ನೋಡಿದರೆ ಸರಕಾರದವರ ಪ್ರಯತ್ನಕ್ಕೆ ಯಶಸ್ಸು ಸಿಕ್ಕುತ್ತಿದೆಯೆಂಬುದು ಗೊತ್ತಾಗುವದು. ಕೂಲಿಕಾರರಿಗೆ ಯೋಗ್ಯವಾದ ಕೂಲಿ ಮತ್ತು ಉಳಿದ ಸೌಕರ್ಯ ಮೊದಲಾದ ವಿವರಗಳ ವಿಚಾರ ಮಾಡಿ ವರದಿ ಒಪ್ಪಿಸಲು ಕೂಲಿಕಾರರು ಬಂಡವಲುದಾರರು ಮತ್ತು ಸರಕಾರದ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಬೇಕೆಂದು ಗೊತ್ತಾಗಿದೆ. ಈ ಸಮಿತಿಯವರು ಆದಷ್ಟು ಬೇಗ ತಮ್ಮ ಕಾರ್ಯವನ್ನು ನಿರ್ವಹಿಸುವರೆಂದು ನಂಬಲಾಗಿದೆ ಸದ್ಯದ ಪರಿಸ್ಥಿತಿಯಲ್ಲಿ ಸಂಪು ಮುಂತಾದವುಗಳಿಗೆ ಅವಕಾಶಕೊಡದೆ ಉತ್ಪಾದನೆಯನ್ನು ಹೆಚ್ಚಿಸುವದು ಅತ್ಯವಶ್ಯವಾಗಿದೆ.

ಮಣ್ಣಿನ ಮನೆಗಳು

೧

ಮಾನವ ನಾಗರಿಕತೆಯ ಪ್ರಾರಂಭ ಕಾಲದಿಂದಲೂ ಮಣ್ಣು ಕಟ್ಟಡಗಳಿಗಾಗಿ ಉಪಯೋಗಿಸಲಾಗುತ್ತದೆ. ಸಾಮ್ರಾಜ್ಯಗಳೆಲ್ಲ ಮಣ್ಣನ್ನು ತಮ್ಮ ಶಿಲ್ಪ ಕಲೆಯ ಮುಖ್ಯ ಸಾಧನ ಸಾಮಗ್ರಿಯೆಂದು ಇಟ್ಟುಕೊಂಡಿದ್ದವು. ಚೀನ, ಉತ್ತರ ಹಿಂದುಸ್ತಾನ, ಪೆರು, ಮೆಕ್ಸಿಕೊ ಆಫ್ರಿಕೆಯ ಉತ್ತರ ಕರಾವಳಿ ಮತ್ತು ಏಶಿಯ ಮಾಯಿನರ ಮೊದಲಾದ ರಾಷ್ಟ್ರಗಳ ಪ್ರಾಚೀನ ನಾಗರಿಕತೆಗೆ ಮಣ್ಣಿನ ಹೊರತು ಕಟ್ಟಡದ ಬೇರೆ ಸಾಧನವೇ ಗೊತ್ತಿರಲಿಲ್ಲ ಮತ್ತು ತಮ್ಮ ಮನೆ, ಅರಮನೆ ಮತ್ತು ಕೋಟೆಗಳನ್ನೆಲ್ಲ ಮಣ್ಣಿನಿಂದಲೆ ಕಟ್ಟಿದ್ದುಂಟು.

ಮಣ್ಣಿನಿಂದ ಕಟ್ಟಿದ ಕಟ್ಟಡಗಳ ವಿವಿಧ ಮಾದರಿಗಳಲ್ಲಿ ಕಟ್ಟಿಗೆಯ ಪಡಿಯಚ್ಚಿನಲ್ಲಿ ಮಣ್ಣು ತುಂಬಿ ಗೋಡೆಗಳನ್ನು ಕಟ್ಟುವದನ್ನು ಪ್ರಾಮುಖ್ಯವಾಗಿ ಹೇಳಬೇಕಾಗಿದೆ. ಏಕೆಂದರೆ ಇಂಥ ಗೋಡೆಗಳು ಬಹಳ ಗಟ್ಟಿಯಾಗಿ ಸಾವಿರಾರು ವರುಷಗಳ ವರೆಗೆ ಉಳಿಯುವವು. ರೋಮು ಇತಿಹಾಸಕಾರರಾದ ಪ್ಲಿನಿಯವರ ಕಾಲಕ್ಕೆ ಕೂಡ ಕಿಲ್ಲೆಗಳು ನೂರಾರು ವರುಷಗಳ ಹಿಂದಿನವೆಂದು ಹೆಸರುವಾಸಿಯಾಗಿದ್ದವು. ಕಟ್ಟಡದ ಅಚ್ಚಿನ ಪದ್ಧತಿಯು ಬಹಳ ಮಹತ್ವದ್ದೆಂದು ಪರಿಗಣಿಸಲಾಗುತಿದ್ದಿತು. ಅಂತೆಯೆ ಪ್ಲಿನಿಯವರು ವಿವರವಾಗಿ ಇದನ್ನು ವರ್ಣಿಸಿದ್ದಾರೆ. ರೋಮನ್ನರು ಸಾಮ್ರಾಜ್ಯದಲ್ಲೆಲ್ಲ ಕಟ್ಟಡಗಳಿಗೆ ಈ ಅಚ್ಚಿನ ಪದ್ಧತಿಯನ್ನೆ ಉಪಯೋಗಿಸಲಾಗುತಿದ್ದಿತು. ಅರಿಲಿನಲ್ಲಿ ನೈಸರ್ಗಿಕ ಕಲ್ಲುರಾಳವನ್ನು ಕೂಡಿಸಿ ಅದನ್ನು ಹೆಚ್ಚು ಗಟ್ಟಿ ಮಾಡುವ ಪದ್ಧತಿಯನ್ನು ಗಾಲರಿಂದ ಅವರು ಕಲಿತುಕೊಂಡಿದ್ದರು. ಒಣಗಿದ ಲಾವಾರಸವನ್ನು ಪುಡಿ ಮಾಡಿ ಒಂದು ಬಗೆಯ ನೈಸರ್ಗಿಕ ಸಿಮೆಂಟನ್ನೂ ಅವರು ಉಪಯೋಗಿಸುತ್ತ ಬಂದಿದ್ದರು. ಈ ಲಾವಾಪುಡಿಯನ್ನು ಮುದ್ದೆ ಮಾಡಿದ ಅರಿಲಿನಲ್ಲಿಯೂ ಕೂಡಿಸುತಿದ್ದರು. ಹ್ಯಾನಿಬಾಲನೆಂಬ ಒಬ್ಬ ಸ್ಥಾಪತ್ಯ ವಿಶಾರದನು ಸ್ಪೇನದಲ್ಲಿ ಮುದ್ದೆ ಅರಲಿನಿಂದಲೆ ಕಿಲ್ಲೆಗಳನ್ನು ಕಟ್ಟಿದ್ದನು. ಈ ಸಾಮ್ರಾಜ್ಯಗಳು ಉರುಳಿ ಹೋದರೂ ಅನೇಕ ಶತಮಾನಗಳ ವರೆಗೆ ಈ ಕಿಲ್ಲೆಗಳು ಹಾಗೆಯೇ ನಿಂತುಕೊಂಡಿವೆ.

ಚೀನದ ಪ್ರಸಿದ್ಧ ಗೋಡೆಯ ಬಹುಭಾಗವನ್ನು ಈ ಮುದ್ದೆ ಅರಿಲಿನಿಂದಲೆ ಕಟ್ಟಲಾಗಿದೆ. ನೆಲದಲ್ಲಿ ಎರಡು ಸಮಾಂತರ ಸಾಲುಗಳಲ್ಲಿ ಕಂಬಗಳನ್ನು ಹುಗಿದು ಅವುಗಳ ನಡುವೆ ಅರಿಲನ್ನು ಅಚ್ಚು ಹೊಯ್ಯಲಾಗುತಿದ್ದಿತು. ಎರಡೂ ಕಂಬಗಳ ನಡುವಿನ ಸ್ಥಳವು ತುಂಬಿದ ಕೂಡಲೆ ಅವುಗಳನ್ನು ಕಿತ್ತು ಮತ್ತೆ ಮೇಲಕ್ಕೆ ಅವುಗಳನ್ನು ಕಟ್ಟುತಿದ್ದರು.

ಮಧ್ಯಪ್ರಾಂತದಲ್ಲಿಯ ಭಿಲ್ಲರು ತಮ್ಮ ಗುಡಿಸಲುಗಳನ್ನು ಇದೇ ಬಗೆಯಾಗಿ ಕಟ್ಟುವರು. ಇದೊಂದು ಬಗೆಯ ವೈಚಿತ್ರ್ಯವಲ್ಲವೆ? ಎರಡು ಸಾಲುಗಳಲ್ಲಿ ನೆಲದಲ್ಲಿ ಗೂಟಗಳನ್ನು ಹುಗಿದು ಅವುಗಳಿಗೆ ಬಟ್ಟೆ ಹೆಣೆದಂತೆ ಬರಲು ಹೆಣೆದು ನಡುವಿನ ಸ್ಥಳವನ್ನು ಅರಿಲಿನಿಂದ ತುಂಬುವರು ಮತ್ತು ಗೂಟಗಳಿಂದ ಅದನ್ನು ಕೆಳಗೆ ಒತ್ತುವರು. ಈ ರೀತಿ ನಿಲ್ಲಿಸಿದ ಗೋಡೆಗಳ ಮೇಲೆ ಅವರು ಹುಲ್ಲು ಹೊಚ್ಚುವರು. ಅನಂತರ ಕೆಸರಿನಿಂದ ಗೋಡೆಗಳನ್ನು ಮೆತ್ತಿ ಅವನ್ನು ಪೂರ್ಣಗೊಳಿಸುವರು.

ಹಿಂದುಸ್ತಾನದಲ್ಲಿಯ ಹಳೆಯ ಕೋಟೆಗಳನ್ನು ಇದೇ ರೀತಿಯಲ್ಲಿ ಕಟ್ಟುತಿದ್ದರು. ಎರಡೂ ಕಲ್ಲಿನ ಗೋಡೆಗಳ ನಡುವಿನ ಸ್ಥಳವನ್ನು ಈ ಮುದ್ದೆ ಅರಲಿನಿಂದ ತುಂಬಲಾಗುತಿತ್ತು. ಕೆಲಸಲ ಹಟ್ಟಿಗಳನ್ನು ಕೂಡಿಸುತಿದ್ದರು ಇಲ್ಲವೆ ಸುಣ್ಣ ಅಥವಾ ಮಗಡುಮ ಸಕ್ಕರೆ ಕೂಡಿದ ಮಜ್ಜಿಗೆಯನ್ನು ಕೂಡಿಸುತಿದ್ದರು. ಭರತಪುರದ ಕೋಟೆಯಲ್ಲಿಯ ಹಳೆಯ ಗಟ್ಟಿ ಮಣ್ಣು ಇಂಗ್ಲೀಶ ತೋಫುಗಳ ಹೊಡೆತಕ್ಕೂ ಜಗ್ಗುತಿರಲಿಲ್ಲ. ಅನೇಕ ಸಂದರ್ಭಗಳಲ್ಲಿ ಹೊರಗಿನ ಕಲ್ಲುಗೋಡೆ ಸರಿದರೂ ಮಣ್ಣಿನ ಗೋಡೆಯು ಹಾಗೆಯೆ ಇನ್ನೂ ನೂರಾರು ವರುಷಗಳ ವರೆಗೆ ತಾಳುವದು.

ಸದ್ಯದಲ್ಲಿ ಮನೆಗಳ ಕೊರತೆ ವಿಪರೀತವಾಗಿದೆ. ಮನೆಗಳ ಕಟ್ಟೋಣಕ್ಕೆ ಬೇಕಾದ ಕಚ್ಚಾ ಮಾಲೂ ಸಾಕಷ್ಟು ಸಿಕ್ಕದಂತಾಗಿದೆ. ಇಂಥ ಸಂದರ್ಭದಲ್ಲಿ ಕಟ್ಟಡಕ್ಕೆ ಉಪಯುಕ್ತವಾದ ಮಣ್ಣಿನ ಬಗ್ಗೆ ಹೆಚ್ಚು ಅಭ್ಯಾಸ ಮಾಡುವದು ಅವಶ್ಯವಾಗಿದೆ. ಜಗತ್ತಿನ ವಿವಿಧ ಭಾಗಗಳಲ್ಲಿ ವಿಶೇಷತಃ ಅಮೇರಿಕೆಯಲ್ಲಿ ಇದರ ಸಂಶೋಧನೆ ನಡೆದಿದೆ. ಮಣ್ಣು ಕಟ್ಟಡಗಳಿಗೆ ಬೇಕಾದ ಅಪಕ್ವವಾದ ಕಚ್ಚಾ ಮಾಲು ಎಂಬ ಬಗ್ಗೆ ಸಂಶೋಧನೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ.

ಹಿಂದುಸ್ತಾನದಲ್ಲಿ ಮೈಸೂರು ಸರಕಾರದ ಸಹಾಯದಿಂದ ಗ್ರಾಮೋದ್ಯಮ ಸಂಶೋಧನ ಸಂಸ್ಥೆಯವರು ಈ ಸಮಸ್ಯೆಯ ವಿಚಾರ ಮಾಡಿರುವರು. ಹಿಂದುಸ್ತಾನದಲ್ಲಿಯ ಹಳ್ಳಿ ನಗರಗಳಲ್ಲಿ ಮನೆಗಳನ್ನು ಕಟ್ಟುವದಕ್ಕಾಗಿ ಹೆಚ್ಚು ಪ್ರಮಾಣದಲ್ಲಿ ಸಿಕ್ಕುವ ಪದಾರ್ಥವೆಂದರೆ ಮಣ್ಣಿನ ಹೊರತು ಬೇರೊಂದು ಇಲ್ಲ ಎಂಬ ಸತ್ಯ ಸಂಗತಿಯನ್ನೆ ತಳಹದಿಯನ್ನಾಗಿಟ್ಟುಕೊಂಡು ಕೆಲಸಗಾರರು ಮುಂದೆ ಸಾಗಿದ್ದಾರೆ. ಮಣ್ಣು ಅತ್ಯವಶ್ಯಕ ಪದಾರ್ಥವಾಗಿದ್ದುದರಿಂದ ಅದರ ಬಗ್ಗೆ ಅಭ್ಯಾಸ ಮಾಡಲಿಕ್ಕೆ ಬೇಕಾದುದು ಅನಿವಾರ್ಯ.

ಹಿಂದುಸ್ತಾನದಲ್ಲಿ ಉರುವಲಿನ ಕೊರತೆಯಿದೆ. ಅಡಿಗೆಮನೆಗೆ ಬೇಕಾಗುವಷ್ಟು ಉರುವಲನ್ನು ಪೂರಯಿಸದಿದ್ದರೆ ಗೊಬ್ಬರವನ್ನೆ ಸುಡಲಾಗುತ್ತದೆ. ಗೊಬ್ಬರ ಹಾಳಾಗಿಹೋದರೆ ಆಹಾರ ಪದಾರ್ಥಗಳ ಕೊರತೆಯಾಗುವದು. ಇಟ್ಟಿಗೆಗಳು ಮತ್ತು ಸುಣ್ಣ ವಿಲಾಸದ ಪದಾರ್ಥಗಳು. ಒಣ ಮಣ್ಣಿನ ಸಂಬಂಧದಲ್ಲಿಯ ಸಂಶೋಧನೆ ಮುಂದೆ ಸಾಗಿದೆ. ಕಟ್ಟಡಗಳಿಗಾಗಿ ಒಣಮಣ್ಣನ್ನು ಉಪಯೋಗಿಸುವ ಅನೇಕ ಪ್ರಕಾರಗಳಿವೆ. ತುಳಿದ ಮಣ್ಣು ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳು, ಹದ ಮಾಡಿದ ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳು, ಮುದ್ದೆ ಅರಿಲು, ಮುದ್ದೆ ಅರಿಲಿನ ಅಚ್ಚುಗಳು, ಅಚ್ಚೊತ್ತಿದ ಇಟ್ಟಿಗೆಗಳು, ಬಹಳ ಗಟ್ಟಿ ಮಾಡಿದ ಇಟ್ಟಿಗೆಗಳು, ನೀರು ಹೊಡೆದ ಅರಿಲು ಇವೇ ಮೊದಲಾದ ರೀತಿಯಲ್ಲಿ ಅರಿಲಿನಿಂದ ಮನೆಗಳನ್ನು ಕಟ್ಟುವದುಂಟು. ಸಾರ್ವಜನಿಕರ ಮತ್ತು ಧಂದೆಗಾರರ ಲಕ್ಷ್ಯವನ್ನು ಇತ್ತ ಸೆಳೆಯುವುದಕ್ಕಾಗಿ ಇವೆಲ್ಲ ವಿಧಾನಗಳ ಬಗ್ಗೆ ಸಣ್ಣ ಸಣ್ಣ ಬರೆಹಗಳನ್ನು ಬರೆಯಲಾಗುವದು.

೨

ಯಾವ ವಿಧದ ಮಣ್ಣಿಂದಾದರೂ 'ಸಾಚೀ' ಮನೆಗಳನ್ನು ಕಟ್ಟಲು ಬರುತ್ತದೆ. ಅದರಲ್ಲಿ ಅರಿಲೊಂದಿದ್ದರೆ ಸಾಕು. ಅದರೂ ಗೋಡೆಗೆ ಬೇಕಾಗುವುದು ಅರಿಲಲ್ಲ; ಮಣ್ಣಿನಲ್ಲಿರುವ ಕಲ್ಲು ಮತ್ತು ಮಳಲುಗಳೇ. ಅರಿಲು ಅಂಟಿಸುತ್ತದೆ. ಹೆಚ್ಚಾದರೆ ಅಂಟೂ ಜೋಡಣೆಯನ್ನು ಶಿಥಿಲ ಮಾಡುತ್ತದೆ, ಹಾಗೇ ಅರಿಲು ಹೆಚ್ಚಾದರೂ ಗೋಡೆ ಅದೃಢವಾಗುತ್ತದೆ. ಅರಿಲಿನಲ್ಲ ಮಣ್ಣು ಕಡಿಮೆಯಿದ್ದರೆ ಗೋಡೆ ನಿರ್ಬಲವಾತ್ತದೆ. ಅದರೆ ಆ ಗೋಡೆ ಒಡೆಯುವುದಿಲ್ಲ ಮತ್ತು ಮಳೆಗೆ ಚೆನ್ನಾಗಿ ತಾಳುತ್ತದೆ. ಅರಿಲು ಹೆಚ್ಚಿರುವ ಮಣ್ಣಿನಿಂದ ಮಾಡಿದ ಗೋಡೆ ಬಹು ಬೇಗ ಬಿರುಕು ಬಿಡುವುದು ಮತ್ತು ಮಳೆಗೆ ತಡೆಯುವುದಿಲ್ಲ.

ಮಣ್ಣಿನ ಮೇಲ್ಪದರಿನಲ್ಲಿ ಸಾಮಾನ್ಯವಾಗಿ ಪ್ರಾಣಿ ಸಂಬಂಧ ಪದಾರ್ಥಗಳಿರುತ್ತವೆ. ಅದ್ದರಿಂದ ಅದು ಅಚ್ಚುಹೊಯ್ಯಲು ಬರದು. ಮೇಲಿನ ೬ ರಿಂದ ೧೨ ಅಂಗುಲಗಳ ವರೆಗಿನ ಮಣ್ಣನ್ನು ಬಳಸಬಾರದು ಮೇಲ್ಪದರನ್ನು ಕೆತ್ತಿತೆಗೆದ ಮೇಲೆ ಅಚ್ಚುಹೊಯ್ಯಲು ಯೋಗ್ಯವೋ ಅಲ್ಲವೋ ಎಂಬುದನ್ನು ಪರೀಕ್ಷಿಸಬೇಕು.

ಮಣ್ಣಿನಲ್ಲಿರುವ ಮಳೆನೀರಿನ ಹರಿಬಿರುಕುಗಳನ್ನು ಪರೀಕ್ಷಿಸಿದರೆ ಅದು ಅಚ್ಚುಹೊಯ್ಯಲು ಬರುವುದೋ ಇಲ್ಲವೋ ಎಂಬುದರ ಗುರುತು ಹತ್ತುತ್ತದೆ. ನೇರ್ನೆಲೆಗೆ ಬಿರುಕುಗಳ ಬದಿಗಳು ಸಮೀಪವಾಗುವಂತಿದ್ದರೆ ಅದು ಉತ್ತಮ ಮಣ್ಣೆಂದು ತಿಳಿಯಬೇಕು, ಇಳಿಜಾರಾದ ಬದಿಗಳಿದ್ದರೆ ಅದರಲ್ಲಿ ಅಂಟಿರದು. ಅದು ನೀರಿನ ಹೊಡೆತ ತಡೆಯಲಾರದು.

ಪರೀಕ್ಷಿಸಬೇಕಾದ ಮಾದರಿಯ ಒಂದು ಬುಟ್ಟಿ ಮಣ್ಣನ್ನು ತಗೆದುಕೊಂಡು ಒಂದಂಗುಲ ತೂತಿನ ಸಾರಣಿಗೆಯಲ್ಲಿ ಗಾಳಿಸಬೇಕು. ಹತ್ತು ಡಬ್ಬಿ (ಸಿಗರೇಟಿನ ಡಬ್ಬಿ ಅಥವಾ ಕುಡಿಯುವ ಥಾಲಿಯಾದರೂ ಆಗಬಹುದು.) ಯಷ್ಟು ಈ ಮಣ್ಣನ್ನು ತೆಗೆದು ಒಂದು ಪಾತ್ರೆಯಲ್ಲಿ ಹಾಕಿ ನೀರು ಸುರಿಯಬೇಕು. ಅಷ್ಟನ್ನು ಕದಡಿ ಕೆಸರುನೀರನ್ನು ಮೆಲ್ಲಗೆ ಹೊರಗೆ ಸುರಿಯಬೇಕು. ಹನಿ ನೀರು ಬರುವವರೆಗೆ ಇದೇ ಪ್ರಕಾರ ನೀರುತುಂಬಿ ಸುರಿಯುತ್ತಿರಬೇಕು. ಆಮೇಲೆ ಆ ಮಣ್ಣನ್ನು ಬಿಸಿಲಿನಲ್ಲಿ ಇಲ್ಲವೆ ಒಲೆಯಲ್ಲಿ ಮೇಲೆ ಇಟ್ಟು ಒಣಗಿಸಿ ಎಚ್ಚರಿಕೆಯಿಂದ ಅಳತೆಮಾಡಬೇಕು. ಅದು ೩ ಡಬ್ಬಿಗಿಂತ ಕಡಿಮೆಯಾಗಬಾರದು, ಎಂಟಕ್ಕಿಂತ ಹೆಚ್ಚಿರಬಾರದು. ಐದರಿಂದ ಏಳರವರೆಗೆ ಡಬ್ಬಿಯಷ್ಟಾದರೆ ಅದು ಹದವಾಗಿದೆಯೆಂದು ತಿಳಿಯಬೇಕು.

ಈ ಶೋಧಿಸಿದ ಮಣ್ಣನ್ನು ಕಾಲಂಗುಲ ತೂತಿನ ಸಾರಣಿಗೆಯಲ್ಲಿ ಗಾಳಿಸಬೇಕು. ಕೆಳಗೆ ಬೀಳುವುದೆಲ್ಲ ಮರಳೆಂದೂ ಒಳಗೆ ಉಳಿಯುವುದೆಲ್ಲ ಕಲ್ಲೆಂದೂ ತಿಳಿಯಬೇಕು. ಆಗ ಆ ಕಲ್ಲುಹರಳು ಅಚ್ಚಿನ ಕೆಲಸಕ್ಕೆ ಯೋಗ್ಯವಾಗುತ್ತದೆ, ಅಂದರೆ ಅದು ಒಂದಂಗುಲ ತೂತಿನ ಸಾರಣಿಗೆಯಲ್ಲಿಳಿದ ಕಾಲಂಗುಲ ತೂತಿನ ಸಾರಣಿಗೆಯಲ್ಲಿ ಉಳಿಯುವುದಿಲ್ಲ. ದೊಡ್ಡ ಕಲ್ಲುಚೂರುಗಳು ಯಾತಕ್ಕೂ ಬರುವುದಿಲ್ಲ. ಏಕೆಂದರೆ ಅವು ಅಚ್ಚು ಹೊಯ್ಯುವಲ್ಲಿ ಅಡಚಣೆಗಳಾಗುತ್ತವೆ. ಆ ಕಲ್ಲುಗಳು ತಮ್ಮ ಕೆಳಗಿನ ಮಣ್ಣನ್ನು ಅಚ್ಚುಹೊಯ್ಯುವ ಹಾರೆಯಿಂದ ರಕ್ಷಿಸಿ ಇಟ್ಟುಕೊಳ್ಳುವುದರಿಂದ ಗೋಡೆಯಲ್ಲಿ ಮೈತುಂಬ ಚಿಕ್ಕ ಚಿಕ್ಕ ಟೊಳ್ಳುಗಳು ಉಂಟಾಗುತ್ತವೆ. ಇದೇ ಮೇರೆಗೆ ಮಣ್ಣು ಹೆಂಟೆಗಳಾದರೂ ಅಡಚಣೆಗಳೇ ಆಗುತ್ತವೆ; ಏಕೆಂದರೆ ಅವು ಸಾಮಾನ್ಯವಾಗಿ ಒಳಗೆ ಒಣಗಿರುವುದರಿಂದ ಅಚ್ಚು ಹೊಯ್ಯುವ ಹಾರೆ ದಿಬ್ಬಾಕ್ಷಣ ಪುಡಿಪುಡಿಯಾಗಿ ಒಣ ಭಾಗಗಳನ್ನು ಗೋಡೆಯಲ್ಲಿ ಉಳಿವಂತೆ ಮಾಡುತ್ತವೆ.

ಕಲ್ಲು ಹರಳಿನ ಮತ್ತು ಮರಳಿನ ಅಂಶ ೧:೨ ಇರಬೇಕು. ಮಳೆಗೆ ಅಚ್ಚಿನ ಗೋಡೆ ಹಡೆಯುವಂತೆ ಮಾಡುವುದು ಮರಳಲ್ಲದೆ ಅರಲೂ ಅಲ್ಲ, ಕಲ್ಲುಹರಳೂ ಅಲ್ಲ. ಅರಿಲು, ಮರಳು, ಕಲ್ಲುಹರಳುಗಳ ಪ್ರಮಾಣದ ಬಗ್ಗೆ ಸರ್ವಸಾಮಾನ್ಯ ನಿಯಮಗಳನ್ನು ಹೇಳಬರದು; ಏಕೆಂದರೆ, ಬಹಳ ಅಂಶ ಮಣ್ಣಿನಲ್ಲಿರುವ ಕರಗುವ ಸಾರದ ಮೇಲೂ ಮರಳಿನ ಕಣಗಳಗಾತ್ರದ ಮೇಲೂ ಕಲ್ಲುಹರಳು ನಯವೋ ಹರಿತವೋ ಎಂಬುದರ ಮೇಲೂ ಅವಲಂಬಿಸಿದೆ. ಬೇರೆ ಬೇರೆ ಮಣ್ಣನ್ನು ಪ್ರಯೋಗಕ್ಕೆ ಗುರಿಪಡಿಸಿ ಕೆಳಗಿನ ವಿವರಣ ಪತ್ರಿಕೆಯನ್ನು ಬಳಕೆಗನುಕೂಲವಾಗಿ ತಯಾರಿಸಲಾಗಿದೆ.

	ಪ್ರಥಮಾವಧಿ	ವಿಕಲ್ಪ	ಪರಮಾವಧಿ
ಅರಿಲು	೨೦ %	೨೫ %	೪೦ %
ಮರಳು	೩೦ %	೫೦ %	೬೦ %
ಕಲ್ಲುಹರಳು	೧೦ %	೨೫ %	೪೦ %

ಸಾಧಾರಣವಾಗಿ ಅರಿಲು ಮತ್ತು ಕಲ್ಲು ಹರಳುಗಳು ಸಮವಾಗಿರಬೇಕು. ಮತ್ತು ಮರಳು ಕಡಿಮೆಯಿರಕೂಡದು, ಒಮ್ಮೆ ಹೆಚ್ಚಿದ್ದರೂ ಒಳ್ಳೆಯದು.

ಕಲ್ಲುಹರಳಿಲ್ಲದಾಗಲೂ ಅಚ್ಚಿನ ಗೋಡೆ ಒಳ್ಳೆಯದೇ ಆಗುವುದು ಕಂಡು ಬಂದೀತು. ಅದರೆ ಕಲ್ಲುಹರಳು ಗೋಡೆಯನ್ನು ಗಟ್ಟಿಯಾದುದನ್ನಾಗಿ ಮಾಡುತ್ತದೆ. ಚೆನ್ನಾಗಿ ಅಚ್ಚುಹೊಯ್ದ ಮತ್ತು ಸರಿಯಾದ ಪ್ರಮಾಣದ ಅಚ್ಚಿನ ಗೋಡೆ ಕಳ್ಳರಿಗೊಂದು ಸಮಸ್ಯೆಯೇ ಆಗುತ್ತದೆ; ಏಕೆಂದರೆ, ಹಾರುಗೋಲಿಗೆ ಅದು ದಕ್ಕುವುದಿಲ್ಲ. ಅದು ಅಂಟಂಟಾಗಿರುತ್ತದೆ. ಹಾರುಗೋಲಿನ ಮೊನೆಗೆ ಅದು ಅಂಟಿಕೊಳ್ಳುವುದಲ್ಲದೆ ಅದಕ್ಕೆ ಜಗ್ಗುವುದಿಲ್ಲ. ಕಲ್ಲು ಅಥವಾ ಇಟ್ಟಿಗೆಯ ಗೋಡೆಯಲ್ಲಿ ಒಮ್ಮೆ ಒಂದು ಕಲ್ಲು ಅಥವಾ ಇಟ್ಟಿಗೆಯನ್ನು ಕಿತ್ತುಬಿಟ್ಟರೆ ಮಿಕ್ಕವೆಲ್ಲ ಸುಲಭವಾಗಿ ಬಂದು ಬಿಡುತ್ತವೆ. ಅಚ್ಚಿನ ಗೋಡೆಯಾದರೆ ಹಾಗಲ್ಲ. ಅದನ್ನು ಒಂದೊಂದೇ ಚೂರನ್ನು ಕೆತ್ತಿ ಕೆತ್ತಿ ತೆಗೆಯಬೇಕಾಗುತ್ತದೆ.

ಮಣ್ಣಿನ ಹದ ಗೊತ್ತಾದರೆ, ಅದು ಮೇಲಿನ ಪತ್ರಿಕೆಯಲ್ಲಿರುವ ಅಂಶಕ್ಕೆ ಸರಿ ಹೋಗದಿದ್ದರೆ ಅದನ್ನು ಸಂದರ್ಭಕ್ಕೆ ತಕ್ಕಂತೆ ಮರಳು, ಕಲ್ಲುಹರಳು ಮತ್ತು ಅರಿಲನ್ನು ಸೇರಿಸಿ ಹದಕ್ಕೆ ತರಬೇಕು.

ದೊಡ್ಡ ದೊಡ್ಡ ಅಚ್ಚಿನ ಕಟ್ಟಡಗಳನ್ನು ಕಟ್ಟುವಲ್ಲಿ ೬×೬×೬ ಅಂಗುಲದ ಘನಾಕೃತಿಯ ಡಬ್ಬಿಗಳಲ್ಲಿ ಹಾಕಿ ಒತ್ತಿ ಪರೀಕ್ಷಿಸುವುದು ಉತ್ತಮ. ಕೆಲಸದಿರುವಾಗಿನ ಮಣ್ಣು ಯೋಗ್ಯವೆನಿಸಬೇಕಾದರೆ ಅದು ಅಚ್ಚು ಹೊಯ್ದಾಗ ಅದರ ಅರ್ಧ ಪರಿಮಾಣಕ್ಕಿಳಿಯಬೇಕು. ಒಳ್ಳೆಯ ಮಣ್ಣಿನಿಂದ ಚೆನ್ನಾಗಿ ಅಚ್ಚು ಹೊಯ್ದ ತುಂಡುಗಳು ಒಂದಂಗುಲ ಭಾಗದಲ್ಲಿ ೬೦೦ ಪೌಂಡು ಭಾರ ಹಾಕಿದರೂ ತಡೆಯಬಲ್ಲವು. ಅದರೆ ಸಾಮಾನ್ಯವಾಗಿ ಅಂಗುಲಕ್ಕೆ ೩೦೦ ಪೌಂಡಿನಷ್ಟು ಭಾರ ತಡೆಯುವಂಥ ತುಂಡುಗಳಿದ್ದರೂ ಸಾಕು. ಅಚ್ಚುಹೊಯ್ದ ಮಣ್ಣಿನ ಸರಾಸರಿ ತೂಕ ಒಂದು ಘನ ಅಡಿಗೆ ೧೨೦ ಪೌಂಡಿನಷ್ಟಿರುತ್ತದೆ. ಆದುದರಿಂದ ಇಟ್ಟಿಗೆಯಿಂದ ಎಷ್ಟೆತ್ತರದ ವರೆಗೆ ಸುರಕ್ಷಿತವಾಗಿ ಗೋಡೆಯನ್ನು ಹಾಕಬಹುದೋ ಅಷ್ಟೇ ಎತ್ತರದ ವರೆಗೆ ಈ ತುಂಡುಗಳಿಂದಲೂ ಗೋಡೆ ಹಾಕಬಹುದು.

೩

ಅರಿಲಿನ ಕೆಲಸದ ಮೊದಲೆ [illegible] ಕೆಲವು ವಿಷಯಗಳ ಕಡೆಗೆ ಲಕ್ಷ್ಯಕೊಡಬೇಕಾಗಿದೆ. ಸಾಕಷ್ಟು ನೀರು ಬೆರೆತು [illegible] ಅರಿಲು ಕೆಸರಾಗುತ್ತದೆ. [illegible] ದಲ್ಲಿ ಕೆಸರಿನ ದೊಡ್ಡ [illegible]. ಕೆಲಸಕ್ಕಂತೂ ಕೆಸರು ಬೇಕೆ ಬೇಕು. ಅದರೆ ಕೆಸರನ್ನು ಸಾಚೆಗೆ ಹಾಕಿ ಮಣ್ಣಿನ ಗೋಡೆ ಕಟ್ಟಲುಬಾರದು.

ಸಾಚೆಯಲ್ಲಿ ಒತ್ತಿಕ್ಕ ಬೇಕಾದರೆ ಅರಿಲು ಬಹಳ ಗಟ್ಟಿಯಾದದ್ದಾಗಿರಬೇಕು. ಅದರಲ್ಲಿ ನೀರಿನ ಅಂಶ ಬಹಳ ಕಡಿಮೆ ಇರಬೇಕಾಗುವದು ಮತ್ತು ಅದೇ ಕಾಲಕ್ಕೆ ಒತ್ತಬೇಕಾದ ಮುಟ್ಟಿದರೆ ಕಣ್ಣಾಗಿರಬೇಕು. ಅಂದರೆ ಕೈಗೆ ಮೊಳಕು ಅಂಟುವಷ್ಟು ಅದರಲ್ಲಿ ನೀರಿರಕೂಡದು. ಕೈಯಲ್ಲಿ ಗಟ್ಟಿಯಾಗಿ ಹಿಸುಕಿ ಹಿಡಿದಾಗ ಅರಿಲು ಪುಡಿಯಾಗಬಾರದು ಅದರೆ ಒಂದು ಗಜ ಎತ್ತರದಿಂದ ಒಗೆದರೆ ಅದು ನೆಲಕ್ಕೆ ಬೀಳುತ್ತಲೇ ಸುಲಭವಾಗಿ ಒಡೆದು ಪುಡಿಯಾಗಬೇಕು.

ಆಯಾ ಭೂಮಿಯ ಮಣ್ಣಿನ ಗುಣದ ಮೇಲೆ ಹದವಾದ ಮುದ್ದೆ ಅರಿಲಿಗೆ ಎಷ್ಟು ನೀರು ಬೇಕೆಂಬುದು ಅವಲಂಬಿಸಿದೆ. ಅರಿಲನ್ನು ಸರಿಯಾಗಿ ಹದಮಾಡಿ ಕಲಿಸಿದ್ದರೆ ಅದರ ಗೋಡೆ ಬಲು ಗಟ್ಟಿಯಾಗುವದಲ್ಲದೆ ನೀರಿನ ಹೊಡೆತಕ್ಕೆ ಎಳ್ಳಷ್ಟೂ ಸೊಪ್ಪು ಹಾಕುವದಿಲ್ಲ. ಮಣ್ಣಿನಲ್ಲಿ ಉಸುಕಿನ ಅಂಶವಿದ್ದಾಗ ನೀರು ಅಷ್ಟು ಬೇಕಾಗುವದಿಲ್ಲ. ಉಸುಕಿಲ್ಲದ ಮತ್ತು ಬಹಳ ಭಾರವಾಗಿರುವ ಒಣಮಣ್ಣು ೧೦೦ಕ್ಕೆ ೧೫ ರಷ್ಟು ನೀರುಂಡಾಗ ಮುದ್ದೆ ಮಾಡಿ ಸಾಚೆಗೆ ಹಾಕಲು ತಕ್ಕದ್ದಾಗುತ್ತದೆ. ಅದೇ ೧೦೦ಕ್ಕೆ ೩೦ ರಿಂದ ೬೦ ಅಂಶ ಉಸುಕಿರುವ ಮಣ್ಣಿಗೆ ೧೦೦ಕ್ಕೆ ೧೦ ರಿಂದ ೬ ರಷ್ಟು ನೀರಾದರೆ ಸಾಕಾಗುವದು.

ಇಷ್ಟೆಲ್ಲ ಹೇಳಿಯೂ ಒಂದು ಮಾತನ್ನು ಲಕ್ಷದಲ್ಲಿಡತಕ್ಕದ್ದು. ಅದೆಂದರೆ, ಕಡಿಮೆ ನೀರು ಬೆರೆಸುವದಕ್ಕಿಂತ ತುಸು ಹೆಚ್ಚು ನೀರು ಬೆರೆಸುವದೇ ಲೇಸು. ಅರಿಲು ಒಣಗೊಣಗಾದರೆ ಕಟ್ಟಣೆಯ ಬಿಗಿತವೇ ಹೊರಟು ಹೋಗಿ ಗೋಡೆಗಳು ಗಟ್ಟಿಯಾಗದಿರಬಹುದು. ಅರಿಲಿಗೆ ನೀರು ಹೆಚ್ಚಾಗಿದ್ದರೆ ಗೋಡೆಯ ಮೇಗಡೆಗೆ ಅಲ್ಲಿ ಇಲ್ಲಿ ಕೆಲ ಕೊರಕಲುಗಳು ಬಿರುಕುಗಳು ಆಗ ಬಹುದಷ್ಟೇ. ಅದರೆ ಸಾಚೆಯಲ್ಲಿ ಅರಿಲಿನ ಮುದ್ದೆಯು ಗಟ್ಟಿಯಾಗಿ ಸ್ಥಿರ ಸ್ಥಿರವಾಗಿ ಬೆಳೆದು ಬರಲು ಅತಂಕವಾಗುವಷ್ಟು ನೀರು ಹೆಚ್ಚಾಗಿರಕೂಡದು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಉಸುಕು ಹೆಚ್ಚಾಗಿರುವ ಮಣ್ಣಿಗೆ ಮಾತ್ರ ನೀರಿನ ಅಂಶವು ಸ್ವಲ್ಪ ಹೆಚ್ಚಾದರೂ ಕಟ್ಟಣೆ ಬಲಗುಂದಿ ಹೋಗುವ ಭೀತಿಯಿದೆ. ಆಗ ನೀರಿನ ಪ್ರಮಾಣದ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಬೇಕು.

ನೀರು ಹೆಚ್ಚಾದರೆ ಸಾಚೆಯಲ್ಲಿ ಏರಿಸಿದ ಗೋಡೆಯ ಸಾಂದ್ರತೆಯು ಕಡಿಮೆಯಾಗುತ್ತದೆ, ಮತ್ತು ಈ ಬಗೆಯ ಗೋಡೆಯ ಬಲವೂ ಬಾಳಿಕೆಯೂ ಮುಖ್ಯವಾಗಿ ಈ ಸಾಂದ್ರತೆಯನ್ನೇ ಅವಲಂಬಿಸಿರುತ್ತದೆ. ಸಾಚೆಯಲ್ಲಿ ಅರಿಲಿನ ಮುದ್ದೆಯನ್ನು ಏರಿಸುತ್ತ ಹೋದಂತೆ ಅನುಭವವೇ ನೀರಿನ ಹೆಚ್ಚು ಕಡಿಮೆಯಿಂದಾದ ತಪ್ಪುಗಳನ್ನು ತಿದ್ದುವದು. ಈ ಬಗೆಯಾಗಿ ಕಟ್ಟಿದ ಗೋಡೆಯು ಹವೆಯಲ್ಲಿದ್ದ ಆರ್ದ್ರತೆಯನ್ನು ಸ್ವೀಕರಿಸುವದೂ ಉಂಟು ಮತ್ತು ತನ್ನಲ್ಲಿದ್ದ ಆರ್ದ್ರತೆಯನ್ನು ಬಿಡುವದೂ ಉಂಟು. ಈ ಮೂಲಕ ಗೋಡೆಗೆ ಒಂದು ಬಗೆಯ ಪುಟವೇರಿದಂತಾಗಿ ಸಾವಕಾಶವಾಗಿ ಅದು ಗಟ್ಟಿಯಾಗ ಹತ್ತುವದು. ದಿನ ಕಳೆದಂತೆ ಈ ಬಗೆಯ ಗೋಡೆಗಳು ಇನ್ನಷ್ಟು ಬಲಗೊಳ್ಳುವವು ಹಾಗು ಇವುಗಳ ಬಾಳಿಕೆ ಅಗಾಧವೆಂದೇ ಹೇಳಬೇಕು. ಈ ಗೋಡೆಗೆ ನೀರು ತಗಲದಿದ್ದರೆ ನೂರಾರು ವರ್ಷ ಕಾಲ ಬಾಳಬಹುದೆಂಬ ಅನುಭವವಿದೆ.

ಸಾಚೆಯಲ್ಲಿ ಹಾಕಿ ಅದೇ ಕಟ್ಟಿದ ಮುದ್ದೆ ಅರಿಲಿನ ಗೋಡೆಯ ಭಾಗದ ಮೇಲೆ ಕೂಡಲೆ ಮತ್ತೆ ಕೆಲಸ ಸಾಗಿಸಲು ಬರುವಷ್ಟು ಅದು ಭದ್ರವಾಗಿರುತ್ತದೆ. ಅದು ಬಿಗಿದು ಕೊಳ್ಳುವವರೆಗೂ ಒಣಗುವವರೆಗೂ ತಡೆದಿರಬೇಕಾಗಿಲ್ಲ. ಅದರೂ ಗೋಡೆ ಒಣಗಿದ ಮೇಲೆ ತುಸು ಉದುಗುವ ಸಂಭವವಿದೆ. ಈ ಉದುಗುವಿಕೆಯು ಬಳಸಿದ ಮಣ್ಣಿನ ಗುಣವನ್ನು ಅದರಲ್ಲಿರುವ ಉಸುಕಿನ ಮತ್ತು ನೀರಿನ ಅಂಶವನ್ನು ಅವಲಂಬಿಸಿದೆ. ಉಸುಕು ಹೆಚ್ಚಾಗಿದ್ದಾಗ ಈ ಉದುಗುವದು ಕಡಿಮೆಯಾಗಿರುವದು ಮತ್ತು ನೀರು ಹೆಚ್ಚಾಗಿದ್ದಾಗ ಹೆಚ್ಚಾಗಿರುವದು.

[೧೦ನೆಯ ಪುಟ ನೋಡಿರಿ]

ಬಾಪೂಜಿ ಮತ್ತು ಪ್ರಮಾಣ ಪತ್ರಗಳು

ಶ್ರೀ. ದೇವದಾಸ ಗಾಂಧಿಯವರು ೨೨ ನೇ ಅಕ್ಟೋಬರ ೧೯೪೮ ರ 'ಹಿಂದುಸ್ತಾನ ಟಾಯಿಮ್ಸ' ಪತ್ರಿಕೆಯಲ್ಲಿ ಬರೆದ "ವಿದೇಶದಲ್ಲಿ ನಮ್ಮ ಕಾಪಿನವರು" ಎಂಬ ಲೇಖನದನ್ನು, ಅದರಲ್ಲಿಯೂ ಕೆಳಗೆ ಕಾಣಿಸಿದ ಅವಾರ್ಗದರ್ಶಕ ಅವರ ಟೀಕೆಯನ್ನು ಓದುವವರಲ್ಲಿ ತುಂಬ ಆಸಕ್ತನಾಗಿದ್ದೆ:

"ಹಿಂದುಸ್ತಾನದ ವಿಷಯಕ್ಕೆ ಪ್ರಮಾಣ ಪತ್ರಗಳನ್ನು ಬೇಡುವ ಹಿಂದೀಯರು ಜಂದು ಇಂದು ತುಂಬ ಮುಗಿಬೀಳುತ್ತಾರೆ. ಹಿಂದುಸ್ತಾನವೆಂದರೇನು ಮಾರಾಟಕ್ಕೆ ಇಟ್ಟ ಒಂದು ಪೇಟೆಂಟ ಔಷಧವೇ? ವಿದೇಶೀಯರ ಪ್ರಮಾಣ ಪತ್ರಗಳಿಗಾಗಿ ಹಿಂದೀಯರು ಬೆನ್ನಟ್ಟಿ ಅಡ್ಡಾಡುವದನ್ನು ಬಿಡುವವರೆಗೆ ಪಾಶ್ಚಾತ್ಯ ದೇಶಗಳಲ್ಲಿ ಅವರು ಭಿಕ್ಷುಕರಿಗಿಂತ ಕೀಳಾಗಿ ಕಾಣಿಸಿಕೊಳ್ಳುವರು. ಅವರು ದೇವದೂತರನ್ನು ಹುಡುಕಿಕೊಂಡು ಓಡಾಡುತ್ತಿದ್ದರೆ ತಮ್ಮ ನಾಡಿನಲ್ಲಿಯೇ ಹುಡುಕಲಿ. ಅವರಿಗೆ ದೇವ ಮಂದಿರಗಳೂ ಮೂರ್ತಿಗಳೂ ಬೇಕಿದ್ದರೆ ಅವುಗಳು ಗಾಂಧಿ ಟಾಗೋರರಾಗಿರಬೇಕಲ್ಲದೆ ಬ್ರಿಟಿಶ ಎಂಕ, ನಾಣ, ಶೀನರಿಗಾಗಿ ಅವು ಖಂಡಿತ ಇರಕೂಡದು ಎಂದು ಮೊದಲಾಗಿ ನಾನವರಿಗೆ ಉತ್ತರಿಸುತ್ತೇನೆ."

ಈ ಸಂದರ್ಭದಲ್ಲಿ ಒಂದು ಮಾತು ನೆನಪಾಗುತ್ತದೆ. ಒಮ್ಮೆ ಸೇವಾಗ್ರಾಮದಲ್ಲಿ ಗಾಂಧೀಜಿಯ ಬಳಿಗೆ ಹೋಗಿ ಒಂದು ಪ್ರಮಾಣ ಪತ್ರ ಕೋರಿದೆ. ಆಗ ಬಾಪೂಜಿ ಆಶ್ರಮದ ನಿತ್ಯ ಜೀವನದ ವಿಷಯದಲ್ಲಿ ನನಗೂ ನನ್ನ ಪತ್ನಿಗೂ ಕೆಲವೊಂದು ಅಂಶಗಳನ್ನು ತಿಳಿಸಿ ಆಚರಣೆಯಲ್ಲಿ ತರ ಹೇಳಿ ಈ ಮೂಲಕ ನಾವು ನಮ್ಮ ಕಾರ್ಯನಾಡಿನ ಸೇವೆಯಲ್ಲಿ ಒಂದಿಲ್ಲೊಂದು ವಿಧನಾಗಿ ಉಪಯುಕ್ತರಾಗಬಹುದೆಂದು ಕೋರಿದರು. ಬಾಪೂಜಿಗೆ ಮೌನವಿದ್ದಾಗ ಒಮ್ಮೆ ಕೆಳಗೆ ಕಾಣಿಸಿದ ಪ್ರೇಮಮಯ ಬಿಕ್ಕಣಿಕೆಯನ್ನು ಬರೆದರು. ಅದು ಎಲ್ಲರಿಗೂ ರುಚಿಸಬಹುದಾದ್ದರಿಂದ ಇಲ್ಲಿ ಕೊಡುತ್ತೇನೆ.

"ಸೇವಾಗ್ರಾಮ, ೨೭-೩-೪೫

"ಪ್ರಿಯ ಗುರುಬಕ್ಷಾನಿ,

"ಇದರ ಜೊತೆಗೆ ಅಮೃತಕೌರರಿಗೆ ಪತ್ರವಿದೆ. ನಿನಗೆ ಪ್ರಮಾಣಪತ್ರವೇಕೆಬೇಕು? ಸತ್ಯವಂತರಿಗೆ ಸತ್ಯವೇ ಪ್ರಮಾಣ. ಪ್ರಮಾಣಪತ್ರ ಬೇಡುವದು ಒಂದು ಕೆಟ್ಟ ಚಟವೇ. ಕೆಲಕಾಲ ನನಗೂ ಅದರ ಮೋಹವಿತ್ತು. ಆದರೆ ಈಗ ಹಲವರ್ಷಗಳಾದವು ಅದು ಮೋಹತೊರೆದು. ನನ್ನದಷ್ಟೇ ಅಲ್ಲ ಯಾರ ಪ್ರಮಾಣಪತ್ರವನ್ನೂ ನೀನು ಅಪೇಕ್ಷಿಸಬೇಡ, ಸ್ವೀಕರಿಸಬೇಡ. ಸತ್ಯಅಹಿಂಸೆಗಳಲ್ಲಿ ದೃಢವಿಶ್ವಾಸವಿರಲಿ. ನನಗೆ ಖಂಡಿತ ಪತ್ರಬರೆ ಮತ್ತು ಹಿಂದುಸ್ತಾನಿಯಲ್ಲಿಯೇ ಬರೆ. ನೀವಿಬ್ಬರೂ ನನಗೆ ಬರೆಯಬೇಕು, ವಿಮಲೆಗೆ ಬರೆಯಬಾರದೇತಕ್ಕೆ? ಉಳಿದದ್ದನ್ನೆಲ್ಲ ರಾಜಕುಮಾರಿಯ ಪತ್ರದಿಂದ ಅರಿಯಬಹುದು.

ಬಾಪೂನ ಆಶೀರ್ವಾದ"

ಹೀಗೆ ಬಾಪೂಜಿಯವರು ರಾಜಕುಮಾರಿಯವರಿಗೆ ಬರೆದ ಸ್ವಹಸ್ತಲಿಖಿತ ಗುರುತಿನ ಪತ್ರದೊಂದಿಗೆ ನಾವು ಸಿಮ್ಲಾಕ್ಕೆ ಹೊರಟೆವು. ಅಂದೇ ಬಾಪೂಜಿ ಮುಂಬಯಿಗೆ ತೆರಳಿದರು.

ಬಿಕಾನೇರ, ೧೪-೧೦-೪೮

—ಗೋಪ ಗುರುಬಕ್ಷಾನಿ.

ವ್ಯಾಪಾರದ ತಾಳ ಗಂಟಲಿಗೆ ಗಾಳ

ಆಸ್ಮಿದ ಅಭಾವದಿಂದ ಕ್ಷಾಮದ ಭಯವಿದ್ದಾಗ ಇದ್ದ ಅನ್ನವನ್ನು ದೊಡ್ಡ ದೊಡ್ಡ ಉದ್ದಿಮೆಗಳು ನುಂಗಿ ನಷ್ಟಪಡಿಸಿ ವ್ಯಾಪಾರದ ತಂತ್ರಗಳೇ ಜನರ ಗಂಟಲಿಗೆ ಗಾಳವಾಗಿ ಕೂತಿವೆ. ಈ ಘಾತಕ ಚಟುವಟಿಕೆಗಳಲ್ಲಿ ಸರಕಾರವು ಸಹ ತನ್ನ ಪ್ರಭಾವವನ್ನೂ ಬಲವನ್ನೂ ಆರ್ಥಿಕ ಸೌಕರ್ಯಗಳನ್ನೂ ಧಾರಾಳವಾಗಿ ಧಾರೆಯೆರೆಯಲು ಉದ್ಯುಕ್ತವಾಗಿದೆ. ಆರೋಗ್ಯಪ್ರದವಾದ ಬೆಲ್ಲದ ವ್ಯವಸಾಯವನ್ನು ಸಕ್ಕರೆಯ ಕಾರಖಾನೆಗಳು ಒಂದು ನಾಶಮಾಡಿದವು. ಸಕ್ಕರೆಯ ಕಾರಖಾನೆಗಳು ಕಬ್ಬಿನ ರಸದಲ್ಲಿದ್ದ ಅಮೌಲ್ಯವಾದ ಪೋಷಕ ದ್ರವ್ಯಗಳನ್ನೆಲ್ಲ ಧ್ವಂಸಗೊಳಿಸಲೆಂದೇ ಇನ್ನ ಹಾಳದಂತಾಗಿವೆ. ಈ ಅಪಕೃತ್ಯಕ್ಕೆ ಜನರು ಬಿಕೋಟಿ ರೂ. ಸಂರಕ್ಷಕ ತೆರಿಗೆ ಬೇರೆ ಕೊಡಬೇಕು. ಇದರಂತೆ ಚಹಾದ ಮೇಲೆ ಹೆಚ್ಚಿನ ತೆರಿಗೆ ಹೇರಿ

ಪ್ರಶ್ನೆ ಪೆಟ್ಟಿಗೆ

ಇಂಗ್ಲೀಷಿನಲ್ಲಿ ಮಾತನಾಡುವದು

ಪ್ರಶ್ನೆ:- ನಮ್ಮ ಮುಂದಾಳುಗಳು ರಾಷ್ಟ್ರಭಾಷೆಯು ಇದಲು ಯಾವಾಗಲೂ ಇಂಗ್ಲೀಷಿನಲ್ಲಿಯೇ ಮಾತನಾಡಲು ಅಥವಾ ಆಕಾಶವಾಣಿಯಲ್ಲಿ ಬಿತ್ತರಿಸಲು ಏಕೆ ಬಯಸುತ್ತಾರೆ?

ಉತ್ತರ— ಅನೇಕರಿಗೆ ಅದರಲ್ಲಿಯೂ ದಕ್ಷಿಣ ಹಿಂದುಸ್ತಾನದವರಿಗೆ ಇನ್ನೂ ರಾಷ್ಟ್ರಭಾಷೆ ತಿಳಿಯದಾದ ಕಾರಣ ಈ ಸಂಧಿ ಕಾಲದಲ್ಲಿ ಎಲ್ಲರೂ ಸಾಮಾನ್ಯವಾಗಿ ಅರಿಯಬಹುದಾದ ಇಂಗ್ಲೀಷಿನಲ್ಲಿಯೇ ನಿರುಪಾಯವಾಗಿ ಮಾತನಾಡಬೇಕಾಗುತ್ತದೆ ಎಂದು ಈ ಬಗ್ಗೆ ಸರದಾರ ವಲ್ಲಭಭಾಯಿ ಪಟೇಲರು ಹೊಸದಿಲ್ಲಿಯ ಪಾಲಂದಿಂದ ಅಕ್ಟೋಬರ ತಾ. ೧ ರಂದು ಆರ್. ಆಯ್. ಎ. ಎಫ್‌ದವರಿಗಾಗಿ ಮಾತನಾಡುವಾಗ ಹೇಳಿದರು. ಅದೇ ಕಾರಣವನ್ನು ಇಲ್ಲಿಯೂ ಹೇಳಬಹುದು.

(ಅ) ಇದಲ್ಲದೆ, ಒಂದು ವಿಶಿಷ್ಟ ವಿಷಯದ ಬಗ್ಗೆ ಭಾರತವು ಏನು ಮಾಡುತ್ತಿದೆ, ಎಂತು ವಿಚಾರಿಸುತ್ತಿದೆ ಎಂಬುದು ಜಗತ್ತಿಗೂ ತಿಳಿಯಬೇಕಾದ ಅವಶ್ಯಕತೆಯಿದ್ದು ಅಂತಹ ಸಂದರ್ಭಗಳಲ್ಲೆಲ್ಲ ಅಂತಾರಾಷ್ಟ್ರೀಯ ರಂಗದಲ್ಲಿ ಸಾಮಾನ್ಯವಾಗಿ ತಿಳಿದ ಇಂಗ್ಲೀಷ ಭಾಷೆಯಲ್ಲಿಯೇ ವ್ಯವಹರಿಸಬೇಕಾಗಿ ಬರುವದು.

(ಇ) ಹೀಗೆ ಹೇಳಿದೆನೆಂದು, ಕೆಲವರಲ್ಲಿ ಇಂಗ್ಲೀಷಿನ ಬಗ್ಗೆ ಮೋಹವಿಲ್ಲವೆಂದೇನೂ ಅಲ್ಲ. ಅನೇಕ ಸಲ ಅನವಶ್ಯಕವಾಗಿ ಇಂಗ್ಲೀಷನ್ನು ಬಳಸಲಾಗುತ್ತಿರುವದೂ ನಿಜವಿದೆ.

ಮುಂಬಯಿ

೫-೧೧-೪೮ —ಕಿಶೋರಲಾಲ ಮಶ್ರೂವಾಲಾ

ಮಣ್ಣಿನ ಮನೆಗಳು

(೯ ನೆಯ ಪುಟದಿಂದ)

ಅರಿಲು ಬೇಗ ಅರಿಹೋಗುವದಾದ್ದರಿಂದ ಬಿಸಿಲಲ್ಲಿ ಕೆಲಸ ನಡೆದಿದ್ದರೆ ಅರಿಲನ್ನು ಸಾಚೆಗೆ ಹಾಕುವ ಮೊದಲು ಬಹಳಹೊತ್ತು ಕಲಿಸಿಟ್ಟರ ಬಾರದು. ಒಂದೆರಡು ತಾಸು ಕಲಿಸಿಟ್ಟರೆ ನಡೆಯಬಹುದು. ಅನುಭವ ಬಲದಿಂದ ಅರಿಲು ಎಷ್ಟು ಗಟ್ಟಿಯಾಗಿರಬೇಕೆಂಬುದನ್ನು ಕೈ, ಬೆರಳು ಅರಿತುಬಿಡುತ್ತವೆ. ಅದರೂ ಅರಿಲು ಕಲಸುವಾಗ ಹೆಚ್ಚುಕಡಿಮೆಯಾಗುವ ಸಂಭವವಿರುವದರಿಂದ ಕೆಲಸದ ಮುಖ್ಯ ಉಸ್ತಾರನು ಪ್ರತಿಸಲವೂ ಅರಿಲಿನ ಹದವನ್ನು ಹಿಚುಕಿ ಮುಟ್ಟಿ ನೋಡುತ್ತಿರುವದವಶ್ಯ.

ಈ ಬಗೆಯ ಗೋಡೆಗಳನ್ನು ಮಳೆಗಾಲದಲ್ಲಿ ಕಟ್ಟಹೋಗಬಾರದು. ಆಗ ಗೋಡೆಯ ಆರ್ದ್ರತೆಯನ್ನು ನಿಯಂತ್ರಿಸುವದು ಅಸಾಧ್ಯವಾಗುವದು. ಅರಿಲಿಗೂ ಕಟ್ಟುವ ಗೋಡೆಗೂ ಮಳೆ ತಗಲದಂತಿದ್ದರೆ ಕಟ್ಟಣೆಯ ಕೆಲಸ ಕೈಕೊಳ್ಳಲು ಅಡ್ಡಿಯಿಲ್ಲ. ಮನೆಯ ಹೊದಿಕೆಯು ಸಾಮಾನ್ಯವಾದದ್ದಿದ್ದರೂ ಆದೀತು. ಆದರೆ ಮಳೆಗಾಲದಲ್ಲಿ ಈ ಕೆಲಸ ನಡೆದಾಗ ಮೇಲೆ ಹೊದಿಕೆ ಬೇಕೇ ಬೇಕು. ಹವೆಯೂ ದುಡಿಮೆಯೂ ಅನುಕೂಲವಾಗಿದ್ದ ಚಳಿಗಾಲ ಬೇಸಿಗೆಗಾಲಗಳೇ ಈ ಬಗೆಯ ಕಟ್ಟಣೆಯ ಕೆಲಸಕ್ಕೆ ಅನುಕೂಲ.

—ಮಾರಿಸ್ ಫ್ರಾಯ್ಡಮನ್

ಪ್ರತಿವರ್ಷ ೫೦ಲಕ್ಷ ರೂ. ದೊರಕಿಸಿ ಚಹಾ ತೋಟದೊಡೆಯರಹಿತರಕ್ಷಣೆಮಾಡಲಾಗುತ್ತಿದೆ

ವನಸ್ಪತಿ ಎಣ್ಣೆಯ ಕಾರಖಾನೆಗಳಂತೂ ಆಹಾರವನ್ನು ಒದಗಿಸುವ ದೃಷ್ಟಿಯಿಂದ ಎಳ್ಳಷ್ಟೂ ಉಪಯುಕ್ತವಾಗಿಲ್ಲ. ಇದ್ದ ಎಣ್ಣೆಯ ಸತ್ವಾಂಶಗಳನ್ನೆಲ್ಲ ಹೀರಿ ತೆಗೆದು ನಷ್ಟಪಡಿಸಿ ಆ ಮೇಲೆ ಈ ನಿರುಪಯುಕ್ತ ಪದಾರ್ಥಕ್ಕೆ ೧೦೦ಕ್ಕೆ ೮೦ರಷ್ಟು ಬೆಲೆ ಏರಿಸಿ ಮಾರಲಾಗುತ್ತದೆ. ಬೇರೆ ಮಾತುಗಳಲ್ಲಿ ಇದನ್ನೇ ಇನ್ನಷ್ಟು ಬಿಡಿಸಿ ಹೇಳುವದಾದರೆ, ವಸ್ತುವನ್ನು ಕಂಡು ಮೋಹಗೊಂಡ ಮರುಳರಿಂದ ಹಣಸುಲಿದುಕೊಳ್ಳುವ ವ್ಯವಹಾರವಿದಲ್ಲದೆ ಬೇರೆ ಏನೂ ಅಲ್ಲ. ಈ ವನಸ್ಪತಿಯ ಉದ್ದಿಮೆಯಲ್ಲಿ ೫೦ ಕೋಟಿ ರೂಪಾಯಿ ತೊಡಗಿವೆಯಲ್ಲದೆ ೫೦ಲಕ್ಷ ಎಕರೆ ಆಹಾರೋತ್ಪಾದಕ ಭೂಮಿಯನ್ನು ಈ ನಿರುಪಯುಕ್ತ ಉದ್ದಿಮೆಗೆ ಕಚ್ಚಾ ಪದಾರ್ಥ ಒದಗಿಸಲು ಬಳಸಲಾಗುತ್ತದೆ.

ಈಗ ಆಹಾರಕ್ಕೆ ಪ್ರಥಮ ಸ್ಥಾನವೊ ಇಲ್ಲವೆ ಬಂಡವಲಗಾರರ ಉದ್ದಿಮೆಗಳಿಗೊ ಎಂಬುದನ್ನು ಸರಕಾರವು ವಿಚಾರಿಸಬೇಡವೆ?

ಜೆ. ಸಿ. ಕುಮಾರಪ್ಪ

ನಾಲ್ಕು ಮಾತು

[೭ನೆಯ ಪುಟದಿಂದ]

೩ ಇಷ್ಟು ತಡವೇಕೆ?

ಘಟನಾಸಮಿತಿ ಕೂಡಿ ಈ ಬರುವ ಡಿಸೆಂಬರ ೯ಕ್ಕೆ ಸರಿಯಾಗಿ ಎರಡು ವರುಷಗಳಾಗುವವು. ಇಷ್ಟು ಅವಧಿಯಾದರೂ ಇನ್ನೂ ಘಟನೆ ಸಿದ್ಧವಾಗಿಲ್ಲವಲ್ಲ, ಎಂದು ಹಲವರು ಅನ್ನಬಹುದು. ಆದರೆ ಘಟನೆಗೆ ಈಗಾಗಲೆ ೪೦೦೦ ಉಪಸೂಚನೆಗಳು ಬಂದಿದ್ದು ಇನ್ನೂ ನಿತ್ಯ ಉಪಸೂಚನೆಗಳು, ಉಪಸೂಚನೆಗೆ ಉಪಸೂಚನೆಗಳು ಬಂದೇ ಬರುತ್ತಲಿವೆ. ಅವುಗಳ ವಿಚಾರ ಮಾಡದೆ ವಿಧಿಯಿಲ್ಲ. ಯಾವವು ನಿಯಮಬಾಹ್ಯವಿರುವವೊ ಅವುಗಳನ್ನಷ್ಟೆ ತೊಡೆದು ಹಾಕಬಹುದೆ ಹೊರತು ಉಳಿದವುಗಳ ಮಂಡನ, ಅವುಗಳ ಚರ್ಚೆ, ಮುಂದೆ ಮತಗಣನೆ ಇವೆಲ್ಲ ನಡೆಯಬೇಕಾಗುವದು. ಹಾಗೆ ಮಾಡದೆ ಹೋದರೆ ಸಭಾಸದರ ಹಕ್ಕು ಬಾಧ್ಯತೆಗಳಿಗೆ ಪೆಟ್ಟು ಬೀಳುವದು. ಆ ಮೂಲಕವೆ ವೇಳೆ ಬಹಳ ಹಿಡಿಯುವದು.

+ + +

ಜಗತ್ತಿನ ಇತರ ರಾಷ್ಟ್ರಗಳಲ್ಲಿ ಕೂಡ ಹೊಸ ಘಟನೆಗಳು ಸ್ವೀಕೃತವಾಗಲು ಸಾಕಷ್ಟು ವೇಳೆ ಬೇಕಾಗುವದು. ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಘಟನೆ ಸಿದ್ಧವಾಗಲು ಏಳು ವರುಷಗಳು ಬೇಕಾದವು. ೧೯೩೬ರಲ್ಲಿ ನಡೆದ ರಶಿಯನ್ ಘಟನೆಯ ಪುನರ್ವಿಚಾರಕ್ಕೆ ಒಂದೂವರೆ ವರುಷ ಬೇಕಾಯಿತು. ಘಟನೆಯೊಂದೊಡನೆ ಅದು ಒಂದು ಶಾಶ್ವತ ಬಂಧನವಾಗುವದರಿಂದ ಅದರ ನಿರ್ಮಾಣಕ್ಕೆ ಸಾಕಷ್ಟು ವೇಳೆ ಬೇಕಾಗುವದು ಸ್ವಾಭಾವಿಕ. ಗಡಿಬಿಡಿಯಿಂದ ಹಾನಿಯಾದೀತು.

+ + +

೪ ಸರ್ ತೇಜ ಬಹಾದ್ದೂರ ಸಪ್ರು

ಶ್ರೀ ಕೃಷ್ಣಮೂರ್ತಿರಾಯರುಮತ್ತುನಾನು ಅಲಾಹಾಬಾದಕ್ಕೆ ಕಳೆದವಾರ ಹೋದಾಗ ಸರ್ ತೇಜ ಬಹಾದ್ದೂರ ಸಪ್ರು ಅವರನ್ನು ಕಾಣುವ ಇಚ್ಛೆಯಾಯಿತು. ಸಾಂಗಲೀ ರಾಜೇಸಾಹೇಬರು ಹಾಗೂ ನಾವಿಬ್ಬರು ೧೧ ನೆ ತಾರೀಖಿನ ಸಂಜೆ ಅವರ ಮನೆಗೆ ಹೋದೆವು. ವಿಶಿಷ್ಟ ರಾಜಕೀಯ ಕ್ಷೇತ್ರದಲ್ಲಿ ಮರ್ಯಾದಿತ ಪಾತ್ರವನ್ನು ವಹಿಸಿ ಉತ್ತಮ ರೀತಿಯಿಂದ ಕೆಲಸ ಮಾಡಿದವರಲ್ಲಿ ಅವರೊಬ್ಬರು. ಹಿಂದಕ್ಕೆ ಹಿಂದೀ ಘಟನೆಯನ್ನು ಸಿದ್ಧಪಡಿಸುವದಕ್ಕಾಗಿ ಸರ್ವಪಕ್ಷದವರು ನೇಮಿಸಿದ (೧೯೨೭) ನೆಹರೂ ಕಮೀಟಿಯಲ್ಲಿ ಅವರೊಬ್ಬ ಸಭಾಸದರಾಗಿದ್ದರು. ನಾನು ಅವರೆದುರು ಹೋಗಿದ್ದೆನು. ಮೊದಲು ಭಾಷಾನುಗುಣ ಪ್ರಾಂತರಚನೆಯ ವಿರೋಧಿಗಳವರು. ಯ್ಕೋ, ಮುಂಬೈ ಪ್ರಾಂತವನ್ನು ತುಂಡುಮಾಡಬೇಕೆನ್ನುವಿರೋ, ಎಂದು ನನ್ನನ್ನು ಕೇಳಿದರು. ತಾಸೆರಡು ತಾಸು ಶಿಕ್ಷಾಟವಾದ ಬಳಿಕ ಒಪ್ಪಿಕೊಂಡರು.

× × ×

ಈಗ ತೀರ ಹಣ್ಣಾಣ್ಣ ಮುದುಕರು. ಕೈಕಾಲು ಸಹ ಅಲ್ಲಾಡಿಸಲು ಬರುವದಿಲ್ಲ ಎನ್ನಬಹುದು. ನಾವು ಹೋದಾಗ ಒಂದು ಆರಾಮ ಖುರ್ಚಿಯಲ್ಲಿ ಕುಳಿತಿದ್ದರು. ಆದರೆ ಮುಖಮುದ್ರೆ ಒಳ್ಳೆ ತೇಜಸ್ವಿಯಾಗಿತ್ತು. ಆ ನಿಡಿದಾದ ಮೂಗು ಎದ್ದು ಕಾಣುತ್ತಿತ್ತು. ಮಾತಾಡಲು ಸ್ಪಷ್ಟ ಬರುತಿರಲಿಲ್ಲವಾದರೂ ಘಟನಾ ಸಮಿತಿಯ ಬಗ್ಗೆ ಹಲವುಮಾತುಗಳನ್ನು ಕೇಳಿದರು. ಮುಖ್ಯವಾಗಿ ಕಾಮನ್‌ವೆಲ್ಥದಲ್ಲಿ ಇರುವಿರೋ? ಇದ್ದರೆ ರಿಪಬ್ಲಿಕ್ ಹೇಗೆ ಅನ್ನಬಲ್ಲಿರಿ? ಇತ್ಯಾದಿ ಮಾತುಗಳನ್ನು ಒಳ್ಳೆ ಸ್ಪಷ್ಟವಾಗಿ ಆಡಿದರು. ಮನಸು ತಿಳಿ ಹಾಗೂ ವಿಚಾರ ಸ್ಪಷ್ಟ ಎಂದು ಹೇಳಬಲ್ಲೆ. ಸ್ವಾತಂತ್ರ್ಯ ನಿಮ್ಮ ಕಣ್ಣಮುಂದೆ ದೊರತುದರಿಂದ ನೀವು ಕೃತಕೃತ್ಯರಲ್ಲವೆ, ಎಂದೊಡನೆ ಮೋರೆ ಪ್ರಫುಲ್ಲವಾಯಿತು. ಅವರಿಗೆ ಎಂತಹ ಕೃತಾರ್ಥತೆ ಎನಿಸಿರಬೇಕು?

೫ ಅಧ್ಯಾತ್ಮ ವಿದ್ಯಾಮಂದಿರ

ಪ್ರೊ. ರಾನಡೆಯವರು ಎಲ್ಲಿಯೇ ಇರಲಿ ಅವರೊಡನೆ ಅಧ್ಯಾತ್ಮ ಇದ್ದೇ ಇದೆ. ಅವರು ಅಲಾಹಾಬಾದಿನಲ್ಲಿ ಹೋಗಿ ಕುಳಿತರು. ಆದರೆ ಅಲ್ಲಿ ಅಧ್ಯಾತ್ಮ ವಿದ್ಯಾಮಂದಿರದ ಪರವಾಗಿ ಪ್ರೊ. ದಾಮಲೆಯವರ ಒಂದು ಸುಂದರ ಉಪನ್ಯಾಸವು ನಡೆಯಿತು. ವಿಜ್ಞಾನ, ಮಾನವ ಧರ್ಮ ಈ ವಿಷಯದ ಮೇಲೆ ಅವರು ಹಿಂದು ಹಾಸ್ಟೆಲ್ಲಿನಲ್ಲಿ ೮-೧೧-೪೮ ಕ್ಕೆ ಸುಶ್ರಾವ್ಯ ವ್ಯಾಖ್ಯಾನವನ್ನು ಹೇಳಿದ ಎರಡನೆ ದಿವಸವೇ ಶ್ರೀ. ಮುಕರ್ಜಿಯವರು ಬಂಗಾಲಿ ಸಂತರ ಸಂದೇಶ ಎಂಬ ವಿಷಯವನ್ನು ಕುರಿತು ಬಹಳ ಸುಂದರ ಭಾಷಣ ಮಾಡಿದರು. ನನ್ನ ಭಾಷಣವು ಮೂರನೆಯ ದಿನ ನಡೆಯಿತು.

× × ×

ಬೇಗನೆ ಅಧ್ಯಾತ್ಮ ವಿದ್ಯಾ ಮಂದಿರದ ಪರವಾಗಿ ಒಂದು ವಾರ್ಷಿಕವು ಹೊರಡಕಕ್ಕದಿದೆ. ಅದರಲ್ಲಿ ಈ ಎಲ್ಲ ಭಾಷಣಗಳು ಅಚ್ಚಾಗುವವು. ವಿಶಿಷ್ಟ ಯಾವದೆ ಸಂಪ್ರದಾಯಕ್ಕೆ ಅಂಟಿಕೊಳ್ಳದೆ ಸಾಮಾನ್ಯವಾಗಿ ಅಧ್ಯಾತ್ಮಿಕ ವಿಚಾರ ಮಾಡುವ ಸಂಘ ಸಂಸ್ಥೆಗಳ ಅವಶ್ಯಕತೆ ಬಹಳವಿರುವದು. ಕೇವಲ ಜಡವಾದವು ತಾಂಡವ ನೃತ್ಯ ಮಾಡುತಿರುವಾಗ ಚೈತನ್ಯ, ಆತ್ಮ, ಇವುಗಳ ವಿಚಾರವನ್ನು ಸಮಾಜದ ಎದುರು ಇಡುವದು ಅತ್ಯವಶ್ಯ. ಆ ಕೆಲಸವನ್ನೆ ಅಧ್ಯಾತ್ಮ ವಿದ್ಯಾಮಂದಿರವು ಕೈಕೊಂಡಿದೆ ಎಂದು ನನ್ನ ಭಾವನೆ.

ಭದ್ರತಾ ಮಂಡಲವು ಇದೇ ಶುಕ್ರವಾರ (೨೫—೧೧--೪೮) ದಿನಹೈದರಾಬಾದ ಮತ್ತು ಕಾಶ್ಮೀರ ಸಮಸ್ಯೆಗಳನ್ನು ಚರ್ಚೆಗೆ ತೆಗೆದುಕೊಂಡಿತು.

ಹೈದರಾಬಾದ ಬಗ್ಗೆ ಈ ಮೊದಲು ಸಪ್ಟಂಬರ ೨೮ಕ್ಕೆ ಚರ್ಚೆ ನಡೆದಿತ್ತು. ಈ ಮಧ್ಯೆ ನಿಜಾಮರು ತಮ್ಮ ತಕರಾರರನ್ನು ಹಿಂದೆಗೆದ್ಕೊಂಡು, ಶಿಷ್ಟಮಂಡಲವನ್ನು ರದ್ದುಗೊಳಿಸಿದ್ದಾರೆ. ಆದುದರಿಂದ ಹೈದರಾಬಾದದ ಪ್ರಕರಣ ಮೂಲೆಗೆ ಬಿತ್ತೆಂದು ಎಲ್ಲರ ಭಾವನೆಯಾಗಿತ್ತು. ಆದರೆ ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಮಹಮ್ಮದ ಜಾಫರುಲ್ಲಾಖಾನರು ನವಂಬರ ೨೦ಕ್ಕೆ ಪತ್ರ ಬರೆದು, ಹೈದರಾಬಾದಿನ ಪರಿಸ್ಥಿತಿ ದಿನದಿನಕ್ಕೆ ಕೆಡುತ್ತಿರುವದರಿಂದ ಅದನ್ನು ಹಾಗೂ ಕಾಶ್ಮೀರ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಬಿನ್ನವಿಸಿದ್ದರಿಂದ ಅದು ಚರ್ಚೆಗೆ ಬಂದಿರುವದು.

ಶೋಚನೀಯ ನಿಧನ

ಭದ್ರಾವತಿ ಮುನಸಿಪಾಲಿಟಿಯ ಅಧ್ಯಕ್ಷರೂ ಮೈಸೂರ ಕಾಂಗ್ರೆಸ ಧುರೀಣರೂ ಆಗಿದ್ದ ಶ್ರೀ ಬಿ. ಆರ್. ಹಾಲಪ್ಪನವರು ೨೪ನೆಯ ತಾರೀಕು ರಾತ್ರಿ ೯ ಗಂಟೆಗೆ ಹೃದಯವಿಕಾರದಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಶವವನ್ನು ಅಂತ್ಯವಿಧಿಗಾಗಿ ಬೆಂಗಳೂರಿಗೆ ತರಲಾಯಿತು. ಇವರ ನಿಧನದ ನಿಮಿತ್ತ ಭದ್ರಾವತಿಯಲ್ಲೆಲ್ಲ ದುಃಖ ಪ್ರದರ್ಶಿಸಲಾಗುತ್ತದೆ. ಅಂಗಡಿಗಳೆಲ್ಲ ಮುಚ್ಚಿದ್ದವು. ಮರಣ ಸಮಯಕ್ಕೆ ಇವರಿಗೆ ಕೇವಲ ೩೨ ವರುಷಗಳು ಆಗಿದ್ದವು.

ಕೊಲ್ಹಾಪುರ ತೇಲುತ್ತಿದೆ!

(ಶ್ರೀ. ಎ. ಎಂ. ಶೆಟ್ಟಿ, ಅಧ್ಯಕ್ಷ, ಪ್ರಗತಿ ಮಂಡಳ, ಕೊಲ್ಹಾಪುರ)

ಆದಾವ ಕಡೆಗೆ? ಹಿಂದುಸ್ಥಾನ ಸರಕಾರಕ್ಕೆ ಕೊಲ್ಹಾಪುರವೊಂದೇ ಟನಂಥಾ ಪ್ರಶ್ನೆ ಹೆಚ್ಚಿನದಲ್ಲ. ಅಂತೆಯೇ ಹೊರಗಿರುವ ನೂರಾರು, ಸಾವಿರಾರು, ಜಿಲ್ಲೆಗಳವರಿಗೂ ಇದೊಂದು ಕ್ಷುಲ್ಲಕ ಪ್ರಶ್ನೆಯಾಗಿ ತೋರುವುದು ಸಹಜ. ಅದರ ವಿಷಯ, ವಿಸ್ತಾರ, ಸಣ್ಣದಿದ್ದರೂ ವಿಶಾಲ ಭಾರತದಲ್ಲಿ ಇಂಥ ಚಿಕ್ಕ ಚಿಕ್ಕ ಆಂದೋಲನಗಳು ಹಲವೆಡೆಯುದ್ದವೆಂದರೆ, ಧೀಮಂತರಾದರೂ ಕೂಡ, ಮಕ್ಕಳ ಕೋಲಾಟದಿಂದ ಮುಗ್ಗರಿಸಿ ಬೀಳುವಂತೇ ಆಗುವುದು ಸಹಜ. ಕೊಲ್ಹಾಪುರದ ಪ್ರಶ್ನೆಯು ತುಸು ಜಟಿಲವಾಗಿದೆ. ಅತಿ ಅಸಡ್ಡೆ ಮಾಡುವಷ್ಟು ಸುಲಭದ್ದಲ್ಲ. ಕೊಲ್ಹಾಪುರವು ವಿಲೀನವಾಗಬೇಕು ಎನ್ನುವ ಹಂಬಲು ಬಹುಮತದ್ದು. ಅದರೊಟ್ಟಿಗೆ ಇಸ್ಟೇಟು ರಾಜರಂಥ ಸಮಾಜಘಾತಕ ಉಪಜೀವಿಗಳ ನಾಶವು ಅಗಲೇ ಬೇಕೆನ್ನುವದೂ ಎಲ್ಲರಮತ; ಅದರೆ ಇಲ್ಲಿ ಬರೇ "ವಿಲೀನ–ಭೂಭಾರರಾದ ರಾಜರ ವಿನಾಶ" ಇವೆರಡೇ ಗೊಂದಲಕ್ಕೆ ಕಾರಣವಲ್ಲ. ವಿಚಾರವಂತರಿಗೆ ಸಹಜವಾಗಿ ನಿಲುಕುವ ಅದೆಷ್ಟೋ ಪ್ರಶ್ನೆಗಳು ಇಲ್ಲಿ ಉದ್ಭೂತವಾಗಿರುತ್ತವೆ. ಇದಕ್ಕೆ ಕಾರಣವೆಂದರೆ, ಹಿಂದುಸ್ಥಾನ ಸರಕಾರದ ಧೋರಣವೂ ಅಲ್ಲ, ಪೂಜ್ಯ ಬಾಪೂಜಿಯ ಕೊಲೆಯೂ ಅಲ್ಲ; ದುಂಡುಗಾರ ರಾಜರ ಇರಸ್ಥಿತಿಯೂ ಅಲ್ಲ. ಅದುದರಿಂದ ಕೊಲ್ಹಾಪುರ ಸಾಗುತ್ತಿದೆ ಎತ್ತ? ಎಂಬ ಅತುರವು ಸಹಜವಾಗಿ, ಹಾಸ್ಯಾಸ್ಪದವಾಗಿ, ನಗೆಗಡಲ ಬಿಳಿ ನೊರೆಯಾಗಿ ಇಂದು ಹೊರಹೊಮ್ಮುತ್ತಿದೆ.

ಹಲವು ವರ್ಷಗಳಿಂದಲೂ, ರಾಜಕೀಯವೆಂದರೇನೆಂದೇ ತಿಳಿಯದ ಕೊಲ್ಹಾಪುರದ ಸಾರ್ವಜನಿಕರಿಗೆ ಈಗ ಒಂದೆರಡು ವರ್ಷಗಳಿಂದ ಅದರ ಗಂಧಗಾಳಿಯು ಹತ್ತಲು ಪ್ರಾರಂಭವಾಗಿ, ಅದರ ತಲೆಬಾಲಗಳಾವುವೆಂಬುದರ ಕಲ್ಪನೆಯುಲ್ಲದೆ ಕುರುಡರು ಆನೆಯನ್ನು ವರ್ಣಿಸಿ ಕೇ ಕೇ ಹಾಕಿ ಕುಣಿದಾಡಿದಂತೆಯೇ ಆಗಿದೆ. ಅರಿಜಾಣರನ್ನು ಒಪ್ಪಿಸುವದು ಅತಿ ಕಷ್ಟವೆಂಬುದು ಇಲ್ಲಿಯವರಿಂದ ಸ್ವಯಂಸಿದ್ಧವಾಗುತ್ತಿದೆ. ವಿಲಾಸದ, ಭೋಗಿಯ ಜನರಾದ ಇಲ್ಲಿಯವರಿಗೆ, ಆಧುನಿಕ ಸವಲತ್ತುಗಳೆಲ್ಲ ಬೇರೆ ಬೇಕು. ಹಾಗೆಂದ ಬಳಿಕ ಇಲ್ಲಿಯವರು ತಮ್ಮ ಪೂರ್ವಕಾಲದಿಂದಲೂ ಬಂದ ಅಂಥ ಅನುಕರಣೆಯನ್ನು ದೂಡಿಸಿ ಬಿಡಲೂ ತಯಾರಿಲ್ಲ. ಹೀಗಾಗಿ ಮೂವತ್ತುವಾರುವದ್ದದ ಮುಂಡಾಸುಕಿವಿವರೆಗಿನ ವಿೂಸೆಗಳು ಕಂಡಿಗಳೊಟ್ಟಿಗೆ, "ಬುಶ್ ಕೋಟೊ" "ಹೇಟ್ ಕೋಲರೂ" ಇವರಿಗೆ ಬೇಕಾಗಿದೆ. ಇಲ್ಲಿಯ ಪೂರ್ವ ಸಂಪ್ರದಾಯ ಜನರ ವೇಷಭೂಷಣ ಭಾಷೆ ವ್ಯವಹಾರಾದಿಗಳೆಲ್ಲ ಉಪ್ಪುಸಕ್ಕರೆ ಬೆರೆಸಿದಂತಾಗಿ ಬಿಟ್ಟಿದೆ. ವಿದ್ಯುದ್ದೀಪಗಳಿಂದ ಸಜ್ಜಾದ ಮದುವೆ ಮಂಟಪದಲ್ಲಿ, ಇಲಾಲು ಕೊಲ್ಲಿಗಳ ಆಡಂಬರವನ್ನು ತೋರಿಸುವಂಥ ಇಲ್ಲಿಯ ಸುಂದರ ರಾವಣರ ಒಡ್ಡೋಲಗವನ್ನು ಸುಧಾರಿಸಬೇಕೆಂದರೆ, ಅದು ಕಾನೂನಿನ ಕೈಗೆ ಮಾತ್ರ ಸಾಧ್ಯ!

ಇಲ್ಲಿ ಪಾರ್ಟಿಗಳು ಹಲವು. ಪ್ರತಿಯೊಂದು ಪಾರ್ಟಿಗೂ ಒಂದಲ್ಲ ಒಂದು ಕಾರಣಗಳು ಇದ್ದೇ ಇವೆ. ಅದರೆ ದು:ಖದ ವಿಷಯವೆಂದರೆ ಉದ್ದೇಶ, ಗುರಿ ಸಾಧನೆ, ಶಿಸ್ತುಗಳೆಂಬುದು ಮಾತ್ರ ಇಲ್ಲವೇ ಇಲ್ಲ. ದೃಷ್ಟಾಂತಕ್ಕಾಗಿ ಹತ್ತು ಹಲವು ಪಂಗಡಗಳ ಹೆಸರನ್ನು ಎತ್ತಿತೋರಿಸಬಹುದು. ಮುಂಡಾಸಿಗಳಿಗೊಂದು ಪಾರ್ಟಿ; ಟೊಪ್ಪಿಗೆಯವರದೊಂದು ಪಾರ್ಟಿ; ರಾಜಮನೆತನದ ಪಾರ್ಟಿ ಮೊನ್ನೆ ಗಾದಿಗೆ ಬಂದ ರಾಜರಿಗೆ ಇನ್ನೊಂದು ಪಾರ್ಟಿ; ಜಾತಿ ಭೇದಗಳಿಂದಾದ ಪಾರ್ಟಿ; ಸಮತಾವಾದಿಗಳನ್ನು ಹಿಂದಿನಿಂದ ಹೊಗಳುವರದೊಂದು ಪಾರ್ಟಿ; ಬಾಗಲರಿಗೊಂದು ಪಾರ್ಟಿ, ಜೈಲಿಗೆ ಹೋಗಿಬಂದವರಿಗೊಂದು ಪಾರ್ಟಿ; ಜೈಲಿಗೆ ಹೋಗಬೇಕೆನ್ನುವವಂದಿನ್ನೊಂದು ಪಾರ್ಟಿ; ಎಲ್ಲಾ ಪಾರ್ಟಿಗಳನ್ನು ಖಂಡಿಸುವ, ತಮ್ಮದೇ ಆದ ಯಾವ ಉದ್ದೇಶವೂ ಇಲ್ಲದವರದೊಂದು ವಿಚಿತ್ರ ಪಾರ್ಟಿ– ಹೀಗೆಲ್ಲಾ "ಸಿಂಗಾರ ಪಾರ್ಟಿ" ಯಂಥಾ ಪಂಗಡಗಳ ನೆಲೆಗೆ ಕಾರಣವೇದರೆ, ರಾಜಕೀಯದಲ್ಲಿ ನುರಿಯದ ತಪ್ಪು, ಅರ್ಥ ತಿಳಿದು–ಎಲ್ಲಾ ಬರುತ್ತದೆಂದು ನಟಿಸುವ ಉತ್ತರಕುಮಾರರ ರಾಜ್ಯವು ನಮ್ಮ ಕೊಲ್ಹಾಪುರ ಪ್ರಮಿಳಾ ರಾಜ್ಯವಾಗಿರುತ್ತದೆ! ಛತ್ರ[illegible] ಸೌಮ್ಯ ಅತ್ರಿ [illegible] ಘಟನಾಗಿ [illegible] ಈಗೀಗ [illegible], ತಮ್ಮ ಸ್ವಾಸಿನಿಷ್ಠೆಯನ್ನು, ಕಂಡುವಾದರೂ ಪ್ರದರ್ಶಿಸಿ [illegible] ಅತುರವಿರುವದು ತಪ್ಪಲ್ಲ ಅದರೆ, ಸೋಜಿಗವೆಂದರೆ, ಗೆದ್ದವರ ಸುದ್ದಿಯನ್ನೇ ಮಾತನಾಡಲು ಕಲಿತ ಈ ಸ್ವಾಮಿಭಕ್ತರಿಂದ, ಅಸ್ವಭಾಕತನವೂ ದಿನಂಪ್ರತಿ ನಡೆದೇ ನಡೆಯುತ್ತಿದೆ. ಇದರ ಅರಿವಾದರೂ ಮಹಾನುಭಾವರಿಗೆ ಅಗದಿಷ್ಟರೆ ಕೇವಲ ಹಳ್ಳಿಗರೂ, ಟೈಕಾರಿ ಪಂಗಡದವರೂ ಅದ ಸಾರ್ವಜನಿಕರ ಪತನವು ದಿನದಿಂದ ದಿನಕ್ಕೆ ದೊಡ್ಡ ಪ್ರಮಾಣದಲ್ಲಿ ಘಟಿಸಿ ಹೋಗುತ್ತಿದೆ. ಸಾರ್ವಜನಿಕರ ಹಿತ, ನಿಜವಾದ ರಾಮರಾಜ್ಯದ ಅರ್ಥ, ಊಟ ಉಡಿಗೆಯ ಪ್ರಶ್ನೆಯನ್ನು ಬಿಡಿಸುವ ಕಾರ್ಯತತ್ಪರತೆಗಳಾದ ಮಹೋದ್ದೇಶಗಳನ್ನು ಗುರಿಮುಟ್ಟಿಸುವ ಏಕನಿಷ್ಠೆಯಿಂದ ಮುಂದುವರಿಸುವದೊಂದೇ ತಮ್ಮ ಪಂಥವೆಂದಿಟ್ಟುಕೊಂಡು ತಮ್ಮ ಶಕ್ತಿಯುಕ್ತಿಗಳನ್ನು ಸವೆಯಿಸಬೇಕಲ್ಲದೆ, ಹಾಯಿಯಿಲ್ಲದ ತೂತುಬಿದ್ದ ಮಜ್ವೆಯಂತೆ ಕೊಲ್ಹಾಪುರವನ್ನು ಹಿಂದುಸ್ಥಾನ ಮಹಾಸಾಗರದ ಮಧ್ಯ ತೇಲಿಬಿಟ್ಟು, "ರೇಸ್ ಕೋರ್ಸಿ" ನ ನಶೀಬಿನ ಫಲಿತಾಂಶವನ್ನು ಕಾದು ಕೂಡ್ರುವವರಂತೆ ಸಮಯ ಹಾಳು ಮಾಡುವದು ಸಮಂಜಸವಲ್ಲ. ಹಿಂದುಸ್ಥಾನ ಸರಕಾರವು ಕೊಡುವ ಆಜ್ಞೆಯನ್ನು ಕಾರ್ಯತಃ ಆಚರಿಸಿ ತೋರಿಸುವದೊಂದೇ ನಮ್ಮ ಕೊಲ್ಹಾಪುರವೆಂಬ ದಿಕ್ಕುಗೆಟ್ಟ ಹಡಗದ ಆಶಾಸಿಶಾನೆಯಾಗಿದೆ!

ಶಾಂತಿಕಾಲದ ರಣರಂಗಗಳು

(೫ ನೆಯ ಪುಟದಿಂದ)

ತಲೆ ಎತ್ತಿದರೆ, ತಬ್ರಿಜವು ಮದ್ದಿನ ಮನೆಯಾಗುವುದರಲ್ಲಿ ಸಂಶಯವಿಲ್ಲ. ಅಂತೂ ತೆಹರಾನ ಅಮೇರಿಕನ್ನರ ಕೇಂದ್ರ, ತಬ್ರಿಜ ರಶಿಯನರ ಕೇಂದ್ರ ಎನಿಸಿದೆ.

ಕಾರಸ, ಪಾರಧಾನ

ತುರ್ಕಿಯ ಉತ್ತರ ಪೂರ್ವ ದಿಕ್ಕಿಗೆ ರಶಿಯದ ಸೀಮೆಗೆ ಹೊಂದಿ ಕಾರಸ, ಮತ್ತು ಪಾರಧಾನ ಎಂಬ ಎರಡು ಜಿಲ್ಲೆಗಳಿವೆ. ಅವುಗಳನ್ನು ತುರ್ಕಿಯಿಂದ ಬೇರೆ ಮಾಡುವ ಪ್ರಯತ್ನವನ್ನು ರಶಿಯ ನಡೆಸಿರುತ್ತದೆ. ರಶಿಯ ಈ ಎರಡು ಜಿಲ್ಲೆಗಳನ್ನು ವಶಪಡಿಸಿಕೊಂಡು ತುರ್ಕಿಯ ತಲೆಯ ಮೇಲೆ ತನ್ನ ಪ್ರಭುತ್ವ ಹೇರಲಿಚ್ಛಿಸುತ್ತದೆ.


ಗ್ರೀಸಿನ ರಣರಂಗ

ಯುರೋಪಿನಲ್ಲಿ ರಶಿಯದ ನೂಡಲ ಗುಂಪು ಮತ್ತು ಅಮೇರಿಕದ ಪಡುವಲ ವಲಯಗಳಲ್ಲಿ ಜಗ್ಗಾಟ ನಡೆದಿದೆ. ಈ ಜಗ್ಗಾಟ ಗ್ರೀಸಿನಿಂದ ಆರಂಭವಾಗಿ ಬರ್ಲಿನ್ ಡಾಂಜಿಗಗಳ ವರೆಗೆ ಹಬ್ಬಿದೆ. ಗ್ರೀಸಿನಲ್ಲಿ ಈಗ ಎರಡೂ ಪಂಗಡಗಳು ಯುದ್ಧದಲ್ಲಿ ತೊಡಗಿವೆ. ಕಮ್ಯುನಿಸ್ಟರು ಒಂದು ವರ್ಷ ಯುದ್ಧ ಮಾಡಿ ಗ್ರೀಸಿನಲ್ಲಿ ತಮ್ಮ ಸ್ಥಾನ ಸ್ಥಿರಪಡಿಸಿಕೊಂಡಿದ್ದಾರೆ. ಇಷ್ಟೇ ಅಲ್ಲ; ಮುಂದೆ ಎಲ್ಲ ಗ್ರೀಸನ್ನು ನುಂಗುವ ಹವಣಿಕೆಯಲ್ಲಿದ್ದಾರೆ. ಅವರಿಗೆ ರಶಿಯ, ಬಾಲ್ಕನ ರಾಷ್ಟ್ರಗಳ ಸಹಾಯವಿದೆ.

ತ್ರಿಯಸ್ತೆ ಮತ್ತು ಬರ್ಲಿನ್

ಯುಗೋಸ್ಲಾವಿಯ, ಮತ್ತು ಇಟಲಿಯ ನಡುವೆ ಇದ್ದ ತ್ರಿಯಸ್ತೆ ಭಾಗವು ಈಗ ರಣರಂಗವಾಗಿದೆ. ತ್ರಿಯಸ್ತೆ ಬಂದರವು ಇಟಲಿ, ಯುಗೋಸ್ಲಾವಿಯ, ಅಸ್ಟ್ರಿಯಗಳ ಮಧ್ಯದಲ್ಲಿದೆ. ಈಗದರ ಮೇಲೆ ರಾಷ್ಟ್ರ ಸಂಘದ ಅಧಿಕಾರವಿದೆ. ತ್ರಿಯಸ್ತೆಯನ್ನು ವಶ ಮಾಡಿಕೊಳ್ಳಲು ಎರಡೂ ಬಣದವರು ಚಡಪಡಿಸಹತ್ತಿದ್ದಾರೆ. ಒಂದುವೇಳೆ ಇದು ರಶಿಯದ ಕೈವಶಕ್ಕೆ ಹೋದರೆ ರಶಿಯನ್ ಸೈನ್ಯವನ್ನು ಬರಿಯ ೨೪ ತಾಸುಗಳಲ್ಲಿ ಅಡ್ರಿಯಾಟಿಕ್, ಮತ್ತು ಭೂಮಧ್ಯ ಸಮುದ್ರದ, ವರೆಗೆ ಸಹಜವಾಗಿ ತರಬಹುದು. ಆಗ ಮಾತ್ರ, ಅಮೇರಿಕನ್, ಭೂ, ಜಲ ಸೈನ್ಯಗಳ ಒಂದು ಭಾಗದ ಮೇಲೆ ಪೂರ್ಣ ಪೆಟ್ಟು ಬೀಳುವದರಲ್ಲಿ ಸಂದೇಹವಿಲ್ಲ.

ಬರ್ಲಿನ [illegible] ಹೋಗಿದೆ. [illegible] ಅದರ [illegible] ಅನ್ನಬಹುದು. ಬರ್ಲಿನ [illegible] ರಶಿಯನ [illegible] ಜರ್ಮನಿಯಿಂದ ಸುತ್ತುವರಿಯ[illegible]. ಅಮೇರಿಕನ್ ವಲಯದ [illegible] ಭಾಗದ [illegible] ಮಹತ್ವದ ಕೇಂದ್ರವಾಗಿ [illegible]. ಬರ್ಲಿನ ಪ್ರಶ್ನೆಯು ಯುದ್ಧವನ್ನು ಅತಿ ಸಮೀಪಕ್ಕೆ ಎಳತರಹತ್ತಿದೆ. ಈಗ ಅಲ್ಲಿ



ನಾಚಿಕೆ

ನಾಚಿಕೆಯು [illegible] ಕೆಯೇ ಆಪಾಗರಿಕವಾಗುತ್ತದೆ [illegible]. ನಮ್ಮಲ್ಲಿ ಬಹಳ ಸಂಕೋಚರಿಯರಿಗೆ ಗೊತ್ತಿಲ್ಲ. "ಒರಿಯಕ್ಕನ [illegible] ಮನೆಮಂದಿಗೆಲ್ಲ" ಎಂಬುದು [illegible] ದೆಂದು ಒಮ್ಮೆ ಹೇಳಿದರೆ ಅತಿಶಯೋಕ್ತಿಯಾಗಲಾರದು. ನಮ್ಮ ಪ್ರತಿನಿತ್ಯದ ನಡೆ, ನುಡಿ, ಆಚಾರ ವ್ಯವಹಾರದಲ್ಲಿ ಸೂಕ್ಷ್ಮವಾಗಿ ಕಣ್ಣು ಹಾಕಿದರೆ ನಾವು ನಮ್ಮ ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಹೇಗೆ ಅನೇಕ ಕೃತಕವೂ ಜಟಿಲವೂ ಆದ ಭಾವಾಭಾಸಗಳು ಹುಟ್ಟಲು ಕಾರಣರಾಗುತ್ತೇವೆಂಬುದು ಹೊಳೆಯದಿರದು.

ಅಂಜಿಕೆಗೆ ಅಳಾಗಿ ಆಚರಿಸುವ ಸರ್ವ ಕಾರ್ಯಗಳೂ ಅಧಮಾಧಮ. ತಿಳಿದು ಆಚರಿಸುವ ವ್ಯವಹಾರಕ್ಕೆ ಮಾತ್ರ ಬೆಲೆಯಿದೆ. ಹೆಣ್ತನದ ನಮ್ಮ ಕೆಲ ನಡತೆಗಳು ಮಕ್ಕಳ ಮಾನಸಿಕ ದೌರ್ಬಲ್ಯಕ್ಕೆ ಬೀಜವಾಗಿದೆಯೆಂದು ಗೊತ್ತಾಗುತ್ತದೆ. Decency- ನಾಗರಿಕ ನಡತೆ ಎಂಬ ಆಭಾಸಿಕ ಜ್ಞಾನದಿಂದ ನಾವು ಉಡುತೊಡುಕೊಡುಕೊಳು, ಆಹಾರ ವ್ಯವಹಾರಗಳಲ್ಲಿ ಕೇವಲ ನಿರರ್ಥಕವಾದ ಅಂಜಿಕೆ ಮತ್ತು ನಾಚಿಕೆಗಳು ಹೆಣ್ಣುಮಕ್ಕಳ ಮನದಲ್ಲಿ ಬಿಂಬಿಸುವಂತೆ ಮಾಡಿ ಅವರ ಸರಳತನ ನಾಶವಾಗುವುದಕ್ಕೆ ಕಾರಣರಾಗುತ್ತೇವೆ ಮತ್ತು ಗಂಡುಮಕ್ಕಳಲ್ಲಿ ಹೆಣ್ಣೆಂದರೆ ಏನೋ ಒಂದು ಗೂಢವಸ್ತು ಎಂಬ ಭಾವ ನೆಲೆ ನಿಲ್ಲಲವಕಾಶ ಕೊಟ್ಟು ತನ್ಮೂಲಕ ಅವರು ಇಲ್ಲದ ಕಲ್ಪನೆಗಳನ್ನು ಕಟ್ಟಿಕೊಂಡು ತಮ್ಮ ಪತ್ನಿ ಮತ್ತು ಗೆಳತಿಯರೊಡನೆ ಅಸ್ವಾಭಾವಿಕವಾಗಿ ನಡೆದುಕೊಳ್ಳುವಂತೆ ನಾವು ಮಾಡುತ್ತೇವೆ. ಈ ನಮ್ಮ ದುರ್ನೀತಿಯ ಫಲವಾಗಿ ನಮ್ಮ ಮಕ್ಕಳು ಕೆಟ್ಟರೆ ಅವರ ಲಿಂಗಭೇದವನ್ನೂ ಪ್ರಾರಬ್ಧವನ್ನೂ ಗುರಿ ಮಾಡಿ ಬೈದು ಅಲ್ಲದ ಸಲ್ಲದ ದೈಹಿಕ ಮತ್ತು ಅದಕ್ಕಿಂತ ಅಪಾಯಕರವಾದ ಮಾನಸಿಕ ಶಿಕ್ಷೆ ಕೊಟ್ಟು ಕರ್ತವ್ಯ ಮಾಡಿದೆವೆಂಬ ಜಂಭದಿಂದ ತೃಪ್ತಿಯಿಂದ ನಾವು ಅನೇಕ ವೇಳೆ ಕುಳಿತುಕೊಳ್ಳುತ್ತೇವೆ. ಅತಿನಾಚಿಕೆ ಹೆಣ್ಣುಮಕ್ಕಳಲ್ಲಿ ಅರಸಿಕತೆ, ಪಾಪಬುದ್ಧಿ, ಅನಾರ್ಜವ ಅನ್ಯದೋಷಾರೋಪ ಪ್ರವೃತ್ತಿ, ಹಿಂಸಾತ್ಮಕ ಮೌನ ಇವನ್ನು ಬೆಳೆಸಲು ಎಡೆಗೊಡುತ್ತದೆ ಎಂಬುದನ್ನು ತಿಳಿದ ತಾಯಂದಿರು ಎಷ್ಟು ಜನರಿದ್ದಾರೆ? 'ತಾಯಿಯೇ ಗುರು' ಎಂದು ಪೂರ್ವಜರು ನಮಗೆ ಕೊಟ್ಟ ಮಾನ್ಯತೆಗೆ ಎಳ್ಳಷ್ಟೂ ಅರ್ಹರಾಗದೆ ಇರುವುದೇ ನಮ್ಮ ದಾಸ್ಯದ, ದು:ಖದ, ಹಿನ್ನಡೆಯ ಹಿನ್ನೆಲೆ ಎಂಬುದನ್ನು ಇನ್ನೂ ತಿಳಿದುಕೊಳ್ಳದಿರುವುದಾದರೂ ಈ ಅತಿ ನಾಚಿಕೆ ಅಥವಾ ಆತ್ಮಹಾನಿಕರವಾದ ಸಂಕೋಚದಿಂದ ಜ್ಞಾನಾರ್ಜನೆಯಲ್ಲಿ ಹಿಂದುಳಿದ ಪ್ರವೃತ್ತಿಯಿಂದಲೇ ಎಂಬುದನ್ನು ನಾವಿಂದು ಮನಗಾಣಬೇಕು.

—ಹಿರಿಯಕ್ಕ

ನಮ್ಮ ವಿದ್ಯಾಭ್ಯಾಸದ ಪ್ರಗತಿ

ಜಗತ್ತಿನ ಎಲ್ಲ ಭಾಗಗಳ ತರುಣಿಯರ ಶ್ರೇಷ್ಠ ಸಂಘಗಳಿಂದ ಬಂದ ೫೦ ಪ್ರತಿನಿಧಿಗಳು ನ್ಯೂಯಾರ್ಕಿನ ಅಂತಾರಾಷ್ಟ್ರೀಯ ಸ್ತ್ರೀಯರ ಅಭ್ಯಾಸ ಮತ್ತು ಪುನಾರಚನೆಯ ಪರಿಷತ್ತಿನಲ್ಲಿ ಸೇರಿ ೨೬ ರಾಷ್ಟ್ರಗಳನ್ನು ಪ್ರತಿನಿಧಿಸಿದರು. ಜಗತ್ತಿನಲ್ಲಿ ವಿದ್ಯಾಪ್ರಸಾರಕ್ಕೆ ಬಹುಮಟ್ಟಿಗೆ ಹೆಂಗಸರೇ ಜವಾಬುದಾರರೆಂದು ಅವರು ನಿರ್ಣಯಿಸಿಕೊಂಡರು. ದುರ[illegible]

ಯುದ್ಧ [illegible] [illegible] ಮೇಲೆ ಬಂದಂತೆ ಭಾಸವಾಗುತ್ತದೆ. ಅದನ್ನು ಇನ್ನೂ ನಾಲ್ಕಾರು ವರ್ಷ ಒಂದೂಡಲು ರಾಷ್ಟ್ರಸಂಘದ ಮುತ್ಸದ್ದಿಗಳು ಶಕ್ತಿ ಮೀರಿ ದುಡಿ[illegible] ಯುದ್ಧದ ಅಂಜಿಕೆಯು ಎಲ್ಲೆಡೆಯಲ್ಲಿಯೂ ಹರಿದಿದೆ. ಅದರೆ ಅದು ಬರಿಯ ಅಂಜಿಕೆಯೋ [illegible]

[illegible]

[illegible] ಕೊಡುವುದು [illegible] ಎಂದು [illegible] ಹೇಳಿದಳು.

ರಶಿಯದ ಆದರ್ಶ

ರಶಿಯದಲ್ಲಿ ಮೊನ್ನೆ ಮೊನ್ನೆ [illegible] ಜನ ಹುಡುಗಿಯರು ದೇವರು ಕೊಟ್ಟ ತಮ್ಮ ಸೌಂದರ್ಯವನ್ನು [illegible] ಕೊಂಡದ್ದು ಪತ್ರಿಕೆಯೊಂದಕ್ಕೆ [illegible] ಆ ಹುಡುಗಿಯರು [illegible] ಯೋಗ್ಯರಿದ್ದರೂ ತಮ್ಮ [illegible] ಒಂದು ಸಂಪತ್ತೆಂಬ ದುರ್ಭಾವದಿಂದ ೨–೩ ಜನ ಹುಡುಗರಿಗೆ ಏಕಕಾಲದಲ್ಲಿ ಪ್ರೇಮ ಪತ್ರ ಬರೆದು ವಂಚಿಸಿದರು. ಪತ್ರಿಕೆಯೊಂದು ಅದನ್ನು ಉಗ್ರವಾಗಿ ಟೀಕಿಸಿ [illegible] ರೊಳ್ಳಕ್ಕಾಗಿ [illegible] ಪರದೇಶದ ಹೆಣ್ಣುಮಕ್ಕಳ [illegible] ಅಂಥ ಒಬ್ಬಳೂ ರಶಿಯದಲ್ಲಿ [illegible] ನೋಡಿಕೊಳ್ಳುವದು ರಶಿಯದ ಧರ್ಮವೆಂದೂ ಸಾರಿ ಆ ಹುಡುಗಿಯರನ್ನು ಬಯಲಿಗೆಳೆದು ಬುದ್ಧಿಗಲಿಸಿದೆ. [illegible] ಧರ್ಮದ ತವರೆನಿಸಿದ ಭಾರತಕ್ಕೆ ಉತ್ತಮ ಆದರ್ಶವೆನಿಸುವುದರಿಂದ ವಿಕಲ್ಪಮತಿತ್ವ ಪರರಂತ್ತಿರುವ ಈ ಕಾಲದಲ್ಲಿ ನಮ್ಮ ಮಹಿಳೆಯರು ತಮ್ಮನ್ನೂ ತಮ್ಮ ಮಾನಾಭಿಮಾನಗಳನ್ನೂ ತಾವು ಕೈಹಿಡಿದವರನ್ನೂ ಸುಖವಾಗಿ ಇಡಬೇಕಾದರೆ ಮೊದಲು ರಶಿಯದ ಆದರ್ಶವನ್ನು ಆಚರಿಸಬೇಕು.

ವಿಚ್ಛೇದಕ್ಕೆ ತಡೆ

ವಿವಾಹವಿಚ್ಛೇದದ ಕಾಯಿದೆಯನ್ನು ದುರುಪಯೋಗ ಪಡಿಸಿಕೊಳ್ಳದಂತೆ ತಮ್ಮ ಮೇಲೆ ತಾವೇ ನಿರ್ಬಂಧ ಹಾಕಿಕೊಂಡ ದ್ರ್ಯೂ ದಂಪತಿಗಳ ನಡತೆ ಆದರ್ಶವಾದುದಾಗಿದೆ. ತಮ್ಮ ಮದುವೆಯನ್ನು ನ್ಯಾಯಾಧೀಶರೆದುರು ರಜಿಸ್ಟರ ಮಾಡಿಸಲು ಹೋದಾಗ ಅವರು ಪರಸ್ಪರ ಒಂದು ಒಪ್ಪಂದಕ್ಕೆ ಸಹಿಹಾಕಿದರು; ಆ ಒಪ್ಪಂದದ ಪ್ರಕಾರ ಅವರಿಬ್ಬರಲ್ಲಿ ಮೊದಲು ಯಾರು ವಿವಾಹವಿಚ್ಛೇದಕ್ಕೆ ಎಳಸುವರೋ ಅವರು ೫೦ ಸಾವಿರ ರೂಪಾಯಿಗಳನ್ನು ಎದುರಾಳಿಗೆ ಕೊಡಬೇಕೆಂದು ಬರೆದಿದ್ದರು. ಈ ಆದರ್ಶ ನಡತೆಯಿಂದ ವಿಚ್ಛೇದವೊಂದು ಕೇವಲ ಅಪತ್ಕರ್ಮವಾಗಿ ಉಳಿದು, ಸಾಮಾನ್ಯ ಪರಿಸ್ಥಿತಿಯಲ್ಲಿ ಪ್ರಾಮಾಣಿಕರೂ ಸಭ್ಯ ದಂಪತಿಗಳೂ ಅಗಿ ಸ್ಥಿರ ಜೀವನ ಸಹಕಾರಿಗಳಾಗಿ ಸಮಾಜದ ಉನ್ನತಿಯನ್ನು [illegible] ಮನೋದಾರ್ಢ್ಯ ಎಲ್ಲರಲ್ಲೂ [illegible] ಕಾಗುವುದು. ಈ ಉತ್ತಮ [illegible] ನಮ್ಮ ಹಿಂದುಸ್ಥಾನದ [illegible] ನೆಯ ದಂಪತಿಗಳಾದರೂ ಕಲಿತು [illegible] ವುದು ಪರಸ್ಪರರಿಗೂ ಪರಸ್ಪರರ [illegible] ಸಮಾಜಕ್ಕೂ ಮಹೋಪಕಾರ ಮಾಡಿದಂತಾಗುವುದು. ಸುಶಿಕ್ಷಿತ ಸ್ತ್ರೀಯರಿಗೆ [illegible] [illegible]

ನಗೆಯ ನೊರೆ

೬೫ ನೆಯ ಕಲೆ

ಕೈರೋದಲ್ಲಿ ಒಂದು ಕತ್ತರಿಗಳ್ಳರ ಕಾಲೇಜಿವೆ. ಅಲ್ಲಿ ಕತ್ತರಿಗಳ್ಳತನದಲ್ಲಿ ಪದವಿಯನ್ನು ಪಡೆಯಬಹುದು. ಹಾಗೆ ಪದವೀಧರರಾದ ೧೫ ಜನರನ್ನು ಇತ್ತೀಚಿಗೆ ಪೋಲೀಸರು ಹಿಡಿದಿದ್ದಾರೆ. ಅವರ ಗುರು ಹಿಂದಣ ಒಬ್ಬ ಪೋಲೀಸು ಅಧಿಕಾರಿ. ಅವನ ಹೆಸರು ಅಹ್ಮದ್ ಮಹಮುವ್ ಎಲ್ ಬಾರ್ಡಿಸ್ಸಿ. ಪದವೀಧರರ ಪುರಸ್ಕಾರ ಪತ್ರದ ಒಕ್ಕಣೆ: “ನಾನು ಈ ಮೂಲಕ ಈ ಹುಡುಗನು ಜೇಬಿಗೆ ಕತ್ತರಿ ಹಾಕುವ ಕಲೆಯಲ್ಲಿ ಉತ್ತೀರ್ಣನಾಗಿದ್ದಾನೆಂದು ಪುರಸ್ಕರಿಸುತ್ತೇನೆ” ಎಂದಿದೆ. ಅವನ ವಿದ್ಯಾರ್ಥಿಗಳಲ್ಲಿ ಒಬ್ಬನು ಕ್ರಿಮಿನಲ್ ಶಾಲೆಯಲ್ಲಿ ಜಾಗ ಸಿಗದೆ ಉಳಿದವನು, ಮತ್ತೊಬ್ಬ ತನ್ನ ಸಾಕು ತಾಯಿಯನ್ನು ಕಂಡರಾಗದೆ ಮನೆಬಿಟ್ಟು ಓಡಿಬಂದವನು, ಇನ್ನೊಬ್ಬ ಸಿನೆಮಕ್ಕೆ ಹೋಗಲು ದುಡ್ಡು ಕಡಿಮೆ ಬಿದ್ದಿತೆಂದು ಅದನ್ನು ಸಂಪಾದಿಸುವುದನ್ನು ಕಲಿಯಲು ಈ ಕಾಲೇಜಿಗೆ ಸೇರಿದವನು!

ವ್ಯಾಪಾರದಲ್ಲಿ ಅವ್ಯಾಪಾರ

ಒಂದು ದ್ವೀಪದಲ್ಲಿರುವ ನಿವಾಸಿಗಳಿಗೆ ಚಿನ್ನ ಬಹಳವಿದ್ದು ಅದನ್ನು ಏನುಮಾಡಬೇಕೆಂದು ಗೊತ್ತಿಲ್ಲವಾಗಿತ್ತೆಂದು ತಿಳಿದ ಒಬ್ಬ ವ್ಯಾಪಾರಿ ಒಂದು ಹಡಗಿನ ತುಂಬ ನೀರುಳ್ಳಿಯನ್ನು ತುಂಬಿಕೊಂಡು ಅಲ್ಲಿಗೆ ಹೋದನು, ಅಲ್ಲಿ ನೀರುಳ್ಳಿಯನ್ನು ಎಂದೂ ಕಾಣದ ಅವರು ಅದನ್ನು ತೆಗೆದುಕೊಂಡು ಅದರ ಬದಲು ಚಿನ್ನ ತುಂಬಿಕೊಟ್ಟರು. ಇದನ್ನು ಕೇಳಿ ಮತ್ತೊಬ್ಬ ವ್ಯಾಪಾರಿಗೆ ಬಾಯಲ್ಲಿ ನೀರು ಬಂದಿತು. ಅವನು ನೀರುಳ್ಳಿಗೆ ಇಷ್ಟು ಮರುಳಾದ ದ್ವೀಪವಾಸಿಗಳು ಬೆಳ್ಳುಳ್ಳಿಗೆ ಇನ್ನೆಷ್ಟು ಮರುಳಾಗಲಾರರು!— ಎಂದುಕೊಂಡು ತನ್ನ ಹಡಗಿನ ತುಂಬ ಬೆಳ್ಳುಳ್ಳಿಯನ್ನು ತುಂಬಿಕೊಂಡು ಹೋಗಿ ಬಂಗಾರವನ್ನು ಕೇಳಿದನು. ಆಗ ಆ ದ್ವೈಪಾಯನರು ಬೆಳ್ಳುಳ್ಳಿಯನ್ನು ಸ್ವೀಕರಿಸಿ ಅದರ ಬದಲು ಬಂಗಾರ ಕೊಡುವುದರ ಬದಲು ತಮ್ಮ ದೇಶದಲ್ಲಿ ಬಂಗಾರಕ್ಕಿಂತಲೂ ಅಮೂಲ್ಯ ವಸ್ತು ನೀರುಳ್ಳಿಯೇ ಎಂದು ಹಡಗಿನ ತುಂಬ ನೀರುಳ್ಳಿಯನ್ನು ತುಂಬಿಸಿ ಅವನನ್ನು ಮನೆಗೆ ಕಳಿಸಿದರಂತೆ!

ಕಪಿತ್ವದ ಪ್ರತಿಭೆ

ಕಲಕತ್ತದ ಚೌರಂಗಿ ರಸ್ತೆಯಲ್ಲಿ ಒಂದು ಚೌಕದಲ್ಲಿ ಕಾರೊಂದು ನಿಂತಿತು. ಆಗ ಕಪಿಲೀಲಾವಿಲಾಸಿ ಅಥವಾ ಮಂಗನನ್ನು ಆಡಿಸುವವನೊಬ್ಬನು ಕುಂಭಕರ್ಣನು ಹೊತ್ತಂತೆ ಹೆಗಲಮೇಲೊಂದು ಮಂಗನನ್ನು ಹೊತ್ತು ಕಾರಿನಲ್ಲಿದ್ದ ಗೃಹಸ್ಥನ ಹತ್ತಿರ ಭಿಕ್ಷೆ ಬೇಡಿದನು. ‘ಹೋಗಯ್ಯಾ ಹೋಗು’. ಎಂದು ಗೃಹಸ್ಥ ಹೇಳಿದೊಡನೆ ಕಪಿಪಾಲನು ತನ್ನ ಸೊಂಟದಿಂದ ಕಪಿಯ ಸರಪಳಿಯನ್ನು ಬಿಡಿಸಿದನು. ಆಗ ಆ ಕಪೀಶ್ವರನು ಒಮ್ಮಿಂದೊಮ್ಮೆ ಕಾರಿನೊಳಗೆ ನುಗ್ಗಿ ಗೃಹಸ್ಥನ ಕುತ್ತಿಗೆ ಹಿಡಿದು ಅವುಕಿತು, ಅವನು ಬಿಡಿಸಿಕೊಳ್ಳಲು ಹೆಣಗಿ ಜಯಶೀಲನಾದ. ಅಕ್ಷಣ ಅವನು ಅಲ್ಲಿಂದ ಕಾರನ್ನು ಮುಂದಕ್ಕೆ ನಡೆಸಿದ. ಸ್ವಲ್ಪ ದೂರ ಹೋದ ಮೇಲೆ ಅವನ ಕಿಸೆಯಲ್ಲಿಯ ಫೌಂಟನ್ ಪೆನ್ ಮಾಯವಾದುದನ್ನು ಕಂಡನು. ತಿರುಗಿ ಆ ಸ್ಥಳಕ್ಕೆ ಬಂದು ನೋಡಿದರೆ ಅಲ್ಲಿ ಕಪಿಯೂ ಇರಲಿಲ್ಲ, ಕಪಿಧ್ವಜನೂ ಇರಲಿಲ್ಲ!

ನಿರಾಭರಣ ಸುಂದರಿಯರು

ಇಂಗ್ಲೆಂಡಿನಲ್ಲಿ ಅಮೇರಿಕದಲ್ಲಿದ್ದಂತೆ ನಿರ್ವಾಣರ ವಸತಿ ಸ್ಥಳಗಳಿವೆ. ಶ್ರೀಮಂತ ನರನಾರಿಯರು ಸ್ವಾಭಾವಿಕ ಜೀವನವನ್ನು ಪ್ರಾಕೃತರಂತೆ ನಡೆಸುವುದು ವೈಜ್ಞಾನಿಕವೆಂದು ಹೇಳಿ ತಮ್ಮವೇ ಆದ ಕೋಟೆಗಳನ್ನು ಜನ ದಟ್ಟಣೆಯಿಂದ ದೂರವಿರುವ ಪ್ರದೇಶಗಳಲ್ಲಿ ಕಟ್ಟಿಕೊಂಡು ಅವುಗಳಲ್ಲಿ ವಾಸವಾಗಿರುತ್ತಿದ್ದರು. ಹೊಟ್ಟೆ ತುಂಬಿದವರು ಏನು ಮಾಡಿದರೂ ಚೆಂದವಾಗಿತ್ತು, ನಾಗರಿಕವೆನಿಸಿತ್ತು. ಆದರೀಗ ಅಲ್ಲಿಯ ಹೆಂಗಸರಿಗೆ ಹಾಗಿರುವುದು ಸಹ್ಯವಾಗುವದಿಲ್ಲವಂತೆ.

ಹೊಸ ಹೊಸ ಫ್ಯಾಶನ್ನುಗಳ ಚಿತ್ರಗಳನ್ನು ಕಂಡು ಮರುಳಾಗಿ ಅವರೀಗ ನಿರಾಭರಣ ಸುಂದರಿಯವರಾಗಿ ತಿರುಗಲು ಹೆದರುತ್ತಿರುವುದಾಗಿ ಬ್ರಿಟಿಶ್ ಅಧಿಕಾರಿ ಇತ್ತೀಚೆಗೆ ಉದ್ಗರಿಸಿದ ಚಳಿಯ ಕಾಟಕ್ಕಿಂತ ಸೌಂದರ್ಯ ಸ್ಪರ್ಧೆಯಲ್ಲಿ ತಾವು ಹಿಂದೆ ಬಿದ್ದೇವೆಂಬ ಅಂಜಿಕೆಯೇ ನಗ್ನರಿಗಿಂತ ನಗ್ನೆಯರ ಸಂಖ್ಯೆ ಈಗ ಕಡಿಮೆಯಾಗಲು ಕಾರಣವಂತೆ! ಇಂಥ ಮಂಗಳನ್ನು ಕಂಡೇ ನೀಲಕಂಠ ದೀಕ್ಷಿತರೆಂದರು:

ಬಾಲ ಬಹಳ ಡೊಂಕಾದ ನಾಯಿ ಸೌಂ-
ದರ್ಯ ಮೂರ್ತಿಯಂತೆ,
ಹೊಟ್ಟೆ ದಪ್ಪವಾಗಿರುವ ಹಂದಿ ರತಿ-
ಗಿಂತ ರೂಪವಂತೆ;
ಹಲ್ಲು ಬಿಡುವ ಕಪಿ ರಂಭೆ, ಕರ್ಕಶ
ಸ್ವರದ ಕತ್ತೆ ಮತ್ತೆ
ಚೆಲುವೆ; ಮನುಜರಲ್ಲೆದ್ದು ನಿಂದ ವ
ಕ್ಷೋಜವಂತೆ ಕಾಂತೆ!

ರೂಪರಂಗ

ದುಸರೀ ಶಾದಿ

‘ದುಸರೀ ಶಾದಿ’ ಅಥವಾ ಎರಡನೆಯ ಮದುವೆ ಎಂಬುದು ಕ್ರಿಶನ್ ಮೂವಿಟೋನಿನ ನಿರ್ಮಿತಿ. ಇದರಲ್ಲಿ ಗೋಪೇ, ಡೇವಿಡ್, ಪ್ರಮೀಳೆ, ಮಮತಾಜ ಶಾಂತಿ ಮುಂತಾದ ಚಂದ್ರತಾರೆಯರು ಪಾತ್ರವಹಿಸಿದ್ದಾರೆ. ಕಥೆ ಬಹಳ ಸರಳ. ಒಬ್ಬ ಸೇಠಜಿ ಮೊದಲನೆಯ ಹೆಂಡತಿಯಲ್ಲಿ ಮಕ್ಕಳಾಗದಿರಲು ‘ಚಪಲೆ ಚಂಚಲೆ ಜಾಟುವತಿ ಚಂಡಿ ಛಲವಾದಿ ಕುಪಿಲೆ ಕುತ್ಸಿತೆ ಕುಹಕೆ ಕುಜೆ ಕುಡ್ಡೆ ಕುಲಗೇಡಿ’ ಎಂಬ ವರ್ಣನೆಗೆ ತಕ್ಕ ಎರಡನೆಯವಳೊಬ್ಬಳನ್ನು ಮನಸ್ಸಿಲ್ಲದ ಮನಸ್ಸಿನಿಂದ ಮದುವೆಯಾಗುತ್ತಾನೆ. ಆದರೆ ಮದುವೆಯಾದ ನಂತರ ಮೊದಲ ಹೆಂಡತಿ ಗರ್ಭಿಣಿಯೆಂದು ತಿಳಿಯುತ್ತದೆ. ಆ ಗರ್ಭವನ್ನು ಸಂಹರಿಸಲು ದುಷ್ಟ ವೈದ್ಯನೊಬ್ಬನಿಗೆ ದುಡ್ಡು ತಿನ್ನಿಸಿ ವಿಷವನ್ನು ಗರ್ಭಿಣಿಗೆ ಕೊಡಲು ಯತ್ನಿಸುವಳು ಕಿರಿಹೆಂಡತಿ. ಆದರೆ ದೈವಯೋಗದಿಂದ ಆ ಸೀಸೆ ಒಡೆದು ಹೋದುದರಿಂದ ಗರ್ಭಿಣಿ ಬೇರೆ ಒಳ್ಳೆಯ ಔಷಧವನ್ನು ತರಿಸಿ ಸೇವಿಸಿ ಗಂಡು ಮಗುವನ್ನು ಯುಕ್ತಕಾಲದಲ್ಲಿ ಹಡೆದಳು. ಮಗುವಿಗೆ ಕಾಹಿಲೆಯೆಂದು ಕಿರಿಹೆಂಡತಿ ಪ್ರಮೀಳೆ ಅದನ್ನು ತೆಗೆದು ನೀಚರ ಕೈಯಲ್ಲಿ ನದಿಗೆ ಎಸೆಯಲು ಕೊಟ್ಟು, ಅದು ಆಸ್ಪತ್ರೆಯಲ್ಲಿ ಸತ್ತಿತೆಂದು ಸುಳ್ಳು ಪ್ರಶಸ್ತಿ ಪತ್ರವನ್ನು ಗಂಡನಿಗೆ ತೋರಿಸಿದಳು. ಆ ನೀಚ ಅದನ್ನು ನೀರಿಗೆ ಎಸೆಯೆಂದು ಭಂಗಿಯೊಬ್ಬನಿಗೆ ಕೊಡಲು, ಅವನದನ್ನು ಮನೆಗೊಯ್ದು ಮಕ್ಕಳಿಲ್ಲದುದರಿಂದ ಸಾಕೆಂದು ಹೆಂಡತಿಗೆ ಕೊಟ್ಟ. ಮಗು ಬೆಳೆದು ೧೦ ವರ್ಷ ವಯಸ್ಸಿಗೆ ಬಂದ. ಅವನನ್ನು ಸೇಠಾನಿ ಮಮತೆಯಿಂದ ನೋಡುವುದು ಅವಳ ಸವತಿಗೆ ಸರಿದೋರದೆ ಅವಳು ಚಾಡಿ ಹೇಳಿ ಗಂಡನಿಂದ ಹೊಲೆಯರೊಡನೆ ಸಂಪರ್ಕ ಮಾಡಿದ್ದಕ್ಕಾಗಿ ಅವಳಿಗೂ ಹುಡುಗನಿಗೂ ಅವನ ಸಾಕುತಾಯಿಗೂ ಹೊಡೆಸಿದಳು. ಯಾವ ಪ್ರಯತ್ನ ಮಾಡಿದರೂ ಸೇಠಾನಿ ಬಾಲಕನನ್ನು ಪ್ರೀತಿಸುವುದನ್ನು ತಡೆಯಲಾಗದೆ ಪ್ರಮೀಳೆ ಸ್ವತಃ ವಿಷದ ಮಿಠಾಯಿ ತಿನ್ನಿಸಲು ಹೋದಳು. ಅರ್ಧದಲ್ಲೇ ಸಿಕ್ಕಿಬಿದ್ದಳು. ಅಷ್ಟರೊಳಗೇ ಅವಳಿಗೂ ವೈದ್ಯನಿಗೂ ತಕರಾರು ಸಂಭವಿಸಿದ್ದರಿಂದ ಅವನು ಅವಳ ಗಂಡನಿಗೆ ಸತ್ಯವನ್ನು ತಿಳಿಸುವನು. ಸೇಠಾನಿಯು ಬಾಲಕನ ಕೊರಳ ಪದಕದ ಮೂಲಕ ಅವನು ತನ್ನ ಸ್ವಂತ ಮಗನೆಂಬುದನ್ನರಿಯುವಳು. ಸೇಠಜಿ ಕೊನೆಯಲ್ಲಿ ಕಿರಿ ಹೆಂಡತಿಯ ಕೆನ್ನೆಗೆ ಏಟು ಬಿಗಿದು ಮನೆಬಿಟ್ಟು ಓಡಿಸಿ ಹಿರಿ ಹೆಂಡತಿ ಮತ್ತು ಮಗನೊಡನೆ ರಾಜಿ ಮಾಡಿಕೊಂಡು ಮಗನ ಸಾಕು ತಾಯಿ ತಂದೆಯರನ್ನು ಲಕ್ಷ್ಮೀಪುತ್ರರನ್ನಾಗಿ ಮಾಡಿ ಸುಖದಿಂದ ಇರತೊಡಗಿದ.

ಒಬ್ಬಳಿದ್ದಾಗ ಇನ್ನೊಬ್ಬಳನ್ನು ಒಬ್ಬನು ಮದುವೆಯಾಗಬಾರದೆಂಬ ನೀತಿಯನ್ನು ಹೇಳಹೊರಟ ಚಿತ್ರವಿದು. ಕಿರಿಹೆಂಡತಿಯು ವಿದ್ಯಾವತೀ ಮತ್ತು ಆಧುನಿಕತೆ ಅಭ್ಯಾಸಿಕ ಮತ್ತು ಹಿರಿ ಹೆಂಡತಿ ಹೃದಯವುಳ್ಳ, ಸದ್ವಿವೇಕವುಳ್ಳ ಆದರ್ಶ ಗೃಹಿಣಿ; ಜಾತಿಭೇದವನ್ನು ಮೀರಿನಿಂತ ಪುತ್ರವತ್ಸಲೆ. ಕಥಾಸಂವಿಧಾನದಲ್ಲಿ ಹಲವಾರು ಅಸ್ವಾಭಾವಿಕ ಮತ್ತು ಅಸಂಗತವೆನಿಸುವ ಅನವಶ್ಯಕ ವಿಲಂಬ ದೃಶ್ಯಗಳೂ ಸಂಗತಿಗಳೂ ಇರುವುದು ಒಂದು ಕೊರತೆ. ಛಾಯಾಗ್ರಹಣ ತಕ್ಕಮಟ್ಟಿಗೆ ಚೆನ್ನಾಗಿವೆ, ಸೇಠಜಿ, ಮತ್ತು ಅವನ ಹೆಂಡತಿಯರ ಪಾತ್ರಗಳು ಯಥಾರೀತಿಯಿಂದ ನಿರೂಪಿಸಲ್ಪಟ್ಟಿರುವವಾದರೂ ಅವುಗಳಲ್ಲಿ ನಾವೀನ್ಯ, ವೈಶಿಷ್ಟ್ಯ ಏನೂ ಇಲ್ಲ. ಈ ಮಕ್ಕಳಿಗೆ ಹೇಳಬಹುದಾದ ನೀತಿಕಥೆ ಸಾಮಾಜಿಕರ ನೀತಿಬುದ್ಧಿಗೆ ಪೋಷಕವಿದೆಯೆಂಬ ಕಾರಣದಿಂದ ಹುಬ್ಬಳ್ಳಿಯ ರೂಪಂ ರಂಗದಲ್ಲಿ ಇದನ್ನು ಪ್ರದರ್ಶಿಸಲಾಗುತ್ತಿದೆ. ಸಚ್ಚೀತಸ್ಸಿನ ರಸಿಕರು ಈ ತೃಪ್ತಿಯನ್ನು ಪಡೆಯಬಹುದಾದರೆ ನೃತ್ಯಗೀತಪ್ರಿಯರು ಮಾತ್ರ ಸ್ವಲ್ಪ ಅಸಮಾಧಾನ ಪಡಬಹುದು. ಹಾಗೆಂದು ಪ್ರೇಕ್ಷಕರ ಸಂಖ್ಯೆಗೇನೂ ಕೊರತೆಯಿಲ್ಲ. ಆದರಿಂದ ಚಿತ್ರ ದರ್ಶನೀಯವಿದೆ ಎನ್ನಲು ಹಿಂದೆ ಮುಂದೆ ನೋಡುವ ಕಾರಣವಿಲ್ಲ- ಭಂಗಿ ದಂಪತಿಗಳ ವಿದೂಷಕತ್ವ ಪಾಮರರಿಗೆ ನಿತ್ಯನೂತನವೆನಿಸುವುದು ಈ ಚಿತ್ರದ ವಿಶಿಷ್ಟ ವೈಭವ ಎಂಬ ಮಾತನ್ನು ಬರೆಯದಿರಲಾಗದು!

— ನಟರಾಜ

ಊಂಚ್ ನೀಚ್

ಉತ್ತಮ ಜಾತಿ, ಅಧಮಜಾತಿ ಎಂಬಭೇದ ಬುದ್ಧಿಯನ್ನು ನಿರಸನಗೊಳಿಸಲು ಮಹಾತ್ಮರು ನಡೆಸಿದ ಪ್ರಯತ್ನದಿಂದ ಸ್ಫೂರ್ತಿಪಡೆದ “ಊಂಚ್ ನೀಚ್” ಎಂಬ ಚಿತ್ರವನ್ನು ಕಲಕತ್ತದ ನ್ಯೂಥಿಯೇಟರ್ಸಿನವರು ನಿರ್ಮಿಸಿದ್ದಾರೆ. ಅದೀಗ ಹುಬ್ಬಳ್ಳಿಯ ಸುದರ್ಶನ ಟಾಕೀಸಿನಲ್ಲಿ ನಡೆಯಿತು.

ದೇವೀಚರಣ ಅಸಾಧಾರಣವಾದ ಔದಾರ್ಯವುಳ್ಳ ಬಂಗಾಲೀ ಜಮೀನುದಾರ. ಅವನು ಅಸ್ಪೃಶ್ಯರ ಅನಾಥ ಶಿಶುವನ್ನು ತನ್ನ ಮಗಳಾದ ಮಾಧುರಿಯೊಂದಿಗೆ ಸಮಾನ ಮಮತೆಯಿಂದ ಸಾಕತೊಡಗಿದ. ಅದು ಊರಿನ ಪುರೋಹಿತನಿಗೆ ಸರಿಬೀಳಲಿಲ್ಲ. ಅವನ ಬುದ್ಧಿವಾದಕ್ಕೆ ಮನ್ನಣೆಕೊಡದೆ ಜಮೀನುದಾರ ಹರಿಜನರ ದೇವಾಲಯ ಪ್ರವೇಶಕ್ಕೆ ನೆರವಾಗ ಹೋಗಿ ಪೆಟ್ಟುತಿಂದು ಮೃತನಾದ.

ಜಮೀನುದಾರನ ಮಗಳು ಮಾಧುರಿ, ಪುರೋಹಿತನ ಮಗ ರಂಜನ ಮತ್ತು ಅಸ್ಪೃಶ್ಯ ಬಾಲಿಕೆ ಮಾಲತಿ ಈ ಮೂವರೂ ಅಣ್ಣತಂಗಿಯರಂತೆ ಬೆಳೆದು ಪ್ರೌಢರಾದರು. ರಂಜನನ್ನು ಮದುವೆಯಾಗುವ ಇಚ್ಛೆ ಮಾಧುರಿ ಮಾಲತಿಯರಿಬ್ಬರಿಗೂ ಉಂಟಾದುದು ಎಲ್ಲರಿಗೂ ತಿಳಿಯಿತು. ರಂಜನ ಮಾಧುರಿಯ ಪ್ರೇಮವನ್ನು ಸ್ವೀಕರಿಸಿದ್ದರಿಂದ ಮಾಲತಿಯದನ್ನು ಸ್ವೀಕರಿಸಲಾರದಾದ. ಅವಳನ್ನು ಕೇವಲ ಗೆಳತಿಯಂತೆ ನೋಡಿದ. ಆದರೆ ಅವಳು ಬೆನ್ನುಹತ್ತಿ ನಿಂತಾಗ ಅವಳಿಂದ ತಪ್ಪಿಸಿಕೊಳ್ಳಲು ಅವಳ ಜಾತಿಯನ್ನು ಅವಳಿಗೆ ತಿಳಿಸಿ ಆ ಮೂಲಕ ವಿವಾಹಕ್ಕೆ ವಿಘ್ನವನ್ನು ಸೂಚಿಸಿದನು, ಅದರಿಂದ ಆ ಹೂನಗೆಯ ಹುಡುಗಿಯ ಮುಖ ಅಮಾವಾಸ್ಯೆಯ ಚಂದ್ರನಂತಾಗಿ ಅವಳು ಆತ್ಮಹತ್ಯೆ ಮಾಡಿಕೊಂಡಳು.

ಕಥೆ ಪ್ರಾರಂಭವಾದುದು ಅಸ್ಪೃಶ್ಯೋದ್ಧಾರ ಪ್ರಯತ್ನದಿಂದ, ಮುಕ್ತಾಯವಾದುದು ಆ ಪ್ರಯತ್ನ ಅಸಫಲವಾದುದನ್ನು ತೋರಿಸುವುದರಲ್ಲಿ: ಕೇವಲ ಕಾಯದೆಗಳಿಂದ, ಇಲ್ಲವೆ ರಾಜಕೀಯ ಪ್ರಚಾರಗಳಿಂದ ಸಾಮಾಜಿಕರ ಆಚಾರ ವಿಚಾರಗಳು ಮಾರ್ಪಡುವಂತೆ ಮಾಡುವುದು ಅಶಕ್ಯ; ಅದಕ್ಕೆ ಬೃಹದಾಕಾರದ ಸತ್ಕೋದ್ಯಮದ, ಪ್ರಾಮಾಣಿಕ ಗುರುಮುಖದ ವಿದ್ಯಾಭ್ಯಾಸ ಅವಶ್ಯಕ ಎಂಬುದು ಇದರಿಂದ ಎಲ್ಲರೂ ಕಲಿತುಕೊಳ್ಳಬಹುದಾಗಿದೆ.

ಮಾಲತಿಯ ಪಾತ್ರವನ್ನು ಅತ್ಯಂತ ಸ್ವಾಭಾವಿಕವೆಂಬಂತೆ ನಟಿಸಲಾಗಿದೆ. ಉಳಿದ ನಟರ ಅಭಿನಯವಾದರೂ ಹಾಗೇ. ಗೃಹಯೋಗ್ಯ ಮತ್ತು ಗೃಹಸಹಜ ಎನಿಸುವ ಇಲ್ಲಿಯ ಪಾತ್ರಗಳ ಆರ್ಜವ, ಪ್ರೇಮ ಆದರ, ಔದಾರ್ಯ, ಸರಳತೆಗಳನ್ನು ಬಿಂಬಿಸುವ ಮಾತುಕತೆ ನಡೆನುಡಿಗಳು ಭಾರತೀಯ ಸಂಸ್ಕೃತಿಯ ಸರಳ ಸೌಂದರ್ಯದ ದ್ಯೋತಕವೆನಿಸುತ್ತವೆ. ಇಷ್ಟು ನಾಗರಿಕವಾಗಿ, ಕಲಾಮರ್ಯಾದೆಯಿಂದ ಅಭಿನಯಿಸುವ ಉತ್ತಮನೀತಿ ಇಂದಿನ ಅನೇಕ ಚಿತ್ರಗಳಲ್ಲಿ ಕಣ್ಣಿಗೆ ಎಣ್ಣೆ ಹಾಕಿಕೊಂಡು ಹುಡುಕಿದರೂ ಕಾಣದು. ಛಾಯಾಗ್ರಹಣದಲ್ಲೂ ಬುದ್ಧಿವಂತಿಕೆಯಿದೆ, ದೋಷಗಳು ಅಲ್ಪ. ಇಂಥ ಚಿತ್ರಗಳಿಗೆ ಸ್ಥಳೀಯ ಪ್ರೇಕ್ಷಕರ ಪ್ರೋತ್ಸಾಹ ಸಾಕಷ್ಟು ಸಿಗದಿರುವುದು ಅವರ ಸಂಸ್ಕಾರಕ್ಕೆ ಕನ್ನಡಿ ಹಿಡಿದಂತಿದೆ!

— ವಾಕ್ಚಿತ್ರ ಚಂದ್ರಮ



(ದುಸರೀ ಶಾದಿ)
ಭಂಗಿಯ ಮನೆಯಲ್ಲಿ ಬೆಳೆದ ಸೇಠಾನಿಯ ಮುದ್ದುಮಗ.

ಧಾರವಾಡ

ಹುಬ್ಬಳ್ಳಿಯಲ್ಲಿ ೨೨ ನೇ ತಾರೀಖು ಮಧ್ಯಾಹ್ನ ೧೧ ಗಂಟೆಗೆ ಸ್ಥಾನಿಕ ಸ್ವರಾಜ್ಯ ಮಂತ್ರಿ ಶ್ರೀ ವರ್ತಕರಿಂದ ನೀರಾ ಕೇಂದ್ರವು ಪ್ರಾರಂಭಿಸಲಾಯಿತು. ನಗರದಲ್ಲಿ ಇನ್ನೂ ಮೂರು ಕಡೆ ಇಂಥ ಕೇಂದ್ರಗಳು ತೆರೆಯಲ್ಪಡಲಿವೆ. ಎರಡಾಣೆಗೆ ಒಂದು ಪಾವು ನೀರಾ ಮುಂಜಾನೆ ೧೦ ರ ವರೆಗೆ ದಿನವೂ ಅಲ್ಲಿ ಕೊಡಲಾಗುವದು. ಹೆಣ್ಣುಮಕ್ಕಳಿಗಾಗಿ ಪ್ರತ್ಯೇಕ ವ್ಯವಸ್ಥೆ ಇದೆ.

೧೯೪೬ ರಲ್ಲಿ ಹಾವೇರಿಯಿಂದ ಮುಲ್ಲಾಪುರಕ್ಕೆ ಹೋಗುತ್ತಿದ್ದ ಗೂಡ್ಸ ಗಾಡಿಯಿಂದ ಹೆಬಸೂರಿನ ರಾಜೇಸಾಬ, ಮಲ್ಲಪ್ಪಾ ಹಾಗು ಇನಾಮದ ನದಿ ಈ ಪಾಯಿಂಟ್ಸಮನ್‌ರು ಒಳ್ಳೆ ಚಾಲಾಕತನದಿಂದ ೫ ಚೀಲ ಅಕ್ಕಿಯನ್ನು ಕಳವು ಮಾಡಿದ್ದಕ್ಕೆ ೬ ತಿಂಗಳ ಶಿಕ್ಷೆ ಮತ್ತು ೨೦೦ ರೂ. ದಂಡ ಇಲ್ಲವೆ ಮತ್ತೂ ೨ ತಿಂಗಳ ಶಿಕ್ಷೆ ಜಿಲ್ಲಾ ನ್ಯಾಯಾಧೀಶರಲ್ಲಿ ಸ್ಥಿರವಾಯಿತು.

ಹೊಳೆ ಆಲೂರ ಗ್ರಾಮ ಪಂಚಾಯತಿಯ ಸರಪಂಚ ಶ್ರೀ ಎಂ. ಕೆ. ಹೊಸಮನಿಯವರು ಆಡಳಿತೆಯನ್ನು ಸರಿಯಾಗಿ ನಡೆಸದ್ದರಿಂದ ಅವರ ಸರಪಂಚ ಹುದ್ದೆಯನ್ನೂ ಪಂಚಾಯತಿಯ ಸದಸ್ಯತ್ವವನ್ನೂ ರದ್ದುಗೊಳಿಸಲಾಗಿದೆ. ಅವರು ಬಳಸಿದ ೧೧೯೫ ರೂಪಾಯಿ ೮ ಆಣೆ ವಸೂಲ ಮಾಡಲು ಹಾಗು ಅವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಲು ಜಿಲ್ಲಾ ಬೋರ್ಡಿನವರು ಕಲೆಕ್ಟರರಲ್ಲಿ ಬಿನ್ನವಿಸಿಕೊಂಡಿರುವರು.

ಶ್ರೀ ವಿರುಪಾಕ್ಷಪ್ಪಾ ನಾಗಪ್ಪಾ ಬಡಿಗಣ್ಣವರ ಇವರು ನಿಧನ ಹೊಂದಿದ್ದರಿಂದ ಶ್ರೀ ಕಾಶಪ್ಪ ಚನಬಸಪ್ಪ ಬಡಿಗಣ್ಣವರ ಇವರು ಗದಗು-ಶಹಾಪುರಪೇಟೆಯ ಶ್ರೀ ಶಂಕರಲಿಂಗ ದೇವಸ್ಥಾನದ ಪಂಚರಾಗಿ ಆರಿಸಲ್ಪಟ್ಟರೆಂದು ತಿಳಿಯುತ್ತದೆ.

ಪ್ರೊ. ಆರ್. ವಿ. ಜಾಗಿರದಾರರು ತಮ್ಮ ಹೆಸರನ್ನು ಆದ್ಯ ರಂಗಾಚಾರ್ಯರೆಂದು ಬದಲಿಸಿ ಅದರಂತೆ ಮುಂಬಯಿ ಸರಕಾರದ ಗ್ಯಾಜೆಟನಲ್ಲಿ ಪ್ರಸಿದ್ಧಿಸಿರುವರು. ಇನ್ನು ಮುಂದೆ ಸ್ನೇಹಿತರೆಲ್ಲ ಅದೇ ಹೆಸರಿನಿಂದ ತಮ್ಮ ಕೂಡ ಪತ್ರವ್ಯವಹಾರ ಮಾಡಬೇಕೆಂದು ಅವರು ಬಿನ್ನವಿಸುತ್ತಾರೆ.

ಹುಬ್ಬಳ್ಳಿಯಲ್ಲಿ ಕಿಲ್ಲೆಯ ಉಮಾ ರಾಮೇಶ್ವರ ದೇವಾಲಯದಲ್ಲಿ ಚತುರ್ವೇದ ಪಾರಾಯಣ ಒಂದು ವಾರ ನಡೆದು ಸೋಮವಾರ ತಾ ೨೨ ನೇ ದಿನ ವೈದ್ಯಗುರು ಹಲಸೀಕರರ ಅಧ್ಯಕ್ಷತೆಯಲ್ಲಿ ಅದರ ಸಮಾಪ್ತಿ ಸಮಾರಂಭ ಜರುಗಿತು. ಆ ಕಾಲಕ್ಕೆ ಶ್ರೀ ರಾಮಭಟ್ಟ ಜೋಶಿ, ನಾಯಕ ವೆಂಕಟರಾಯರು, ರಾ. ವೆಂಕರಗುಂದಿ ಮತ್ತು ಅಸ್ತೆ ಭಟ್ಟರ ಭಾಷಣಗಳಾದವು. ವೇದ ವಿದ್ಯೆಗೆ ಪ್ರೋತ್ಸಾಹ ದೊರೆಯಬೇಕೆಂದು ಅವರೆಲ್ಲ ಹೇಳಿದರು.

ಬ್ಯಾಡಗಿ ನಗರ ಸಭೆಯವರು ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ೧೦೦೧ ರೂಪಾಯಿ ಕೊಡಬೇಕೆಂದು ನಿರ್ಣಯಿಸಿದ್ದಾರೆ.

ಬ್ಯಾಡಗಿಯಿಂದ ದಾವಣಗೇರಿಗೆ ಚಿಮಣಿ ಎಣ್ಣೆಯ ೧೦ ಡಬ್ಬಿಗಳನ್ನು ಉಗಿಬಂಡಿಯಲ್ಲಿ ಕಳ್ಳತನದಿಂದ ಒಯ್ಯುತ್ತಿದ್ದುದನ್ನು ಪತ್ತೆ ಹಚ್ಚಿ ಅವನ್ನು ಜಪ್ತ ಮಾಡಿದ್ದಾರೆ. ಬೆಣ್ಣೆ ಡಬ್ಬಿಗಳೆಂದು ತಿಳಿಯುವಂತೆ ಆ ಡಬ್ಬಿಗಳ ಮೇಲೆ ಬೆಣ್ಣೆ ಅರಿವೆಯನ್ನು ಸುತ್ತಿದ್ದು ಪಾರ್ಸಲ್ ಮಾಡಿಸದೆ ಅವನ್ನು ಒಯ್ಯಲಾಗುತ್ತಿದ್ದಿತಂತೆ. ಚಳಗೇರಿ ಸ್ಟೇಶನದಲ್ಲಿ ಇವನ್ನು ಶೋಧ ಮಾಡಿ ಹಿಡಿಯಲಾಯಿತು.

ವಿಜಾಪೂರ

ಇಳಕಲ್ಲ ನಗರ ಸಭೆಗೆ ಶ್ರೀ ಬಸನಗೌಡ ಶರನಗೌಡ ಪಾಟೀಲ ಇವರು ಅಧ್ಯಕ್ಷರಾಗಿಯೂ ಶ್ರೀ ಮೋತೀಲಾಲ ಶಿವದಾಸ ಅಗ್ರವಾಲಾ ಇವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಮುದ್ದೇಬಿಹಾಳದ ಪ್ರಮುಖ ವಕೀಲರೂ ವತನದಾರ ಕುಲಕರ್ಣಿಯರ ಸಂಘದ ಅಧ್ಯಕ್ಷರೂ ಆಗಿದ್ದ ಶ್ರೀ ಸ್ವಾಮಿರಾವ ಕುಲಕರ್ಣಿಯವರು ೧೭ ನೇ ತಾರೀಖು ಸಾಯಂಕಾಲ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಶ್ರೀ ಉರುವಕೊಂಡ ಮಹಾಸ್ವಾಮಿಗಳು ೨೦ ನೇ ತಾರೀಖು ಬೆಳಿಗ್ಗೆ ೧೧ ಗಂಟೆಗೆ ಮೈಸೂರು ಮಹಾರಾಜರನ್ನು ಅರಮನೆಯಲ್ಲಿ ಭೆಟ್ಟಿಯಾಗಿ ಒಂದು ಒಂದೂವರೆ ಗಂಟೆಗಳ ವರೆಗೆ ಮಾತುಕತೆ ನಡೆಸಿದರು. ಆಗ ಅವರು ಮಹಾರಾಜರಿಗೆ ಶ್ರೀ ದಿವಾಕರರ ಮತ್ತು ಇನ್ನಿತರರ ರಾಜಕೀಯ ಮತ್ತು ಅಧ್ಯಾತ್ಮಿಕ ಗ್ರಂಥಗಳನ್ನು ಸಮರ್ಪಿಸಿದರಂತೆ.

ಕರ್ನಾಟಕ

ಬೆಳಗಾಂವಿ

ಸಮಾಜವಾದಿ ಧುರೀಣರಾದ ಶ್ರೀ ಸಾನೇ ಗುರುಜಿಯವರು ಡಿಸೆಂಬರ ೨ಕ್ಕೆ ಬೆಳಗಾವಿಗೆ ಬರುವವರಿದ್ದು ಆಗ ಅವರಿಗೆ ನಾಗರಿಕರ ಪರವಾಗಿ ಸತ್ಕಾರಮಾಡಿ ೫೦೦ ರೂ ಹಮ್ಮಿಣಿ ಸಮರ್ಪಿಸಬೇಕೆಂದು ಗೊತ್ತಾಗಿದೆ.

ಬೆಳಗಾವಿ ಜಿಲ್ಲೆಯ ದಕ್ಷಿಣ ವಿಭಾಗದ ನೀರಾವರಿ ಯೋಜನೆ ಕಚೇರಿಯಲ್ಲಿಯ ಕಾರಕೂನನೊಬ್ಬನು ಪ್ರವಾಸ ಭತ್ತೆ ಸಂಬಂಧದ ೧೧ ಸಾವಿರ ರೂಪಾಯಿಗಳನ್ನು ಇಂಪೀರಿಯಲ್ ಬ್ಯಾಂಕಿನಿಂದ ತೆಗೆದುಕೊಂಡು ಫರಾರಿಯಾಗಿರುವನೆಂದು ತಿಳಿಯುತ್ತದೆ. ಪೋಲೀಸರಲ್ಲಿ ಈ ಬಗ್ಗೆ ವರದಿಯೂ ಬಂದಿದೆಯಂತೆ.

ಲಂಚ ನಿರ್ಮೂಲನ ಖಾತೆಯ ಡಿ ವಾಯ್ ಎಸ್. ಪಿ. ಶ್ರೀ ಗುಡಿಯವರು ಇನಸ್ಪೆಕ್ಟರ ವಿ. ಪಿ. ನಾಯಕ ಮತ್ತು ಸ್ಥಳೀಯ ಪೋಲೀಸರೊಂದಿಗೆ ಸಾಂಗಲಿಯ ಎಡಿಶನಲ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಶ್ರೀ ಈ ಗೋರೆಯವರನ್ನು ಲಂಚದ ಆರೋಪದ ಮೇಲೆ ಬಂಧಿಸಿದರು. ಬಿಂಗೋ ಲಾಯಸೆನ್ಸಕ್ಕಾಗಿ ೨೦೦೦ ರೂಪಾಯಿಗಳ ಇಂಪಿರಿಯಲ್ ಬ್ಯಾಂಕಿನ ಚೆಕ್ಕುಸಹಿತ ಶ್ರೀ ಗುಡಿಯವರು ಅವರನ್ನು ಹಿಡಿದರಂತೆ. ಶ್ರೀ ನಾಯಕರು ಲಾಯಸೆನ್ಸದಾರರ ಸಹಕಾರಿಯಂತೆ ಹೋಗಿದ್ದರು.

ಕಿತ್ತೂರ ಪೋಲೀಸ ಠಾಣೆಯ ತಿಪ್ಪಾಪೂರ ಗ್ರಾಮದಲ್ಲಿ ಪಿಸ್ತೂಲು ತಯಾರಿಸುವ ಉಪಕರಣಗಳು ಪೂರ್ಣ ತಯಾರಾದ ಒಂದು ಪಿಸ್ತೂಲು ಹಾಗು ಅರ್ಧ ತಯಾರಾದ ನಾಲ್ಕು ಪಿಸ್ತೂಲುಗಳು ದೊರೆತಿವೆ. ಆ ಊರಲ್ಲಿಯ ರುದ್ರಪ್ಪಾ ಮಲ್ಲಪ್ಪಾ ಕಂಬಾರ, ಬಸಯ್ಯಾ ಈರಯ್ಯಾ ಮತ್ತು ಜಮಾಲ ಸಾಹೇಬ ಇವರ ಮನೆಗಳನ್ನು ಝಡತಿ ಮಾಡಲಾಗಿ ಮೇಲೆ ಉಲ್ಲೇಖಿಸಿದ ಸಾಮಾನುಗಳು ದೊರೆತವು.

ಬಳ್ಳಾರಿ

ಹಡಗಲಿ ತಾಲೂಕು ಬೇರಿಗೇರಿಯಲ್ಲಿ ೧೪ ಕ್ಕೆ ನೆಹರೂ ಜಯಂತಿ ವಿಜೃಂಭಣೆಯಿಂದ ಸಾಂಗವಾಯಿತು. ನಗರ ಸಂಕೀರ್ತನವಾದನಂತರ ಶ್ರೀ ಆರ್ಕಾಚಾರಿ ಈಶಪ್ಪನವರಿಂದ ಧ್ವಜವಂದನವಾಯಿತು. ಅನಂತರ ಬಹಿರಂಗ ಸಭೆ ಜರುಗಿ ನೆಹರು ಇವರ [illegible] ದೀರ್ಘಾಯುಷ್ಯವನ್ನು ಕೋರಲಾಯಿತು. ಸಾಯಂಕಾಲ ನೀಲನಗೌಡ್ರ ಹಸ್ತದಿಂದ ಧ್ವಜ ಇಳಿಸಲ್ಪಟ್ಟು ಸಭೆ ಕೊನೆಗಂಡಿತು.

ಮಹಾದ್ವಾರ ಹಳ್ಳಕ್ಕೆ ಕಾಚಾಪುರಂ ಹಾಗು ಮಂಚಾಲಾರಸ್ತೆಯಲ್ಲಿ ಪೂಲು ಕಟ್ಟಿಸುವ ಕೆಲಸವನ್ನು ಈ ವರುಷ ಕೈಕೊಳ್ಳಲಾಗುವದೆಂದು ಬಳ್ಳಾರಿಯ ಡಿವಿಜನಲ್ ಎಂಜಿನಿಯರರು ಮಂತ್ರಾಲಯ ಯಾತ್ರಿಕರ ಸಂಘದ ಅಧ್ಯಕ್ಷರಿಗೆ ಪತ್ರ ಬರೆದು ತಿಳಿಸಿದ್ದಾರೆ,

ಉತ್ತರ ಕನ್ನಡ

ಬಂಕಾಪೂರದ ಶ್ರೀ ಶಿವಾನಂದ ತೀರ್ಥ ಸ್ವಾಮಿಗಳು ೨೦ ನೇ ತಾರೀಖು ರವಿವಾರ ಮಧ್ಯಾಹ್ನ ೨-೩೦ ಗಂಟೆಗೆ ಕಾರವಾರದ ಬಾಡ ಕ್ಷೇತ್ರದಲ್ಲಿ ಸಮಾಧಿಸ್ಥರಾದರು. ಅಂದು ರಾತ್ರಿ ೮ ಗಂಟೆಗೆ ಸಮಾಧಿಯು ಕೋಡಿಬಾಗ ಸೋಲಾಮಂಟಪದಲ್ಲಿ ವೈಭವದಿಂದ ಜರುಗಿತು.

ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಮಂತ್ರಿಗಳಾದ ಶ್ರೀ ವರ್ತಕರು ಕಳೆದ ವಾರ ಜಿಲ್ಲೆಯನ್ನು ಸಂಚರಿಸಿದರು. ಅಡವಿ ಗ್ರ್ಯಾಂಟನ್ನು ಹೆಚ್ಚಿಸುವ ಬಗ್ಗೆ ವಿಚಾರ ಮಾಡುವುದಾಗಿ ಮಂತ್ರಿಗಳು ಲೋಕಲ್ ಬೋರ್ಡಿನವರಿಗೆ ಆಶ್ವಾಸಿಸಿದರು. ಕಾರವಾರ ನಗರದ ಕೊಳಚೆ ತೆಗೆಯಲು ಸಹಾಯ ಮಾಡುವ ವಿಚಾರವನ್ನು ಮಾಡುವೆವೆಂದು ಮಂತ್ರಿವರ್ಯರು ಆಶ್ವಾಸಿಸಿದರಂತೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಚೆಂಡಿಯೇ ಬೈತಿ ೧೪-೧೧-೪೮ ಆಲಿಗದ್ದೆಯಲ್ಲಿ ನೆರೆದ ಪರಿಶಾಂತ ಸಮಾಜದ ಸಭೆಯಲ್ಲಿ ಭಾಷಾವಾರ ಪ್ರಾಂತ ರಚನೆಯನ್ನು ಆದಷ್ಟು ಬೇಗನೆ ಕೈಕೊಳ್ಳಬೇಕೆಂದೂ, ಮತ್ತು ಉತ್ತರ ಕನ್ನಡ ಜಿಲ್ಲೆಯ ಪೂರಾ ಭಾಗವನ್ನು ಕರ್ನಾಟಕದಲ್ಲಿಯೇ ಸೇರಿಸಬೇಕೆಂದೂ, ಶ್ರೀಯುತ ತಮ್ಮ ಕೃಷ್ಣಾ ಸರಿಕಾಂತ ಇವರ ಭಾಷಣವಾಯಿತು.

ದಕ್ಷಿಣ ಕನ್ನಡ

ಮಂಗಳೂರು ಪೌರ ಸಭಾ ಸಮಿತಿಯ ಸಭೆಯು ದಿನಾಂಕ ೧೫ ರಂದು ಜರಗಿದಾಗ ಪೌರ ಸಭೆಯು ಗಾಂಧೀ ಸ್ಮಾರಕ ನಿಧಿಗೆ ೨೫೦೦ ರೂಪಾಯಿಗಳನ್ನು ನೀಡಬೇಕಾಗಿ ನಿರ್ಣಯಿಸಿತು.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾ ಸಭೆಯು ದಿನಾಂಕ ೧೪ ಮತ್ತು ೧೫ ರಂದು ಜರಗಿ ಈ ವರೆಗೆ ಮಂಜೂರಾಗದೆ ಇದ್ದ ಪರಿಶೋಧಿತ ಲೆಕ್ಕಪತ್ರವು ಮಂಜೂರಾಯಿತು. ದಿನಾಂಕ ೧೫ ರಂದು ಮದ್ರಾಸಿನ ಕೈಗಾರಿಕೆ ಮಂತ್ರಿಗಳೊಂದಿಗೆ ಸತ್ಕಾರ ಕೂಟವು ಸಮಿತಿಯ ಹೊಸ ಕಚೇರಿಯಲ್ಲಿ ಜರಗಿತು.

ಮದ್ರಾಸು ಸರಕಾರದ ಕೈಗಾರಿಕೆ ಮತ್ತು ಮಜೂರ ಮಂತ್ರಿಗಳಾದ ಶ್ರೀ ಎಚ್. ಸೀತಾರಾಮ ರೆಡ್ಡಿಯವರು ದಿನಾಂಕ ೧೪ ರಂದು ಮಂಗಳೂರಿಗೆ ಬಂದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಎಂಡೋಮೆಂಟ್ ಅಧ್ಯಕ್ಷ ಶ್ರೀ ಚೆನ್ನಯ್ಯ ಪಿಳ್ಳೆಯವರು ಕಳೆದವಾರ ಉಡುಪಿಗೆ ಬಂದು ಅಷ್ಟಮಠ ಮತ್ತು ದೇವಾಲಯಗಳನ್ನು ಸಂದರ್ಶಿಸಿದರು. ಇವರ ಆಗಮನದ ಹಿಂದೆಯೇ ಶ್ರೀ ಕೃಷ್ಣಮಠಕ್ಕೆ ಎಂಡೋಮೆಂಟ್ ಆಕ್ಟಿನ ಪ್ರಕಾರ ಹೊಸ ಅಧಿಕಾರಿಗಳ ನೇಮಕದ ಆಜ್ಞೆಯೂ ಬಂದಿತ್ತು. ಸೆಕ್ಷನ್ ೬೨ ರಂತೆ ಶ್ರೀ ಕೃಷ್ಣಮಠಕ್ಕೊಂದು ಯೋಜನೆಯನ್ನೇಕೆ ಮಾಡಕೂಡದೆಂಬ ಬೋರ್ಡಿನ ಪ್ರಶ್ನೆಗೆ ಅದು ಸರ್ವ ಅನಗತ್ಯವೆಂದು ಮಠಾಧಿಪತಿಗಳ ಕಡೆಯಿಂದ ವಿರೋಧ ಹೋದರೂ ಆಶ್ಚರ್ಯವಾಗಿಲ್ಲ.

ದಿನಾಂಕ ೧೬ ರಂದು ಮದ್ರಾಸು ಸರಕಾರದ ಅಭಿವೃದ್ಧಿ ಮತ್ತು ಪಾನನಿರೋಧ ಮಂತ್ರಿಗಳಾದ ಡಾ. ಎಸ್ ಗುರುಪಾದಂ ಅವರು ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿ ಕೇಂದ್ರವಾದ "ಕುಂಬಳೆ ಫಿರ್ಕಾ"ಕ್ಕೆ ಸಂದರ್ಶನವಿತ್ತರು. ಜನರ ಕಷ್ಟನಷ್ಟಗಳನ್ನು ಕಂಡು ಇಲ್ಲಿನ ಕಾರ್ಯಕ್ರಮ ಮುಗಿಸಿಕೊಂಡು ಅದೇ ದಿನ ಮರಳಿ ಕಣ್ಣಾನೂರಿಗೆ ಹೋದರು.

ಮದ್ರಾಸ ಸರಕಾರದ ಹೊಸ ಶಿಕ್ಷಣ ಪದ್ಧತಿಯಲ್ಲಿನ ಪೌರ ಶಿಕ್ಷಣಕ್ಕೆ ಬೇಕಾದ ತರಬೇತಿಯನ್ನು ಕೊಡುವ ೬ ನೇ ಶಿಬಿರವು ದಿನಾಂಕ ೧೫ ರಂದು ಮಂಗಳೂರಲ್ಲಿ ತೆರೆಯಲ್ಪಟ್ಟಿದೆ. ಈ ಶಿಬಿರದಲ್ಲಿ ೮೦ ಮಂದಿ ಅಧ್ಯಾಪಕರೂ ೪೦ ಮಂದಿ ಅಧ್ಯಾಪಿಕೆಯರೂ ತರಬೇತಿ ಹೊಂದುತಿದ್ದಾರೆ. ಈ ಶಿಬಿರದ ಶಿಕ್ಷಕರಾಗಿ ಹಿಂದುಸ್ತಾನ ಸ್ಕೌಟು ಸಂಸ್ಥೆಯ ಕಮಿಶನರರಲ್ಲೊಬ್ಬರಾದ ಶ್ರೀ ಟಿ. ವಿ. ನೀಲಕಂಠ ಅವರು ಮದ್ರಾಸಿನಿಂದ ಬಂದು ಅದನ್ನು ನಡೆಸುತಿದ್ದಾರೆ.

ಉಡುಪಿ ತಾಲೂಕು ನಂಬರ ೫೨ ನೇ ಹೇರೂರು ಗ್ರಾಮದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ರಂಗಪೂಜೆ ಮತ್ತು ದೀಪೋತ್ಸವ ೧೬ ನೇ ತಾರೀಖು ವಿಜೃಂಭಣೆಯಿಂದ ಸಾಂಗವಾಯಿತು. ಅಲ್ಲಿಯ ರಾಮಮಂದಿರದಲ್ಲಿ ಕೀರ್ತನೆಯೂ ನಡೆಯಿತು. ಘಂಟೆ ೨ ರ ನಂತರ ಸಭೆ ಕೊನೆಗಂಡಿತು.

ಮುಖ್ಯ ಮಂತ್ರಿ ಶ್ರೀ. ಖೇರರು

ಧಾರವಾಡದಲ್ಲಿ ಡಿಸೆಂಬರ ೫ ಕ್ಕೆ

ಮುಂಬಯಿ ಪ್ರಾಂತದ ಮುಖ್ಯ ಮಂತ್ರಿ ಹಾಗು ಶಿಕ್ಷಣ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರು ಇದೇ ಡಿಸೆಂಬರ ೫ ನೇ ತಾ. ಮಧ್ಯಾಹ್ನ ಪುಣೆ ಮೇಲಿನಿಂದ ಧಾರವಾಡಕ್ಕೆ ಬರುವರು. ಊಟ ವಿಶ್ರಾಂತಿ ಮುಗಿದ ಬಳಿಕ ಮಧ್ಯಾಹ್ನ ೨ ರಿಂದ ೩॥ ವರೆಗೆ ಕೆ. ಈ. ಬೋರ್ಡ ಕಾಲೇಜ ಕಟ್ಟಡದ ಶಂಕುಸ್ಥಾಪನೆ ೩॥ ಯಿಂದ ೪॥ ಅಮರಗೋಳ ಕಸ್ತೂರಬಾ ಕೇಂದ್ರಕ್ಕೆ ಭೆಟ್ಟಿ ೪-೩೦ ರಿಂದ ೫ ಪದವೀಧರರ ಮೂಲ ಶಿಕ್ಷಣ ಕೇಂದ್ರಕ್ಕೆ ಭೆಟ್ಟಿ ೫ ರಿಂದ ೬ [illegible] ಮಹಾಬಳೇಶ್ವರವನ್ನು ಸಂದರ್ಶಿಸುವರು. ೬ ರಿಂದ ೬॥ ಒಕ್ಕಲತನ ಕಾಲೇಜಿನ ಸೋಶಲ್ ಗ್ಯಾದರಿಂಗ ೬.೪೦ ರಿಂದ ೮-೩೦ ಕನ್ನಡ ಸಂಶೋಧನ ಸಂಸ್ಥೆಗೆ ಭೆಟ್ಟಿ. ಅನಂತರ ಊಟ ವಿಶ್ರಾಂತಿ ಮತ್ತು ಅಧಿಕಾರಿಗಳ ಸಂದರ್ಶನ ಮುಗಿಸಿ ಮರುದಿನ ಮುಂಜಾನೆ ೬-೧೫ಕ್ಕೆ ಸವದತ್ತಿಗೆ ಹೋಗುವರು.

ಕನ್ನಡ ಸಂಸ್ಥಾನ

ಕೊಲ್ಹಾಪುರದ ಮಹಾರಾಜರು ಮುಂಬಯಿ ಪ್ರಾಂತದಲ್ಲಿ ತಮ್ಮ ಸಂಸ್ಥಾನವನ್ನು ಸೇರಿಸಲು ಒಪ್ಪಿದ್ದಾರೆಂದೂ ಈ ವಿಲೀನೀಕರಣ ಸಮಾರಂಭವು ಡಿಸೆಂಬರ ಮೊದಲ ವಾರದಲ್ಲಿಯೇ ನಡೆಯಬಹುದೆಂದೂ ತಿಳಿಯುತ್ತದೆ. ಮುಖ್ಯ ಮಂತ್ರಿ ಶ್ರೀ ಬಾಳಾಸಾಹೇಬ ಖೇರರಿಂದ ಈ ಸಮಾರಂಭ ನಡೆಯುವದೆಂದೂ ಇದಕ್ಕಾಗಿ ಶ್ರೀ ವಿ. ಪಿ. ಮೆನನ್‌ರು ಬರುವರೆಂದೂ ತಿಳಿಯುತ್ತದೆ. ಮಹಾರಾಜರ ಖಾಸಗಿ ವೆಚ್ಚವೆಂದು ೧೦ ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಲಿರುವರಂತೆ.

ಕೊಲ್ಹಾಪೂರ ಸಂಸ್ಥಾನ ಸಹಕಾರಿ ಸಂಘಗಳ ಹಿಂದಿನ ರಜಿಸ್ಟ್ರಾರರಾದ ಶ್ರೀ ಕೆ. ವಿ. ಭಿಜಾರೆಯವರನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಒಂದು ಆಜ್ಞೆ ಹೊರಡಿಸಿ ಗಡೀಪಾರು ಮಾಡಿರುವರು ಮತ್ತು ಶ್ರೀ. ಎಚ್. ವಿ. ಸಿಜಾಪುರನ್ನು ಸಾರ್ವಜನಿಕ ಸಭೆ ಕರೆದ ಬಗ್ಗೆ ಸೆರೆಹಿಡಿಯಲಾಗಿದೆ.

ಮೈಸೂರಿನ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ಜಿ. ಪರಮಶಿವಯ್ಯನವರನ್ನು ನಿವೃತ್ತಗೊಳಿಸಿ ೧೯೪೯ ನೇ ಜುಲೈ ೨ರ ವರೆಗೆ ಪೂರ್ಣವೇತನದೊಂದಿಗೆ ವಿಶೇಷ ರಜೆಯನ್ನು ದಯಪಾಲಿಸಿರುವರೆಂದು ತಿಳಿಯುತ್ತದೆ ಅವರ ಸ್ಥಳಕ್ಕೆ ಗೋಪಾಳರಾವ ಪ್ರಜಾರಕ್ಷಾ ಸಮಿತಿಯ ಮುಖ್ಯ ನ್ಯಾಯಾಧೀಶರಾಗಿದ್ದ ಮೇದಪ್ಪ ಇವರನ್ನು ಮುಖ್ಯ ನ್ಯಾಯಾಧೀಶರನ್ನಾಗಿ ನೇಮಿಸಿದೆ.

ಬೆಳಗಾವಿ ಜಿಲ್ಲೆಯ ಹೊಸೂರಲ್ಲಿ ಜಂಗಮನೊಬ್ಬನು ಬಂಗಾರ ಮಾಡುತ್ತೇನೆಂದು ಹೇಳಿ [illegible] ಫರಾರಿಯಾಗಿದ್ದನು. ಅವನನ್ನು ಕೊಲ್ಹಾಪೂರದ ಲಿಂಗಾಯತರ ಮಠವೊಂದರಲ್ಲಿ ಪೋಲೀಸರು ಬಂಧಿಸಿದ್ದಾರೆ. ಅವನ ಹತ್ತರ ಬಂಗಾರ ಮತ್ತು ರೋಖ ಕೂಡಿ ೨೦೦೦ ರೂ. ದೊರೆತಿವೆ. ಈ ಜಂಗಮನ ಹೆಸರು ಶಿವಮೂರ್ತಿ ಬಸಪ್ರಭು ಹಿರೇಮಠ ಎಂದಿದೆ.

ಕಳೆದ ವಾರದಲ್ಲಿ ಉತ್ತೂರ ಗ್ರಾಮದಲ್ಲಿ ದರೋಡೆ ನಡೆದು ಬೆಳ್ಳಿ ಬಂಗಾರ ದಾಗಿನೆ ಸಹಿತ ಲಕ್ಷ ರೂಪಾಯಿ ಬೆಲೆಯ ಮಾಲು ದರೋಡೆಯಾಗಿತ್ತಷ್ಟೇ. ಪೋಲೀಸರು ಈ ಸಂಬಂಧದಲ್ಲಿ ೧೧ ಜನರನ್ನು ಹಿಡಿದಿದ್ದು ಸುಮಾರು ೨೫ ಸಾವಿರ ರೂಪಾಯಿಗಳ ಪತ್ತೆ ಹಚ್ಚಿದ್ದಾರೆ. ಪ್ರಸಿದ್ಧ ದರೋಡೆಗಾರನಾದ [illegible] ಇವರಲ್ಲಿ ಸಿಕ್ಕಿದನಂತೆ.

ಹಿಂದುಸ್ತಾನ

ಘಟನಾ ಸಮಿತಿಯ ಚಟುವಟಿಕೆಗಳು

ತಾ. ೧೬ ರಿಂದ ಆರಂಭವಾದ ಘಟನೆಯ ಕರಡಿನ ಚರ್ಚೆಯ ಮುಂದುವರಿದ ಅಧಿವೇಶನದಲ್ಲಿ ತಾ ೧೮ ರಂದು [illegible] ಸ್ವೀಕೃತವಾಯಿತು. ಇದು ಪ್ರಾಂತ ಮತ್ತು ಸಂಸ್ಥಾನಗಳ [illegible] ವಿಷಯಕ್ಕೆ ಸಂಬಂಧಿಸಿದೆ. ಕೇಂದ್ರ ಶಾಸನ ಸಭೆಯ ಸದಸ್ಯರು [illegible] ಅಧ್ಯಕ್ಷರ [illegible] ಪ್ರಾಂತಗಳ ವಿಷಯದಲ್ಲಿ ಪ್ರಾಂತಿಕ ಶಾಸನ ಸಭೆಗಳ ಮತ್ತು ಸಂಸ್ಥಾನಗಳ ವಿಷಯದಲ್ಲಿ ಸಂಸ್ಥಾನಗಳ ಒಪ್ಪಿಗೆ ಪಡೆಯಬೇಕೆಂದು ವಿಧಿಸಲಾಗಿದೆ.

ತಾ. ೧೯ ರಂದು ರಾಷ್ಟ್ರಧೋರಣೆಯ ನಿರ್ದೇಶಕ ತತ್ವಗಳು ಎಂಬ ಘಟನೆಯ ಕಲಮಿನ ಬಗ್ಗೆ ಚರ್ಚೆ ನಡೆಯಿತು. ಅಧಿಕಾರಾರೂಢ ಸರಕಾರವು ಆರ್ಥಿಕ ಪ್ರಜಾಸತ್ತೆಯ ಸ್ಥಾಪನೆಗೆ ಬೇಕಾದ ಧೋರಣ ಅನುಸರಿಸಬೇಕೆಂಬುದನ್ನು ಈ ವಿಭಾಗದಲ್ಲಿ ಸ್ಪಷ್ಟಪಡಿಸಲಾಗಿದೆ. ಇದರಲ್ಲಿ ಒಟ್ಟು ೧೩ ಉಪಭಾಗಗಳಿದ್ದು ಮೊದಲಿನವು ಘಟನಾ ವಿಧಾನಕ್ಕೆ ಸಂಬಂಧಿಸಿದ್ದರಿಂದ ವಿಶೇಷ ಚರ್ಚೆಯಿಲ್ಲದೆ ಸ್ವೀಕೃತವಾದವು. ಇದರಂತೆ ಎರಡನೆಯ ಉಪಭಾಗವೂ ಅಂಗೀಕೃತವಾಯ್ತು ಮುಂದಿನ ಕೆಲ ಉಪಭಾಗಗಳ ಚರ್ಚೆ ನಡೆದು ಸಭೆಯು ಸೋಮವಾರದ ವರೆಗೆ ಮುಂದೆ ಹಾಕಲ್ಪಟ್ಟಿತು.

ಸೋಮವಾರ ತಾ. ೨೨ ರಂದು ರಾಷ್ಟ್ರಧೋರಣೆಯ ನಿರ್ದೇಶಕ ತತ್ವಗಳ ಬಗ್ಗೆ ಇರುವ ಕಲಮು ಸ್ವೀಕೃತವಾಯ್ತು. ನಾಳಿನ ನಮ್ಮ ರಾಜ್ಯಪದ್ಧತಿಯು ಗ್ರಾಮಪಂಚಾಯತಿಗಳ ಮೇಲೆ ಅವಲಂಬಿಸಿರಬೇಕೆಂದೂ ಈ ಗ್ರಾಮಪಂಚಾಯತಿಗಳು ಸ್ವಯಂಪೂರ್ಣ ಘಟಕಗಳಾಗಿ ಆಡಳಿತ ಸಾಗಿಸುವಂತೆ ಸರಕಾರ ನೋಡಿಕೊಳ್ಳತಕ್ಕದ್ದೆಂದೂ ಶ್ರೀ ಸಂತಾನಂ ಅವರು ರಾಷ್ಟ್ರಧೋರಣೆಯ ನಿರ್ದೇಶಕ ತತ್ವಗಳಲ್ಲಿ ಒಂದು ಹೊಸ ಕಲಮು ಸೇರಿಸಲು ಸೂಚಿಸಿದರು. ಈ ಸೂಚನೆಯು ಸರ್ವಾನುಮತದಿಂದ ಸ್ವೀಕೃತವಾಯ್ತು. ಡಾ. ಅಂಬೇಡಕರರು ಮಾತನಾಡುತ್ತ, ಸಭೆಯಲ್ಲಿ ಸದಸ್ಯರ ಅಭಿಪ್ರಾಯವು ಗ್ರಾಮಪಂಚಾಯತಿಗೆ ಅತ್ಯಂತ ಅನುಕೂಲವಾಗಿರುವದರಿಂದ ಈ ತತ್ವವನ್ನು ಘಟನೆಯಲ್ಲಿ ಸೇರಿಸಲು ತಮ್ಮ ಆಕ್ಷೇಪವಿಲ್ಲವೆಂದು ಹೇಳಿದರು.

ರಾಷ್ಟ್ರಧೋರಣೆಯ ನಿರ್ದೇಶಕ ತತ್ವಗಳ ಕಲಮಿನ ಅಭಿಪ್ರಾಯ ಕೆಳಗಿನಂತಿದೆ.

ಪ್ರಜೆಗಳಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಜೀವನ ನಿರ್ವಾಹ ಸಾಧನೆಗಳಿಗೆ ಸಮಾನ ಹಕ್ಕುಂಟು. ರಾಷ್ಟ್ರದ ಉತ್ಪತ್ತಿ ಸಾಧನ ಸಂಪತ್ತಿಯ ಒಡೆತನ, ನಿಯಂತ್ರಣ ಇವು ಇಡೀ ಜನಾಂಗದ ಹಿತಕ್ಕಾಗಿ ವಿತರಣವಾಗುವಂತೆ ರಾಷ್ಟ್ರವು ನೋಡಿಕೊಳ್ಳತಕ್ಕದ್ದು. ರಾಷ್ಟ್ರದ ಆರ್ಥಿಕ ವ್ಯವಸ್ಥೆಯು ಕೆಲವೊಂದು ಜನರ ಕೈಯಲ್ಲಿಯೇ ಸಿಕ್ಕು ಜನತೆಯ ಹಿತಕ್ಕೆ ವಿಘಾತಕವಾಗುವ ರೀತಿಯಲ್ಲಿ ಇರದಂತೆ ನೋಡಿಕೊಳ್ಳತಕ್ಕದ್ದು.

ಸ್ತ್ರೀ ಪುರುಷರ ಆರೋಗ್ಯಕ್ಕೆ ಭಂಗಬರುವಂತೆ ಅವರನ್ನು ದುಡಿಸಬಾರದು. ಎಳೆಮಕ್ಕಳನ್ನು ದುಡಿತಕ್ಕೆ ಹಚ್ಚಬಾರದು. [illegible] ಪಡೆಯುವಂತೆ ನೋಡಿಕೊಳ್ಳಬೇಕು. ಆರ್ಥಿಕ ದುಃಸ್ಥಿತಿಯ ಒತ್ತಡದಿಂದ ತಮ್ಮ ವಯಸ್ಸಿಗೂ ಶಕ್ತಿಗೂ ಮೀರಿ ಯಾವ ನಾಗರಿಕರೂ ದುಡಿಯುವಂತಹ ಪರಿಸ್ಥಿತಿಯನ್ನು ತಪ್ಪಿಸಬೇಕು. ಎಳೆಯ ಮಕ್ಕಳು ಸಂರಕ್ಷಣೆಯ ವ್ಯವಸ್ಥೆಯಿಲ್ಲದೆ ಅಲೆದಾಡುವಂತಹ ಪರಿಸ್ಥಿತಿ ಬಾರದಂತೆ ನೋಡಿಕೊಳ್ಳತಕ್ಕದ್ದು; ಹೀಗೆ ಮೊದಲಾಗಿ ಈ ಕಲಮಿನ ಸಾರಾಂಶ.

ತಾ. ೨೩ ರಂದು [illegible], ಹಿಂದುಸ್ತಾನದ ನಾಗರಿಕರೆಲ್ಲರಿಗೂ ಒಂದೇ ಬಗೆಯ ಕಾನೂನು ಇರತಕ್ಕದ್ದು ಎಂಬ ರಾಷ್ಟ್ರಧೋರಣೆಯ ನಿರ್ದೇಶಕ ತತ್ವಗಳ ಕಲಮು ಸ್ವೀಕೃತವಾಯಿತು.

"ವ್ಯಕ್ತಿಗಳ ಧರ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲದಂತೆ" ಎಂಬ ಶಬ್ದಗಳನ್ನು ಈ ಕಲಮಿನಲ್ಲಿ ಸೇರಿಸಬೇಕೆಂದೂ ಇಲ್ಲವಾದರೆ ಬಹುಸಂಖ್ಯಾತರಾದ ಹಿಂದುಗಳ ಕಾನೂನೇ ಮುಸಲ್ಮಾನರೇ ಮೊದಲಾದ ಅಲ್ಪಸಂಖ್ಯಾತರಿಗೂ ಅನ್ವಯಿಸುವಂತಾಗುವದೆಂದೂ ವಾದಿಸಿ ಮುಸಲ್ಮಾನ ಸದಸ್ಯರು ತಿದ್ದುಪಡಿ ತಂದರು. ಆದರೆ ಆ ತಿದ್ದುಪಡಿ ಬಿದ್ದು ಹೋಯಿತು.

ಮುಂಬಯಿ

ಸುರತದಲ್ಲಿ ೧೫೦೦ ಚಿಕ್ಕ ದೊಡ್ಡ ಜವಳಿ ಕಾರಖಾನೆಯಲ್ಲಿಯ ಸುಮಾರು ೧೧ ಸಾವಿರ ಕೆಲಸಗಾರರು ತಾ ೧೦ ರಿಂದ ಸಂಪು ಹೂಡಿದ್ದರಿಂದ ಪರಿಸ್ಥಿತಿಯು ಭೀಕರವಾಗಿದೆಯೆಂದು ತಿಳಿಯುತ್ತದೆ. ಜಗತ್ತಿನಲ್ಲಿ ಸುರತದ ಜರತಾರಿ ಉದ್ಯೋಗವು ಎರಡನೆಯ ಸ್ಥಾನಪಡೆದಿದೆ. ಫ್ರಾನ್ಸದ ಲಿಯೋನ್ಸದಲ್ಲಿಯ ಜರತಾರಿ ಉದ್ಯೋಗವು ಪ್ರಥಮ ಸ್ಥಾನದಲ್ಲಿದೆ.

ವೆಸ್ಟ ಇಂಡೀಜ ಕ್ರಿಕೆಟ ಸಂಘದವರ ಬಟ್ಟೆಗಳನ್ನು ಕಳವು ಮಾಡಿದವರಿಂದ ೩ ಉಣ್ಣೆಯ ಕೋಟು ಮತ್ತು ೨ ಜತೆ ಚಡ್ಡಾ, ಕಾಲಚೀಲ ಮೊದಲಾದವನ್ನು ಕೊಂಡ ಬಗ್ಗೆ ಮುಂಬಯಿ ಗುಪ್ತ ಪೋಲೀಸರು ಒಬ್ಬ ಸ್ಥಳೀಕ ಡಾಕ್ಟರರನ್ನು ಬಂಧಿಸಿದ್ದಾರೆ.

ಶ್ರೀ ಕೆ. ಎಂ. ಮುನಸಿಯವರ ಮಗಳು ಶ್ರೀಮತಿ ಉಷಾ ಇವರ ವಿವಾಹವು ತಾ. ೧೮ ರಂದು ಶ್ರೀ ರಘುಪತಿ ಅಯ್ಯರ್. ಎ. ಎಸ್ ಇವರೊಂದಿಗೆ ಮುಂಬಯಿ ನಗರದಲ್ಲಿ ಮುನಸಿಯವರ ನಿವಾಸದಲ್ಲಿ ಜರಗಿತು. ಮುಂಬಯಿ ಗವರ್ನರರು ಮುಖ್ಯ ಮಂತ್ರಿಗಳು ಗೃಹ ಮಂತ್ರಿಗಳು ಇನ್ನಿತರ ಪುರ ಪ್ರಮುಖರೇ ಮೊದಲಾದವರು ಸಮಾರಂಭಕ್ಕೆ ಆಗಮಿಸಿ ವಧೂವರರಿಗೆ ಆಶೀರ್ವದಿಸಿದರು.

ಕೂಲಿಕಾರ ಜನಸಂಖ್ಯೆಯು ಬಹಳವಿರುವ ಪಟ್ಟಣಗಳಲ್ಲಿ ಸಾಕ್ಷರತಾ ಪ್ರಸಾರವನ್ನು ಸುವ್ಯವಸ್ಥಿತವಾಗಿ ಸಾಗಿಸುವ ದೃಷ್ಟಿಯಿಂದ ಮುಂಬೈ ಸರಕಾರದವರು ಸೊಲ್ಲಾಪುರ ಮತ್ತು ಅಹಮದಾಬಾದಗಳ ಬಗ್ಗೆ ಪ್ರತ್ಯೇಕವಾಗಿ ಎರಡು ಪ್ರೌಢ ಶಿಕ್ಷಣ ಸಮಿತಿಗಳನ್ನು ೩ ವರ್ಷಗಳ ಮಟ್ಟಿಗೆ ನೇಮಿಸಿದ್ದಾರೆ.

ಮದ್ರಾಸ

ತಮಿಳನಾಡ ಕಾಂಗ್ರೆಸ ಕಾರ್ಯ ಸಮಿತಿಯು ತಾ ೧೬ ರಂದು ಸಭೆಸೇರಿ, ನಿಯಂತ್ರಿತ ಪದಾರ್ಥಗಳ ವ್ಯಾಪಾರದಲ್ಲಿ ಕಾಂಗ್ರೆಸ ಸಮಿತಿಗಳ ಸದಸ್ಯರೂ ಶಾಸನ ಸಭೆಯ ಸದಸ್ಯರೂ ತೊಡಗತಕ್ಕದ್ದಲ್ಲವೆಂದೂ ವ್ಯಾಪಾರದಲ್ಲಿ ಆಸ್ಥೆ ಇದ್ದವರು ಕಾಂಗ್ರೆಸಿಗೆ ಹಾಗೂ ಶಾಸನ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ವ್ಯಾಪಾರದಲ್ಲಿ ತೊಡಗಬಹುದೆಂದೂ ಗೊತ್ತುವಳಿ ಸ್ವೀಕರಿಸಿತು.

ಇತ್ತೀಚೆ ದಿಲ್ಲಿಯಲ್ಲಿ ಕೆಲವು ಪ್ರಾಂತಗಳ ಮುಖ್ಯ ಮಂತ್ರಿಗಳು ಹಿಂದುಸ್ತಾನದ ಘಟನೆಯ ಕರಡಿನ ಚರ್ಚೆ ನಡೆಸಿದರೆಂದೂ ಆಗ ಮದ್ರಾಸದ ಮುಖ್ಯ ಮಂತ್ರಿಗಳೂ ಮುಂಬಯಿ ಮುಖ್ಯ ಮಂತ್ರಿಗಳೂ ಕೇಂದ್ರ ಸರಕಾರವು ತಾನೇ ಹೆಚ್ಚಿನ ಅಧಿಕಾರ ವಹಿಸಿಕೊಳ್ಳುವದನ್ನು ವಿರೋಧಿಸಿದರೆಂದೂ ವಿಶ್ವಸನೀಯವಾಗಿ ತಿಳಿಯುತ್ತದೆ.

ಸಮುವಸ್ತ್ರಗಳನ್ನು ಉಪಯೋಗಿಸಬೇಕಾದ ಅಧಿಕಾರಿಗಳೆಲ್ಲ ಖಾದಿಯನ್ನೇ ಉಪಯೋಗಿಸಬೇಕೆಂದೂ ಸರಕಾರಿ ಕಚೇರಿಗಳಲ್ಲಿಯೂ ಖಾದಿಯನ್ನೇ ಬಳಸಬೇಕೆಂದೂ ಮದ್ರಾಸ ಸರಕಾರದವರು ಎಲ್ಲ ಶಾಖೆಗಳಿಗೂ ಆಜ್ಞೆ ವಿಧಿಸಿದ್ದಾರೆ.

ಶಾಸನ ಸಭೆಯ ಸದಸ್ಯರು ಶಾಸನ ಸಭೆಗಳಲ್ಲಿ ಕಾಂಗ್ರೆಸ ಮುಖಂಡರ ಹೆಸರೆತ್ತ ಕೂಡದೆಂದು ಮದ್ರಾಸ ವಿಧಿ ಮಂಡಲದ ಉಪಾಧ್ಯಕ್ಷರಾದ ಶ್ರೀ. ಕೆ. ವೆಂಕಟಸ್ವಾಮಿ ನಾಯುಡುರವರು ಹೇಳಿದರು.

ಸಂಯುಕ್ತಪ್ರಾಂತ

ಸೋನೇಪೂರ ಜಾತ್ರೆಯ ಜನರನ್ನೂ ದನಗಳನ್ನೂ ತುಂಬಿಕೊಂಡು ತಾ. ೧೮ ರಂದು ಮುಂಜಾನೆ ಪಾಟ್ನಾದ ಇಂಜನಿಯರಿಂಗ ಕಾಲೇಜದ ಘಾಟದಹತ್ತರ ಒಂದು ನೌಕೆಯು ಮುಳುಗಿದ್ದರಿಂದ ೫೦೦ ಜನರು ೧೦೦ ದನಗಳು ಜಲಸಮಾಧಿ ಹೊಂದಿದವೆಂದು ತಿಳಿದು ಬಂದಿದೆ.

ಪಶ್ಚಿಮ ಬಂಗಾಲ

ಪೂರ್ವ ಪಾಕಿಸ್ತಾನಕ್ಕೆ ಹೊರಟ ೨ ರೇಲ್ವೆ ವಾಗೀನುಗಳನ್ನು ಪೋಲೀಸರೂ ಸುಂಕದ ಅಧಿಕಾರಿಗಳೂ ಸಿಯಾಲ್ದಾ ಸ್ಟೇಶನ್ನಿನಲ್ಲಿ ಶೋಧಿಸಲಾಗಿ ಕೆಲ ಖುರ್ಚಿಗಳೂ ಹಿಂದುಸ್ತಾನ ಸರಕಾರಕ್ಕೆ ಸಂಬಂಧಪಟ್ಟ ಕೆಲ ಕಾಗದಪತ್ರಗಳು ದೊರಕಿವೆ. ಪೂರ್ವ ಪಾಕಿಸ್ತಾನದ ಒಬ್ಬ ನ್ಯಾಯಾಧೀಶನ ಹೆಸರಿನಲ್ಲಿ ಈ ವಾಗಿನುಗಳು [illegible] ತಿಳಿಯುತ್ತದೆ.

ಹೊಸದಿಲ್ಲಿ

ಭಾರತದಲ್ಲಿಯೇ ಕಟ್ಟಲ್ಪಟ್ಟ ಎರಡನೆಯ ಹಡಗವಾದ "ಜಲಪ್ರಭಾ" ಎಂಬ ೮೦೦೦ ಟನ್ ಭಾರದ ನೌಕೆಯನ್ನು ತಾ ೨೦ ರಂದು ಬೆಳಿಗ್ಗೆ ೧೧-೪೫ಕ್ಕೆ ನೀರಿಗಿಳಿಸಲಾಯಿತು. ಭಾರತದ ಉಪಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ದಿಲ್ಲಿಯ ಅಯರ್ವಿನ್ ಅಂಪಿ ಥೇಟರಿನಲ್ಲಿ ಕುಳಿತುಕೊಂಡು ವಾಯರಲೆಸ್ ಸಂಕೇತದಿಂದ ಈ ಸಮಾರಂಭವನ್ನು ನೆರವೇರಿಸಿದರು. ವಿಶಾಖಾಪಟ್ಟಣದಲ್ಲಿ ಸರದಾರ ಪಟೇಲರ ಮೊಮ್ಮಕ್ಕಳಾದ ಶ್ರೀ ಬಿಪಿನ ದಯಾಭಾಯಿ ಪಟೇಲರು ವಾಯರಲೆಸ್ ಸಂಕೇತವನ್ನು ಸ್ವೀಕರಿಸಿ ಹಡಗವು ನೀರಲ್ಲಿಳಿಯುವಾಗ ಅದರ ಮೇಲೆ ತೆಂಗಿನ ಕಾಯಿ ಒಡೆದರು

ನೇತಾಜಿ ಸುಭಾಷಚಂದ್ರ ಬೋಸರ ಮೂರ್ತಿಯನ್ನು ಕೆಂಪುಕೋಟೆಯ ಮಹಾದ್ವಾರದ ಎದುರಿಗೆ ನಿಲ್ಲಿಸಬೇಕೆಂದು ಕೇಂದ್ರ ಸರಕಾರಕ್ಕೆ ಬಿನ್ನವಿಸುವ ಒಂದು ಗೊತ್ತುವಳಿಯನ್ನು ತಾ ೨೧ ರಂದು ಸುಭಾಸ ಸೇನಾ ಸಲಹೆ ಸಮಿತಿಯ ಸಭೆಯಲ್ಲಿ ಅಂಗೀಕರಿಸಲಾಯ್ತು.

ಅಂತಾರಾಷ್ಟ್ರೀಯ ವಾಯುಶಾಸ್ತ್ರ ಸಂಸ್ಥೆಯ ಏಶಿಯಾ ವಿಭಾಗದ ಪರಿಷತ್ತು ೧೧ ದಿನಗಳ ವರೆಗೆ ಕಾರ್ಯಕಲಾಪ ನಡೆಸಿ ೪೪ ಗೊತ್ತುವಳಿಗಳನ್ನು ಸ್ವೀಕರಿಸಿ ತಾ ೨೧ ರಂದು ಮುಕ್ತಾಯವಾಯಿತು. ಈ ಪರಿಷತ್ತಿಗೆ ೧೪ ರಾಷ್ಟ್ರಗಳ ಪ್ರತಿನಿಧಿಗಳು ಬಂದಿದ್ದರು.

ಈಗ ಸಂಗ್ರಹದಲ್ಲಿರುವ ಅರಳೆಯನ್ನೆಲ್ಲ ವಶಪಡಿಸಿಕೊಳ್ಳಲು ಪ್ರಾಂತಿಕ ಮತ್ತು ಸಂಸ್ಥಾನ ಸರಕಾರಗಳಿಗೆ ಹೇಳಲಾಗಿದೆ ಎಂದು ಪ್ರಸಿದ್ಧವಾದ ಸುದ್ದಿಯು ಸುಳ್ಳಿದೆ. ನಿಯಂತ್ರಿತ ಬೆಲೆಗೆ ಪೇಟೆಯಲ್ಲಿ ಅರಳೆ ಸಿಗುವ ವರೆಗೆ ಹಾಗೆ ಮಾಡುವದಿಲ್ಲವೆಂದು ಸರಕಾರದ ಪ್ರಕಟನೆ ಹೊರಟಿದೆ.

ಕಾಶ್ಮೀರದ ವಿರುದ್ಧ ೧೩ ತಿಂಗಳುಗಳ ವರೆಗೆ ಯುದ್ಧ ಮಾಡಿ ಗೆಲ್ಲಲಾಗದೆ ಪಾಕಿಸ್ತಾನದ ಧುರೀಣರು ಈಗ ಸಾರ್ವತ್ರಿಕ ಮತಗಣನೆಯ ಮಾತೆತ್ತಹತ್ತಿದ್ದಾರೆಂದೂ ಈ ಮತಗಣನೆಗೆ ತಾವು ಬೆದರಿಲ್ಲವೆಂದೂ ಕಾಶ್ಮೀರದಲ್ಲಿ ಪಾಕಿಸ್ತಾನದ ಅತ್ಯಾಚಾರಗಳ ಅರಿವು ಕಾಶ್ಮೀರಿಗಳಿಗೆ ಸರಿಯಾಗಿ ಗೊತ್ತಾಗಿದೆಯೆಂದೂ ತಾ ೧೯ ರಂದು ಒಂದು ಭಾಷಣದಲ್ಲಿ ಕಾಶ್ಮೀರ ಉಪಮುಖ್ಯ ಮಂತ್ರಿಗಳು ಹೇಳಿದರು.

ಕಾಶ್ಮೀರದ ಯುದ್ಧದಲ್ಲಿ ವೈರಿಗಳು ಬದುಕಿಕೊಳ್ಳಲು ಪೂಂಚ ವಿಭಾಗದಲ್ಲಿ ೧೬೪೦೦ ಅಡಿ ಎತ್ತರದ ಗುಡ್ಡದಲ್ಲಿ ಆಶ್ರಯ ಪಡೆದಿದ್ದರು. ನಮ್ಮ ಸೈನಿಕರು ಅಲ್ಲಿಯೂ ದಾಳಿ ಮಾಡಿ ೭೫೦ ವೈರಿ ಸೈನ್ಯ ಕೊಂದರು. ವೈರಿಗಳು ಹೇರಳ ಶಸ್ತ್ರಾಸ್ತ್ರ ಬಿಟ್ಟು ಓಡಿಹೋಗಿದ್ದಾರೆ. ಇಷ್ಟೊಂದು ಎತ್ತರದ ಪ್ರದೇಶದ ಮೇಲೆ ಜಗತ್ತಿನಲ್ಲಿ ಈ ಮೊದಲು ಯುದ್ಧ ನಡೆದಿರಲಿಲ್ಲವೆಂದು ತಿಳಿಯುತ್ತದೆ.

ಕಾಂಗ್ರೆಸ ಕಾರ್ಯಕಾರಿ ಸಮಿತಿಯು ತಾ. ೧೮ ರಂದು ಭಾರತದಲ್ಲಿಯ ನಿರಾಶ್ರಿತರ ಸಮಸ್ಯೆಯನ್ನು ಕುರಿತು ಚರ್ಚೆ ಮಾಡಿತು.

ಭಾಷಾನುಗುಣ ಪ್ರಾಂತ ರಚನೆಯು ಇಂದು ಪರಿಸ್ಥಿತಿಗನುಸರಿಸಿ ಈಗಲೇ ಬೇಕಾದ ಅವಶ್ಯಕ ರಾಜಕೀಯ ಸುಧಾರಣೆಯಾಗಿದೆಯೆಂದೂ ಇದಾಗದಿದ್ದರೆ ಪ್ರಾಂತಿಕ ಸ್ವಾಯತ್ತತೆಯು ಅಸ್ತಿತ್ವದಲ್ಲಿ ಬರಲಾರದೆಂದೂ ಪ್ರಾಂತಿಕ ಸ್ವಾಯತ್ತತೆ ಇಲ್ಲದ ಒಕ್ಕೂಟ ಸರಕಾರವೆಂದರೆ ಅರ್ಥವಿಲ್ಲದ ಮಾತೆಂದೂ ಈ ಎಲ್ಲ ಕಾರಣಗಳ ಮೂಲಕ ಈ ಪ್ರಶ್ನೆಯನ್ನು ಮುಂದೂಡುವ ಧೋರಣವು ಅಸಮಂಜಸವಾದುದೆಂದೂ ತಾ. ೧೬ ರಂದು ಅ. ಭಾ. ಕಾಂಗ್ರೆಸಿನ ನಿಯೋಜಿತ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ಗೌರವಾರ್ಥವಾಗಿ ಏರ್ಪಡಿಸಿದ ಒಂದು ಸಮಾರಂಭದಲ್ಲಿ ಭಾಷಣ ಮಾಡುತ್ತ ಹೇಳಿದರು.

ಹಿಂದುಸ್ತಾನದಿಂದ ಪಾಕಿಸ್ತಾನಕ್ಕೆ ಜವಳಿ ಪೂರೈಸುವ ಬಗ್ಗೆ ಒಂದು ಒಪ್ಪಂದವಾಗಿದ್ದು ಈ ಒಪ್ಪಂದಕ್ಕೆ ಎರಡೂ ಸರಕಾರಗಳ ಅಂಕಿತ ಬಿದ್ದಿವೆ. ಈ ಒಪ್ಪಂದವು ಕರಾಚಿಯಲ್ಲಿ ಆದ ಹಿಂದ-ಪಾಕಿಸ್ತಾನ ವ್ಯಾಪಾರಿ ಒಪ್ಪಂದದ ಒಂದು ಅಂಗವೆಂದು ತಿಳಿಯುತ್ತದೆ.

ಅಂತರ್ ರಾಷ್ಟ್ರೀಯ ಆಹಾರ ನಿಧಿಯವರು ಹಿಂದುಸ್ತಾನಕ್ಕೆ ಕೊಡಮಾಡಿದ ೮೦೦೦ ಟನ್ ಮಲಯ ಕೊಬ್ಬರಿಯ ಎಣ್ಣೆಯನ್ನು ವರ್ತಕರ ಮುಖಾಂತರ ಆಯಾತ ಮಾಡಲಾಗುವದೆಂದು ಪ್ರಕಟಿಸಲಾಗಿದೆ.

ಮುಂಬಯಿಯಲ್ಲಿ ಬಿರುಗಾಳಿಯ ಅನಾಹುತ

ತಾ ೨೧ ರಂದು ರಾತ್ರಿ ಬಲುವೇಗದಿಂದ ಬಿರುಗಾಳಿ ಬೀಸಿ ಮುಂಬಯಿಯ ವಿದ್ಯುದ್ವಾಹಕ ತಂತಿಯ ಕಂಬಗಳು ಬಿದ್ದಿವೆಯೆಂದೂ ಮುಂಬಯಿ ಆಕಾಶವಾಣಿ ಮತ್ತು ಇತರ ಸಂಸ್ಥೆಗಳು ತಾತ್ಪೂರ್ತಿಕ ವಿದ್ಯುತ್ ಶಕ್ತಿಯನ್ನು ಹುಟ್ಟಿಸಿಕೊಂಡು ಕಾರ್ಯ ಸಾಗಿಸಬೇಕಾಯಿತೆಂದೂ ಈ ಬಿರುಗಾಳಿಯಿಂದ ಆಸ್ತಿಯ ಹಾನಿಯೂ ಬಹಳವಾಗಿದೆಯೆಂದೂ ವರದಿ ಬಂದಿದೆಯಲ್ಲದೆ ತಾ ೨೨ ರ ಬೆಳಗಿನಿಂದ ಮುಂಬಯಿಗೆ ಯಾವ ಉಗಿಬಂಡಿಯೂ ಹೋಗಿಲ್ಲವಾಗಿ ಮತ್ತು ಮುಂಬಯಿಯಿಂದ ಯಾವ ಉಗಿಬಂಡಿ ಹೊರಟಿಲ್ಲವಾಗಿ ತಿಳಿಯುತ್ತಿದೆ. ಒಟ್ಟಿನಲ್ಲಿ ಮುಂಬಯಿ ಸಾರಿಗೆ ಸಂಪರ್ಕದ ಸಾಧನಗಳೆಲ್ಲ ನಿರುಪಯೋಗಿ ಯಾಗಿ ನಗರದ ಜೀವನವೇ ಕುಂಠಿತವಾಗಿದೆ. ಬಿರುಗಾಳಿಯ ನಂತರ ಮಳೆಯು ಒಂದೇ ಸವನೆ ಸುರಿದು ಬೀದಿಗಳಲ್ಲೆಲ್ಲ ಮೊಣಕಾಲವರೆಗೆ ನೀರು ನಿಂತದ್ದರಿಂದ ಟ್ರಾಮು, ರೇಲ್ವೆ, ಟೆಲಿಫೋನ ಎಲ್ಲವೂ ಕಟ್ಟಾಗಿವೆ. ಸಮುದ್ರದಲ್ಲಿ ನೌಕೆಗಳು ಬಿರುಗಾಳಿಯ ಹೊಡತಕ್ಕೆ ದಿಕ್ಕಾಪಾಲಾಗಿ ಹೋಗಿವೆ ಹಾನಿ ಎಷ್ಟೆಂದು ತಿಳಿದಿಲ್ಲ. ಗಿಡಗಳು ಬೇರು ಸಹಿತ ಕಿತ್ತುಬಿದ್ದಿವೆ. ಈ ಅನಾಹುತದಿಂದ ಎಷ್ಟು ಜನ ಪ್ರಾಣಕ್ಕೆ ಎರವಾಗಿದ್ದಾರೆಂಬುದನ್ನು ಹೇಳುವದು ಕಠಿನವಾದರೂ ಬಹಳ ಜನರು ಅಪಘಾತಕ್ಕೆ ಈಡಾಗಿ ಪ್ರಾಣಕ್ಕೆ ಎರವಾಗಿದ್ದಾರೆಂದು ನಂಬಲಾಗಿದೆ ಮನೆಗಳು ಬಿದ್ದು ಮಣ್ಣುಕಲ್ಲು ರಸ್ತೆಯಲ್ಲಿ ಬಿದ್ದು ದಾರಿ ಕಟ್ಟಾಗಿವೆ. ಸೈನಿಕರನ್ನು ಕರೆಸಿಕೊಂಡು ರಸ್ತೆಗಳನ್ನು ಸ್ವಚ್ಛ ಮಾಡಿಸಲಾಗುತ್ತಿದೆ. ಫಾಯರ ಇಂಜಿನಗಳು ಮತ್ತು ಸೈನಿಕರು ಜನರನ್ನು ಬದುಕಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಬಿದ್ದ ತಂತಿ ಕಂಬಗಳನ್ನು ಸರಿ ಪಡಿಸಲು ಅನೇಕ ಸಿವಿಲ ಇಂಜಿನಿಯರರು ದುಡಿಯುತ್ತಿದ್ದಾರೆ ಜಿ. ಆಯ. ಪಿ. ರೇಲ್ವೆ ಜನರಲ್ ಪತ್ರಿಕೆಗಳು ಗಾಡಿಗಳು ಕೂಡ ನಿಂತು ಹೋಗಿದ್ದವು.

೨೪ ನೆಯ ತಾರೀಕು ಮಧ್ಯಾಹ್ನದಿಂದ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿ ನಿತ್ಯದ ವ್ಯವಹಾರ ಪ್ರಾರಂಭವಾದಂತಾಗಿದೆ. ಈ ಅನಾಹುತದಲ್ಲಿ ೧೮ ಜನ ಸತ್ತಿದೆಯೆಂದೂ ನೂರಾರು ಜನರಿಗೆ ಗಾಯಗಳಾಗಿವೆಯೆಂದೂ ತಿಳಿಯುತ್ತದೆ.

ಹೈದರಾಬಾದ

ಹೈದರಾಬಾದ ಸಂಸ್ಥಾನದಲ್ಲಿ ಇನ್ನೂ ಕೆಲಕಾಲ ಮಿಲಿಟರಿ ಆಡಳಿತೆಯನ್ನೇ ಸಾಗಿಸತಕ್ಕದ್ದೆಂದು ಹಿಂದುಸ್ತಾನ ಸರಕಾರದ ಧೋರಣವಿರುವದಾಗಿ ತಿಳಿದುಬಂದಿದೆ.

ಹೈದರಾಬಾದ ಮಿಲಿಟರಿ ಗವರ್ನರರಾದ ಮೇ. ಜ. ಚೌಧರಿಯವರ ಹೈದರಾಬಾದದ ಕಾರ್ಯವೀಗ ಮುಗಿದಂತಾಗಿದ್ದು ಮತ್ತು ಅಲ್ಲಿಯ ಇನ್ನುಳಿದ ಕೆಲಸವನ್ನು ಇತರರು ಸಾಗಿಸಿಕೊಂಡು ಹೋಗುತ್ತಿದ್ದುದರಿಂದ ಕಾಶ್ಮೀರದ ಚಳಿಗಾಲದ ದಾಳಿಯಲ್ಲಿ ಮೇ. ಜ. ಚೌಧರಿಯವರ ಸಹಾಯವನ್ನು ಹಿಂದುಸ್ತಾನ ಸರಕಾರವು ಪಡೆವ ಸಂಭವವಿದೆಯೆಂದು ತಿಳಿಯುತ್ತದೆ.

ಹೈದರಾಬಾದದ ಸುಧಾರಿಸಿದ ಮುಂಗಡ ಪತ್ರಿಕೆಯು ಈ ತಿಂಗಳಲ್ಲಿಯೇ ಪ್ರಕಟವಾಗಲಿದೆಯೆಂದೂ ಲಿಯಾಕತ ಅಲಿ ಮತ್ತು ಮೋಯಿನ ನವಾಜ ಜಂಗರು ನಿಜಾಮರ ಧನವನ್ನು ಎಷ್ಟೇ ಅಪವ್ಯಯ ಮಾಡಿದ್ದರೂ ಹೈದರಾಬಾದದ ಆರ್ಥಿಕ ಸ್ಥಿತಿಯು ಭದ್ರವಾಗಿದೆಯೆಂದೂ ತಿಳಿಯುತ್ತದೆ.

ಇದೇ ತಾ ೨೯ ಕ್ಕೆ ನಿಜಾಮರು ಹಿಂದುಸ್ತಾನ ಸರಕಾರದೊಡನೆ ಮಾಡಿಕೊಂಡ ಯಥಾಸ್ಥಿತಿ ಒಪ್ಪಂದದ ಅವಧಿ ಮುಗಿಯುವದು. ನಿಜಾಮರು ಈಗ ಹಿಂದುಸ್ತಾನ ಸರಕಾರಕ್ಕೆ ಪತ್ರ ಬರೆದು, ಆಗಸ್ಟ ೧೫ ರ ಮೊದಲು ನಿಜಾಮರ ವಿದೇಶ ವ್ಯವಹಾರವು ಹಿಂದುಸ್ತಾನ ಸರಕಾರಕ್ಕೆ ಸೇರಿದ್ದಂತೆ ಇನ್ನು ಮುಂದೆಯೂ ಸಾಗತಕ್ಕದ್ದೆಂದು ಬಿನ್ನವಿಸಿಕೊಂಡಿದ್ದಾರೆಂದು ತಿಳಿಯುತ್ತದೆ.

ಹೈದರಾಬಾದ ಘಟನಾ ಸಮಿತಿಯ ಚುನಾವಣೆಯ ಪ್ರಥಮ ಸಿದ್ಧತೆಯೆಂದು, ಚುನಾವಣೆ ಕಮಿಶನರರಾದ ಶ್ರೀ ಶೇಷಾದ್ರಿಯವರು ಒಂದು ಆಜ್ಞೆ ಹೊರಡಿಸಿ, ಎಲ್ಲ ಜಿಲ್ಲಾಧಿಕಾರಿಗಳೂ ತಂತಮ್ಮ ಜಿಲ್ಹೆಗಳಲ್ಲಿಯ ಎಲ್ಲ ಗ್ರಾಮಗಳ ಎಲ್ಲ ಮನೆಗಳಿಗೂ ನಂಬರಗಳನ್ನು ಹಾಕಿಸಬೇಕೆಂದು ವಿಧಿಸಿದ್ದಾರೆ

ನಾರದ ಭವಿಷ್ಯ

ಜ್ಯೋತಿಷೀ- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ

ನವಂಬರ ೨೯ ರಿಂದ ಡಿಸೆಂಬರ ೫ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಮಕ್ಕಳ ಕಿರುಕುಳ ಕೃತಿಗಳಿಂದ ಗಂಡ ಹೆಂಡಿರಲ್ಲಿ ವಿತುಷ್ಟಿಯುಂಟಾಗುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಒಳಿತು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಇವು ಬಹಳ ಉತ್ತಮ. ಪ್ರಿಯಜನರ ಭೆಟ್ಟಿ ಮತ್ತು ಸಹವಾಸ ಶುಭ ಸೂಚಕ ಸ್ವಪ್ನಗಳು ಬೀಳುವವು. ಮಿತ್ರ ಸುಖ ಉತ್ತಮ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶಸ್ಸು. ಅನಿರೀಕ್ಷಿತ ಲಾಭ ಸಂಭವವುಂಟು. ಪ್ರವಾಸವು ಸುಖಕರ. ಭೆಟ್ಟಿ ಸಾಧಾರಣ ನೆಟ್ಟಗಿದ್ದು ಪತ್ರವ್ಯವಹಾರವು ಅಷ್ಟೊಂದು ಅನುಕೂಲವಾಗಿಲ್ಲ. ಅಶ್ವಿನಿಯ ಮೊದಲಿನ ೩ ಮತ್ತು ಭರಣಿಯ ಮೊದಲಿನ ಚರಣಗಳಿಗೆತೊಂದರೆ ಕಡಮೆ. ತಾ. ೨೯, ೨, ೩, ೪ ಒಳ್ಳೆಯವು

ವೃಷಭ

ಪ್ರಕೃತಿಗೆ ಅನಾರೋಗ್ಯ. ಹೆಂಡತಿಗೆ ಒಂದು ದೊಡ್ಡ ಚಿಂತಾಮೂಲಕವಾಗಿ ಔದಾಸೀನ್ಯ ಉಂಟಾಗುವದು: ಪ್ರಾಪಂಚಿಕ ಸುಖವು ಹೊರಹೊರಗೆ ಸರಿಯಾಗಿದೆಯೆಂದು ತೋರ್ಪಡಿಸಿದರೂ ಒಳಗೊಳಗೆ ತೂಕ ತಪ್ಪಿದಂತಹದೇ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ನೆಟ್ಟಗುಂಟು ಆದರೆ ಪ್ರಗತಿಯ ವಿಷಯದಲ್ಲಿ ಅಯತ್ತ ಹೊತ್ತಿಗೆ ಮನೋಭಂಗವಾಗುವದು. ಮಿತ್ರರು ಕ್ಲೇಶಕ್ಕೆ ಒಳಗಾಗುವರು. ನೆರೆಹೊರೆಯವರೊಡನೆ ಬಹಳ ವಿರೋಧ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ ಸ್ಥಿತಿ. ಶ್ರಮಜೀವಿಗಳಿಗಿಂತ ಬುದ್ಧಿ ಜೀವಿಗಳಿಗೆ ತೊಂದರೆ ಕಡಮೆ. ಪ್ರವಾಸಕ್ಕಿಂತ ಭೆಟ್ಟಿಯೂ ಪತ್ರವ್ಯವಹಾರವೂ ತುಸು ನೆಟ್ಟಗೆನ್ನಬೇಕು. ರೋಹಿಣಿಯ ಕೊನೆಯ ೩ ಮತ್ತು ಮೃಗಾನಕ್ಷತ್ರದ ಮೊದಲಿನ ಚರಣಗಳಿಗೆ ಹೆಚ್ಚು ತೊಂದರೆ ತಾ. ೩೦, ೧, ೫, ಒಳ್ಳೆಯವು

ಮಿಥುನ

ಪ್ರಕೃತಿಗೆ ತುಸು ಶಾರೀರಿಕ ಕ್ಲೇಶವೂ ಅದಕ್ಕೂ ಹೆಚ್ಚು ಮಾನಸಿಕ ಕ್ಲೇಶವೂ ಒದಗುವದು. ಹೆಂಡತಿಯೊಡನೆ ಮೇಲಿಂದ ಮೇಲೆ ವಿರೋಧ. ಮಕ್ಕಳಲ್ಲಿ ಉನ್ನತಿ ತೋರುವದು. ಪ್ರಾಪಂಚಿಕ ಸುಖವು ಚೆನ್ನಾಗಿದೆ. ಪೂಜ್ಯ ವ್ಯಕ್ತಿಗಳ ಸಹವಾಸ ಲಭಿಸುವದು. ಉದ್ಯೋಗದಲ್ಲಿ ಪ್ರಗತಿ ಉತ್ತಮ, ಪ್ರತಿಷ್ಠೆಯೂ ವಿಶೇಷ ಉನ್ನತಿಗೆ ಪೋಷಕವಾಗುವಂತಹದು, ಲಾಭದ ಗಾಳಿಯಂತೂ ರಭಸದಿಂದ ಬೀಸಲು ಪ್ರಾರಂಭಿಸುವದು. ಆದರೆ ಬುದ್ಧಿಯು ಮಾತ್ರ ಕಪಟದ ಕಡೆಗೆ ಒಲೆದಿರುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶಸ್ಸು ಚೆನ್ನಾಗಿದೆ. ಆದರೆ ಶತ್ರುಗಳು ಕೆರಳುವಂತಹ ಕೆಲವು ಅಪಕೃತ್ಯಗಳಾಗುವವು ಸ್ಥಾವರದಲ್ಲಿ ತುಸ್ಸು ಹಾನಿ. ನೆರೆಹೊರೆಯವರೊಡನೆ ನಿರರ್ಥಕ ಅಪ್ರಿಯ ವರ್ತನೆ. ಪ್ರವಾಸವೂ ಭೆಟ್ಟಿಯೂ ಉತ್ತಮ ಆದರೆ ಪತ್ರವ್ಯವಹಾರವು ಮಾತ್ರ ಬಹಳ. ತಪ್ಪುತಿಳುವಳಿಕೆ ಹುಟ್ಟಿಸುವಂತಹದು. ಆದ್ರಾ್ರದ ಕೊನೆಯ ೩ ಚರಣ ಮತ್ತು ಪುನರ್ವಸುವಿನ ಮೊದಲಿನ ಚರಣಗಳಿಗೆ ತೊಂದರೆ ಕಡಮೆ. ತಾ. ೨೯, ೨, ೩ ಇವು ಒಳ್ಳೆಯವು.

ಕರ್ಕ

ಸ್ವಂತದ ಪ್ರಕೃತಿ ಉತ್ತಮ. ಆದರೆ ಹೆಂಡತಿಗೂ ಮಕ್ಕಳಿಗೂ ಕ್ಲೇಶ. ಅಲ್ಲದೆ ಪ್ರಾಪಂಚಿಕ ತೊಂದರೆಯು ಹೆಚ್ಚುತ್ತಿರುವಂತಹದು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಇವೆಲ್ಲ ಚೆನ್ನಾಗಿರುವವೇನೋ ನಿಜ. ಆದರೆ ಪ್ರತಿಯೊಂದರಲ್ಲಿಯೂ ಇನ್ನೊಬ್ಬರ ಬೊಗಸೆಯಿಂದ ನೀರು ಕುಡಿಯಬೇಕಾದ ಪ್ರಸಂಗ. ಧಂದೇಗಾರರಿಗಿಂತ ನೌಕರಿ ಮಾಡುವವರಿಗೆ ಬಹಳ ಕಡಮೆ ತೊಂದರೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಇಬ್ಬಣಕ್ಕೂ ಅಷ್ಟೇ ಹಾನಿ ತಟ್ಟುವದು. ಮಿತ್ರತ್ವದಲ್ಲಿ ವ್ಯತ್ಯಯ ಬರುವದು. ಫುಕ್ಕಟೆ ವಾಹನ ಯೋಗ ಒದಗುವ ಸಂಭವ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರ ವ್ಯವಹಾರ ತುಸು ನೆಟ್ಟಗೆ. ಪುಷ್ಯದ ಕೊನೆಯ ೩ ಚರಣ ಅಶ್ಲೇಷದ ಮೊದಲಿನ ಚರಣಗಳಿಗೆ ತೊಂದರೆ ಕಡಮೆ. ತಾ. ೩೦, ೧, ೫ ಇವು ಒಳ್ಳೆಯವು.

ಸಿಂಹ

ಪ್ರಕೃತಿಗೂ ಪ್ರಾಪಂಚಿಕ ಸುಖಕ್ಕೂ ಉತ್ತಮ. ಮಕ್ಕಳ ಯಶದ ಹೆಚ್ಚಳವನ್ನು ನೋಡಿ ನೋಡಿ ಮನಸ್ಸಿಗೆ ತುಂಬ ಸಮಾಧಾನವೆನಿಸುವ ಯೋಗವಿದೆ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಆದರೆ ಪ್ರತಿಷ್ಠೆಯೂ ಲಾಭವೂ ಹಾಗೂ ಹೀಗೂ ತಡೆದುಕೊಂಡಿದ್ದರೆ ಅಷ್ಟೇ ಸಾಕು ಎನ್ನುವಂತಹ ದುಸ್ತರ ಪ್ರಸಂಗ ಬಂದು ಒದಗುವ ಸಂಭವವಿದೆ. ಹಗೆಗಳಿಗಿಂತ ಮಿತ್ರರೇ ಪ್ರತಿಕೂಲ ಕೃತಿಗಳನ್ನು ಎಸಗುವರು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆ ಚೆನ್ನಾಗಿಯೇ ಇದೆ. ದಾಯಾದಿಗಳ ಗುಣ ಗೌರವ ಪ್ರಸಂಗವಿದೆ. ಭೆಟ್ಟಿಗಿಂತ ಪ್ರವಾಸವೂ ಪತ್ರವ್ಯವಹಾರವೂ ಹೆಚ್ಚು ನೆಟ್ಟಗೆ. ಮಘಾದ ಕೊನೆಯ ಮೂರು ಚರಣಗಳಿಗೂ ಪೂರ್ವಾದ ಮೊದಲಿನ ಚರಣಕ್ಕೂ ತೊಂದರೆ ಕಡಮೆ. ತಾ. ೨೯, ೨, ೩ ಇವು ಚನ್ನಾಗಿವೆ.

ಕನ್ಯಾ

ನಿಮ್ಮ ಹಾಗೂ ಹೆಂಡತಿಯ ಪ್ರಕೃತಿಯು ನೆಟ್ಟಗೆ. ಆದರೆ ಒಂದು ಮಹತ್ವದ ಕಾರ್ಯದಲ್ಲಿ ನಿಮ್ಮ ಮತ್ತು ಹೆಂಡತಿಯಲ್ಲಿ ಮತಭೇದವಾಗಿ ನಿತ್ಯ ಪ್ರಾಪಂಚಿಕ ವ್ಯವ್ಯಹಾರದಲ್ಲಿ ಕೂಡ ತುಂಬ ಗೊಂದಲವೇಳುವ ಸಂಭವವಿದೆ. ಅದರಲ್ಲಿಯೂ ಬೇಕಾದ ಬೇಡವಾದ ಶಿಷ್ಟ ದುಷ್ಟ ಅತಿಥಿಗಳು ಬರುವದರಿಂದ ಈ ಗೊಂದಲಕ್ಕೆ ಇನ್ನಷ್ಟು ಪುಟಕೊಟ್ಟಂತಾಗುವದು. ಉದ್ಯೋಗದಲ್ಲ ಪ್ರಗತಿ ಪ್ರತಿಷ್ಠೆ ಲಾಭ ಎಲ್ಲವೂ ಬಹಳ ಉತ್ತಮ. ಆದರೆ ಬಗೆಬಗೆಯ ವೆಚ್ಚದ ಇಕ್ಕುಳದಲ್ಲಿ ಸಿಲುಕಿ ಜೀವಕ್ಕೆ ಸಾಕುಬೇಕೆನ್ನಿಸಿ ಹೋಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ದೊರಕಿದ ಯಶಸ್ಸೂ ಅನುಕೂಲತೆಯೂ ಕನ್ನಡಿಯ ಗಂಟಾಗಿಯೇ ಉಳಿವ ಸಂಭವವಿದೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರವು ನೆಟ್ಟಗೆ. ಹಸ್ತಾದ ಕೊನೆಯ ೩ ಚರಣ ಚಿತ್ರಾದ ಮೊದಲಿನ ಚರಣ ಇವುಗಳಿಗೆ ಹೆಚ್ಚು ತೊಂದರೆ, ತಾ. ೨೯, ೩೦, ೧, ೫, ಇವು ಒಳ್ಳೆಯವು.

ತುಲಾ

ನಿಮ್ಮ ಹಾಗು ಉಳಿದೆಲ್ಲರ ಪ್ರಕೃತಿಯು ಉತ್ತಮ. ಆದರೆ ಪ್ರತಿಯೊಬ್ಬರೂ ಇನ್ನೊಬ್ಬರ ಮೇಲೆ ಸಿಡಿಕು ತೋರಿಸುತ್ತಾರೆ. ಪ್ರಾಪಂಚಿಕ ರಥವು ತಡವರಿಸುತ್ತಲೇ ಸಾಗುವದು ಮತ್ತು ಕೆಲವು ಆಗಂತುಕ ಕಾರಣಗಳು ತೊಂದರೆ ಕೊಡುವವು. ಉದ್ಯೋಗದಲ್ಲಿ ಲಾಭ ಪರಿಪೂರ್ಣವಿದೆ; ಆದರೆ ಪ್ರಗತಿಯೂ ಪ್ರತಿಷ್ಠೆಯೂ ಕಡಮೆ. ಮಿತ್ರತ್ವದಲ್ಲಿ ವ್ಯತ್ಯಯ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆಯುಂಟು. ಪ್ರವಾಸವು ತೊಂದರೆಯದು ಆದರೆ ಭೆಟ್ಟಿಯೂ ಪತ್ರವ್ಯವಹಾರವೂ ಒಳಿತು. ಸ್ವಾತಿಯ ಕೊನೆಯ ೩ ವಿಶಾಖೆಯ ಮೊದಲಿನ ಚರಣ ಇವುಗಳಿಗೆ ತೊಂದರೆ ಕಡಮೆ. ತಾ ೨೯, ೩೦, ೧, ೨, ಇವು ಒಳ್ಳೆಯವು.

ವೃಶ್ಚಿಕ

ನಿಮ್ಮ ಮತ್ತು ಮಕ್ಕಳ ಪ್ರಕೃತಿಯು ಹೆಂಡತಿಯ ಪ್ರಕೃತಿಗಿಂತ ನೆಟ್ಟಗೆ. ಪ್ರಾಪಂಚಿಕ ಸುಖವು ಉತ್ತಮವಾಗಿದ್ದರೂ ಒಂದು ಕ್ಷುಲ್ಲಕ ಕಾರಣದಿಂದ ಮನಸ್ಸಿನ ಮೇಲೆ ವಿಪರೀತ ಪರಿಣಾಮವಾಗಿ ಕಷ್ಟಪಡುವಿರಿ. ಉದ್ಯೋಗದಲ್ಲಿ ಪ್ರಗತಿಯು ಕಡಮೆ; ಆದರೆ ಪ್ರತಿಷ್ಠೆ ಉತ್ತಮ. ಲಾಭವು ಪರಿಪೂರ್ಣವಿದೆ. ವೆಚ್ಚವು ಮಾತ್ರ ಮಿತಿಯನ್ನು ಮೀರುವದಾದರೂ ಉದ್ದೇಶ ಸಫಲವಾಗುವದು. ಪರಸ್ತ್ರೀ ಬಗ್ಗೆ ಮನಸ್ಸು ಚಂಚಲವಾಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ ಸ್ಥಿತಿಯಾದರೂ ಶತ್ರುಪಕ್ಷವು ಹಣ್ಣಾಗಿ ಹೋಗುವದು. ಮಿತ್ರ ಸುಖ ಉತ್ತಮ. ಸಂಗ್ರಹವು ಹೆಚ್ಚುವದು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರಗಳೇ ನೆಟ್ಟಗೆ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ಮೊದಲಿನ ಚರಣ ಇವುಗಳಿಗೆ ತೊಂದರೆ ಕಡಮೆ. ತಾ. ೨, ೩, ೪, ೫, ಇವುಗಳು ಒಳ್ಳೆಯವು.

ಧನು

ನಿಮ್ಮ ಪ್ರಕೃತಿಯು ನೆಟ್ಟಗೆ ಆದರೆ ಹೆಂಡತಿ ಮಕ್ಕಳ ಪ್ರಕೃತಿಯು ಸರಿಯಾಗಿರಲಾರದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಒಳಿತೇ ಎನ್ನಬೇಕು. ಆಪ್ತಜನರಿಂದ ಗೌರವ. ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಲಾಭ ಸಂಪೂರ್ಣ. ಆದರೆ ಪ್ರಗತಿಯ ಸೂತ್ರಗಳನ್ನು ಸಿಕ್ಕವರ ಕೈಯಲ್ಲಿ ಕೊಟ್ಟ ತಪ್ಪಿನಿಂದ ಪ್ರತಿಷ್ಠೆಗೆ ಭಂಗ ಬರುವ ಸಂಭವ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಧ್ಯಮ ಸ್ಥಿತಿ. ಪ್ರವಾಸಾದಿ ಕಾರ್ಯಗಳು ತೊಂದರೆಯವು. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢದ ಮೊದಲನೆಯ ಚರಣ ಇವುಗಳಿಗೆ ತೊಂದರೆ ಕಡಮೆ. ತಾ. ೨೯, ೨, ೩, ೪, ಇವು ಒಳ್ಳೆಯವು.

ಮಕರ


ಪ್ರಕೃತಿಯು ಸರಿಯಾಗಿರದು. ತಂದೆತಾಯಿ ಮೊದಲಾದ ಹಿರಿಯರಿಗೂ ಕ್ಲೇಶ. ಸ್ತ್ರೀಸುಖವನ್ನುಳಿದು ಇನ್ನೆಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ ಹೆಚ್ಚು. ಮಿತ್ರರೊಡನೆ ವೈರ. ನಾಲ್ಕು ಜನ ನೆರೆಯುವಂತಹ ವಾಗ್ವಾದವಾಗುವ ಸಂಭವವೂ ಉಂಟು. ಉದ್ಯೋಗದಲ್ಲಿ ಲಾಭವೂ ಪ್ರಗತಿಯೂ ಪ್ರತಿಷ್ಠೆಯೂ ನೆಟ್ಟಗಿದೆ. ಆದರೆ ಹೆಚ್ಚಿನ ವ್ಯಯವಾಗಿ ಕೈ ಮತ್ತೆ ಬರಿದೇ. ಕೈಗಡವನ್ನೊ ಸಾಲವನ್ನೊ ತರುವ ಹೊತ್ತು ಬಂದರೂ ಬರಬಹುದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಇಬ್ಬಣಕ್ಕೂ ಸಮಾನ ಸ್ಥಿತಿ. ಪ್ರವಾಸಾದಿ ಕಾರ್ಯಗಳು ಅನುಕೂಲ. ಶ್ರವಣಾದ ಕೊನೆಯ ೩ ಚರಣಗಳು ಧನಿಷ್ಠಾದ ಮೊದಲನೆಯ ಚರಣ ಇವುಗಳಿಗೆ ಬಹಳ ತೊಂದರೆ. ತಾ. ೨೯, ೩೦, ೩೧ ಇವು ಒಳ್ಳೆಯವು.

ಕುಂಭ

ಪ್ರಕೃತಿಯು ಉತ್ತಮ. ಪ್ರಾಪಂಚಿಕ ಸುಖವೂ ಮನಸ್ಸಿನಂತೆ. ಆದರೆ ವಿಶೇಷ ಪ್ರಿಯ ಪುತ್ರ ಅಥವಾ ಕನ್ಯೆಯ ವಿರಹದಿಂದ ವ್ಯಗ್ರತೆ ತಲೆದೋರುವದು. ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಲಾಭವೂ ಅತಿ ಉತ್ತಮ.. ಅಧಿಕಾರ ಮತ್ತು ವರ್ಚಸ್ಸಿನ ಹೆಚ್ಚಳ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಜಯ. ಮಂಗಲಕಾರ್ಯಗಳಾಗಲಿ ಧಾರ್ಮಿಕ ಕೃತ್ಯಗಳಾಗಲಿ ಜರಗುವವು. ಪ್ರವಾಸಾದಿ ಕಾರ್ಯಗಳು ಹಿತಾವಹ. ಶತತಾರಕೆಯ ಕೊನೆಯ ೩ ಚರಣಗಳು ಮತ್ತು ಪೂರ್ವಾಭಾದ್ರಪದದ ಮೊದಲಿನ ಚರಣ ಇವುಗಳಿಗೆ ಹೆಚ್ಚು ಉತ್ತಮ. ತಾ. ೨೯, ೩೦, ೧, ೨, ೩ ಇವು ಒಳ್ಳೆಯವು.

ಮೀನ

ಪ್ರಕೃತಿ ಉತ್ತಮ. ಸ್ತ್ರೀಸುಖ ಮನಸ್ಸಿನಂತೆ. ಆದರೂ ಪರಸ್ತ್ರೀ ವಿಷಯಕವಾಗಿ ಚಂಚಲತೆಯುಂಟಾಗುವದು. ಉಳಿದ ಸಂಗತಿಗಳಲ್ಲಿ ಪ್ರಾಪಂಚಿಕ ಸುಖವು ಉತ್ತಮ. ಆದರೆ ಪ್ರಿಯ ಆಪ್ತರಲ್ಲಿ ಒಬ್ಬರ ಅಸ್ವಾಸ್ಥ್ಯ ಅಥವಾ ಅಪಕರ್ಷದ ಬಗ್ಗೆ ಬಹಳ ಚಿಂತೆಯೆನ್ನಿಸುವದು ಉದ್ಯೋಗದಲ್ಲಿ ಪ್ರಗತಿಯೂ ಪ್ರತಿಷ್ಠೆಯೂ ಉತ್ತಮ. ಆದರೆ ಲಾಭವಾಗುವಾಗ ಏನಾದರೊಂದು ತಂಟೆ ಆತಂಕ ಉಂಟಾಗುವ ಸಂಭವವಿದ್ದರೂ ಕೊನೆಗೆ ನಿಮ್ಮ ಮನಸ್ಸಿನಂತೆಯೇ ಆಗುವದು. ಮಿತ್ರರಲ್ಲಿ ಕ್ಲೇಶ ಇಲ್ಲವೆ ವಿರೋಧ. ಮನರಂಜನೆಯ ಯೋಗಗಳು ಬಹಳ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಗೆಲವಾಗಿ ಹಗೆಯು ಸಂಪೂರ್ಣ ಹಣ್ಣಾಗಿ ಹೋಗುವನು. ಪ್ರವಾಸಾದಿ ಕಾರ್ಯಗಳು ಅತ್ಯುತ್ತಮ. ಉತ್ತರಾಭಾದ್ರಪದದ ಕೊನೆಯ ೩ ಚರಣಗಳು ರೇವತಿಯ ಮೊದಲಿನ ಚರಣ ಇವುಗಳಿಗೆ ಹೆಚ್ಚು ಉತ್ತಮ. ತಾ, ೩೦, ೧, ೨, ೩ ಇವು ಒಳ್ಳೆಯವು.



[ತಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾಕಲ್ಯದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವು ಆದರೂ ... ವಿಮರ್ಶೆ ಮಾಡಿಕೊಳ್ಳ ಬೇಕೆಂದು ಗ್ರಂಥಕರ್ತರಾಗಿ ಈ ಮೂಲಕ ತಿಳಿಸಬಯಸುತ್ತೇವೆ. -ಸಂ]

ದಕ್ಷಿಣ ಕನ್ನಡದ ಇತಿಹಾಸ

ಲೇ: ಶ್ರೀ ಕೇಶವ ಕುಡುವ ಕಾಳ ಪ್ರಕಾಶಕರು ಅವರೇ, ಲಾಲಭಾಗ, ಮಂಗಳೂರು. ಕ್ರೌನ್ ೧. ೫. ೧೭೪ ಪುಟ, ರೂ. ೨-೧೨-೦

ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಾನ ವಿಶಿಷ್ಟವಾದುದು. ಕರ್ನಾಟಕ ಪ್ರಾಂತಕ್ಕೆ ದೊರೆಯುವ ಸಮುದ್ರ ಕರಾವಳಿಯ ಬಹು ಭಾಗ (೧೫೦ ಮೈ) ಈ ಜಿಲ್ಲೆಗೇ ಸೇರಿದೆ. ಆದರೆ ಅಲ್ಲಿಯ ಬಹು ಜನರ ಭಾಷೆ ತುಳು. ಆದರಿಂದಲೇ ಅದಕ್ಕೆ ತುಳುನಾಡೆಂಬ ಹೆಸರು. ಹಲವು ಶತಕಗಳಿಂದ ಕರ್ನಾಟಕದೊಡನೆ ರಾಜಕೀಯ ಸಂಪರ್ಕ ಬಂದುದರಿಂದ ಅದಿಂದು ಕನ್ನಡ ನಾಡಿನ ಭಾಗವಾಗಿದ್ದರೂ ಅಲ್ಲಿನ ಸಂಸ್ಕೃತಿ ಶುದ್ಧ ಕನ್ನಡ ಸಂಸ್ಕೃತಿಯೆನಿಸಲಾರದು. ಕೆಲವು ವಿಚಾರಗಳಲ್ಲಿ ಅದು ಕೇರಳ ಸಂಸ್ಕೃತಿಯನ್ನು ಅರಗಿಸಿಕೊಂಡಿದ್ದರೂ ಅದು ಕೇರಳ ಎನಿಸುವಂತೆಯೂ ಇಲ್ಲ. ಅದರ ಇತಿಹಾಸವಾದರೂ ಅದರ ವಿಶಿಷ್ಟ ಭೌಗೋಲಿಕ ಸ್ಥಿತಿಯ ಕಾರಣದಿಂದ ಒಂದು ವಿಶಿಷ್ಟ ರೀತಿಯಲ್ಲಿ ರೂಪಿಸಲ್ಪಟ್ಟಿತು. ಈ ಕಾರಣದಿಂದ ಶ್ರೀ ಕುಡುವರು ದಕ್ಷಿಣ ಕನ್ನಡದ ಇತಿಹಾಸವನ್ನು ಬರೆದುದರಲ್ಲಿ— ಉದಾಹರಣೆಗಾಗಿ— "ಧಾರವಾಡ ಜಿಲ್ಲೆಯ ಇತಿಹಾಸ" ಬರೆಯುವದಕ್ಕಿಂತ ಹೆಚ್ಚು ಔಚಿತ್ಯವಿದೆ. ಅವರು ಇಲ್ಲಿ ಆದಿ ಕಾಲದಿಂದ ಈ ಜಿಲ್ಲೆಯ ಇತಿಹಾಸವನ್ನು ಲಭ್ಯವಾದ ಎಲ್ಲ ಸಾಹಿತ್ಯಗಳಿಂದ ಸಂಗ್ರಹಿಸಿ ೧೯೪೭ ರ ತನಕ ತಂದು ಮುಟ್ಟಿಸಿದ್ದಾರೆ. ಶ್ರೀ. ಕುಡುವರು ಸ್ವತಂತ್ರ ಐತಿಹಾಸಿಕ ಸಂಶೋಧನೆಗಳನ್ನು ನಡೆಸಿಲ್ಲವ ದರೂ ಲಭ್ಯವಾದ ಮೂಲ ಸಾಹಿತ್ಯವನ್ನು ಉಪಯೋಗಿಸಿಕೊಳ್ಳುವಾಗ ಯುಕ್ತವಾದ ಐತಿಹಾಸಿಕ ದೃಷ್ಟಿಯನ್ನು ಪ್ರದರ್ಶಿಸಿ, ತರ್ಕಕ್ಕೆ ನಿಲ್ಲದ ಕಲ್ಪನಾಜಾಲದ ಐತಿಹಾಸಿಕ ಸಿದ್ಧಾಂತಗಳನ್ನು ತಿರಸ್ಕರಿಸಿದ್ದಾರೆ. ಅಂತೂ ಇದು ಸಂಗ್ರಾಹ್ಯವಾದ ಪುಸ್ತಕವೆಂದು ಖಂಡಿತ ಹೇಳಬಹುದು.

The King Emperor's English :

by Mulk Raj Anand. Hind Kitabs Ltd., Bombay. Rs. 1/8

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಇಂಗ್ಲೀಷ ಭಾಷೆಯ ಸ್ಥಾನವೇನಿರಬೇಕೆಂಬ ಚರ್ಚೆಯು ನಡೆದಿರುವ ಈ ಕಾಲದಲ್ಲಿ ಸಮಾಧಾನ ಚಿತ್ತದಿಂದ ಸಮಸ್ಯೆಗಳನ್ನು ಬಿಡಿಸಬೇಕೆಂಬವರಿಗೆ ಶ್ರೀ. ಆನಂದರ ಈ ಪುಟ್ಟ ಪುಸ್ತಕ ಉಪಯುಕ್ತವಾಗದಿರದು. ಬ್ರಿಟಿಶ ಸಾಮ್ರಾಜ್ಯವಾದಿಗಳು ತಮ್ಮ ಆಡಳಿತದ ಯಂತ್ರವನ್ನು ಸಾಗಿಸಲಿಕ್ಕೂ ಹಿಂದೀಯರ ಸ್ವಾಭಿಮಾನ ಸ್ವಭಾಷಾಭಿಮಾನಗಳಿಗೆ ತಣ್ಣೀರೆರಚುವದಕ್ಕೂ ಇಲ್ಲಿ ನೌಕರವರ್ಗದ ಮೂಲಕ ಪ್ರಚುರಪಡಿಸಿದ ಅಸಹ್ಯ ("King Emperor's English") ಸಮ್ರಾಟರ ಇಂಗ್ಲೀಷಿಗೆ ಇನ್ನು ಇಲ್ಲಿ ಸರ್ವಥಾ ಸ್ಥಾನ ಸಿಗಬಾರದಾದರೂ ಪಾಶ್ಚಿಮಾತ್ಯ ರಾಜಕೀಯ ಸಾಮಾಜಿಕ ಸಂಸ್ಕೃತಿಗಳ ಪ್ರಶಂಸನೀಯ ಅಂಶಗಳು ಭಾರತಕ್ಕೆ ಹರಿದು ಬರಲು ಕಾರಣವಾದ ಇಂಗ್ಲೀಷನ್ನು ಕೇವಲ ದ್ವೇಷ ಪರವಶರಾಗಿ ನಾವು ಹೊರತಳ್ಳದೆ ಅದಕ್ಕೆ-ಅಗ್ರ ಸ್ಥಾನವನ್ನಲ್ಲದಿದ್ದರೂ—ಒಂದು ಮಹತ್ವದ ಸ್ಥಾನವನ್ನು ಕೊಡುವದವಶ್ಯವೆಂದು ಲೇಖಕರು ಇಲ್ಲಿ ಪ್ರತಿಪಾದಿಸಿದ್ದಾರೆ. ಇಂಗ್ಲೀಷು ಭಾಷೆಯ ಕೃಷಿಯನ್ನು ಭಾರತೀಯರೂ ಅನೇಕರು ಅಭಿಮಾನಾಸ್ಪದವೆನಿಸುವಂತೆ ಮಾಡಿದ್ದಾರೆ. ಅದರಿಂದ ಅದು ಭಾರತೀಯ ಸಂಸ್ಕೃತಿಯ ಒಂದು ಅಂಗವೂ ಆಗಿಬಿಟ್ಟದೆಯೆಂದು ಅವರು ತೋರಿಸಿದ್ದಾರೆ. ಶಿಕ್ಷಣ ಮಂತ್ರಿ ಅಬುಲ ಕಲಮ ಆಝಾದರು ಪಾಟಣಾ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ(೧೯೪೭)ಮಾಡಿದ ಭಾಷಣವನ್ನು ಇದರಲ್ಲಿ ಅಳವಡಿಸಿದ್ದರಿಂದ ಪುಸ್ತಕದ ಯೋಗ್ಯತೆ ಇನ್ನೂ ಹೆಚ್ಚಾಗಿದೆ.

ಪ್ರಾರ್ಥನೆ

ಸಂಗ್ರಾಹಕರು, ವೆ. ಹೋಳಿಕಟ್ಟಿ, ಪ್ರಕಾಶಕರು, ಬಿ. ಜಿ. ಅವಧಾನಿ, ಮಂಚಿನಬಳ್ಳಿ ಚಾವಡಿ, ಧಾರವಾಡ, ಪುಟ ೩೮. ಬೆಲೆ ೮ ಆಣೆ.

ಈ ಪುಸ್ತಿಕೆಯು ಚಿಕ್ಕದಾದರೂ ಉಪಯುಕ್ತತೆಯ ದೃಷ್ಟಿಯಿಂದ ಬಹಳ ದೊಡ್ಡದೇ. ಪ್ರಾರ್ಥನೆಯ ಬಗ್ಗೆ ಸ್ವತಃ ಮಹಾತ್ಮಾ ಗಾಂಧಿಯವರ ಅಭಿಪ್ರಾಯವೇನಿತ್ತು ಎಂಬದರ ಸಾರವನ್ನು ಹೀರಿ ಇಲ್ಲಿ ಸಂಗ್ರಹಿಸಲಾಗಿದೆ. ಇದರಲ್ಲಿ ಪ್ರಾರ್ಥನೆಯ ಸ್ವರೂಪ, ರೀತಿ, ಆಕ್ಷೇಪಗಳು ನಾವು ಮಹಿವೆ, ಸ್ವಾನುಭವ ಎಂದು ಐದು ವಿಧವಾಗಿ ವಿಂಗಡಿಸಿ ಆರನೆಯ ಮೆಟ್ಟಲಲ್ಲಿ ಬಿಡಿ ನುಡಿಗಳನ್ನು ಹೇಳಿ ಕೊನೆಗೆ ಮಹಾತ್ಮರು ಅನುಸರಿಸುತ್ತಿದ್ದ ಪ್ರಾತಃಸ್ಮರಣವನ್ನೂ ಸಾಯಂ ಪ್ರಾರ್ಥನೆಯನ್ನೂ ಕೊಡಲಾಗಿದೆ. ಜೊತೆಗೆ ಅರ್ಥವಿವರಣೆಯೂ ಇದೆ. ಇದನ್ನೋದಿ ಪ್ರಾರ್ಥನಾಬಲವೆಂದರೇನು ಎಂಬುದನ್ನು ಸುಲಭವಾಗಿ ಅರಿಯಬಹುದು.

ಸೊಗಸಿನ ಕಥೆ ೨

ಮೂಲ: ಶ್ರೀ ಸಾನೆ ಗುರೂಜಿ, ಅನುವಾದಕ: ಶ್ರೀ ಭಾಸ್ಕರ ಗೋವಿಂದರಾವ ಗೋಖಲೆ, ಎಲ್ ಎಲ್ ಬಿ ಪ್ರಕಾಶಕರು: ಕಿತಾಬ ಮಿನಾರ, ಧಾರವಾಡ ಕ್ರೌನ್ ೧. ೫. ೭೦ ಪುಟ, ರೂ. ೧

ಮಕ್ಕಳಿಗಾಗಿ ಶ್ರೀ ಸಾನೆ ಗುರೂಜಿಯವರು ಮರಾಠಿಯಲ್ಲಿ ಬರೆದ ಕಥೆಗಳನ್ನು ಶ್ರೀ. ಗೋಖಲೆಯವರು ಕನ್ನಡದಲ್ಲಿ ಅನುವಾದಿಸಿದ್ದಾರೆ. ಇದರ ಪ್ರಥಮ ಭಾಗವು ಇವರಿಂದಲೇ ಅನುವಾದಿಸಲ್ಪಟ್ಟು ಈಗಾಗಲೇ ಪ್ರಕಟವಾಗಿದೆ. ಈ ಭಾಗದಲ್ಲಿರುವ ಕಥೆಗಳು ಶ್ರೀ. ಗುರೂಜಿಯವರ ಸ್ವತಂತ್ರ ಕಲ್ಪನೆಯವಾಗಿರದೆ ಪರಭಾಷೆಗಳಿಂದ ಆಯ್ದು ರೂಪಾಂತರಿಸಲ್ಪಟ್ಟವುಗಳು. ಎಲ್ಲ ಕಥೆಗಳೂ ಮನೋರಂಜಕವಾಗಿವೆ. ಅನುವಾದದಲ್ಲಿ ಕೆಲವೆಡೆ ಅನುವಾದಕರು ಮರಾಠಿ ವಾಕ್ಯಧಾರೆಯ ಕಟ್ಟಿನಿಂದ ಪಾರಾಗಲು ಸಮರ್ಥರಾಗಿಲ್ಲ ಈ ದೋಷವನ್ನು ಅವರು ಸರಿಪಡಿಸಿಕೊಳ್ಳುವದವಶ್ಯವಿದೆ.

೧ ತರುಣ ಭಾರತ (ಮರಾಟಿ)

ದೀಪಾವಳಿ ಸಂಚಿಕೆ. ಸಂಪಾದಕರು ಶ್ರೀ ಬಾಬುರಾವ, ಠಾಕುರ. ಬೆಳಗಾಂವ ಪುಟಗಳು ಡೆಮಿ ೧/೪ ೮೬ ಬೆಲೆ ೧ ರೂಪಾಯಿ

೨ ಜ್ಞಾನಪ್ರಕಾಶ (ಮರಾಟಿ)

ದೀಪಾವಳಿ ಸಂಚಿಕೆ. ಸಂಪಾದಕರು, ಶ್ರೀ ಶಂ. ಗೋ. ಗೋಖಲೆ, ಎಂ. ಎ. ಜ್ಞಾನಪ್ರಕಾಶ ಕಚೇರಿ ಶಿವಾಜೀನಗರ, ೯೧೫/೧ ಪುಣೆ ಪುಟಗಳು ಡೆಮಿ ೧/೪, ೧೦೮, ಬೆಲೆ ೧½ ರೂಪಾಯಿ

೩ ಚಿಕಿತ್ಸಕ (ಮರಾಟಿ)

ದಿಪಾವಳಿ ಸಂಚಿಕೆ. ಸಂಪಾದಕರು, ಶ್ರೀ ಹ. ಆ. ಸಾವಂತ, ಬಿ. ಎ., ಮತ್ತು ಶ್ರೀ ವಾ. ಆ. ಸಾವಂತ. ಶ್ರಿರಾಮ ತತ್ವ ಪ್ರಕಾಶ ಮುದ್ರಣಾಲಯ, ಗಣಪತಿಗಲ್ಲಿ, ಬೆಳಗಾಂವ. ಪುಟಗಳು ಡೆಮಿ ೧/೪, ೧೦೨, ಬೆಲೆ೧ ರೂಪಾಯಿ

೪ ವಾಕ್ಚಿತ್ರ (ಕನ್ನಡ)

ದೀಪಾವಳಿ ಸಂಚಿಕೆ. ಸಂಪಾದಕರು ಮತ್ತು ಪ್ರಕಾಶಕರು, ಶ್ರೀ ಮಾ. ನಾ. ಚೌಡಪ್ಪ. ೧೨೧, ಸುಲ್ತಾನಪೇಟೆ, ಬೆಂಗಳೂರು ೨. ಪುಟಗಳು ಕ್ರೌನ ೧/೪, ೭೪. ಬೆಲೆ ೮ ಆಣೆ

ಮೇಲ್ಕಾಣಿಸಿದ ದೀಪಾವಳಿಯ ನಾಲ್ಕೂ ಸಂಚಿಕೆಗಳು ಮನೋಹರ ಚಿತ್ರಗಳಿಂದಲೂ ವಿವಿಧ ವಿಷಯಗಳ ಬಗ್ಗೆ ಹೆಸರಾಂತ ನುರಿತ ಲೇಖಕರ ಬರೆಹಗಳಿಂದಲೂ ಚಿತ್ತಾಕರ್ಷಕವಾಗಿ ಪ್ರಕಟವಾಗಿವೆ. ಇವುಗಳನ್ನು ಸಾದರದಿಂದಲೂ ಕೃತಜ್ಞತೆಯಿಂದಲೂ ಸ್ವೀಕರಿಸಿದ್ದೇವೆ.

ಈ ವಾರದ ಕತೆ

[೨ ನೇ ಪುಟದಿಂದ ಮುಂದರಿದದ್ದು]

ಅಲ್ಲೇ ನೆಲಕ್ಕೆ ಬಿದ್ದನು. ಅರಸೋಟದಲ್ಲಿ "ಚಾವೇ ಜೈಲ" ನೋಡಲು ತನ್ನೆಡುರು ಗ್ರಾಮದ ಪಟೇಲರು ಭೀಮರಾಜ ಶೆಟ್ರು ತನ್ನ ಜಾಡಿಗೆ ಬಂಟರಾದ ಗುಲಾಮ್ ದಸ್ತಗೀರ್ ಮತ್ತು ಜಾರು ಇವರು ನಿಂತಿರುವುದನ್ನು ಕಂಡನು. ಕೈ ಜೋಡಿಸಿ ಮೆಲ್ಲನೆ ಮೇಲಕ್ಕೆತ್ತಿ ಮಹಾಸ್ವಾಮಿ! ನನ್ನಿಂದೇನಪರಾಧವಾಯಿತು ಎಂದು ಅತಿ ದುಃಖದಿಂದ ಮೆಲ್ಲಗೆ ಉಸುರಿದನು.

ಶೆಟ್ಟರ ಕುಮ್ಮಿ ಸ್ಥಳದಿಂದ ಸೌದೆ ಕದ್ದುಕೊಂಡು ಹೋಗಿ ಮಾರಾಟಮಾಡಿ ಈಗ ಏನಪರಾಧವಾಯಿತೆಂದು ಕೇಳುತ್ತೀಯ? ಎಷ್ಟು ರೂಪಾಯಿಗೆ ಕಟ್ಟಿಗೆಯನ್ನು ವಿಕ್ರಯಿಸಿರುವೆ? ಅದರಿಂದ ದೊರೆತ ದುಡ್ಡನ್ನು ಇಲ್ಲಿಟ್ಟು ಮುಂದೆ ನಡೆ! ಇಲ್ಲವಾದರೆ ನಡೆ ಪೋಲೀಸು ಸ್ಟೇಷನ್ನಿಗೆ! ಎಂದು ಗರ್ಜಿಸಿದರು, ನಮ್ಮ ಭೀಮರಾಜ ಶೆಟ್ರು. ಕಾಂತುವು ತನ್ನ ಅಂದಿನ ಸ್ಥಿತಿಯನ್ನೆಲ್ಲಾ ನಿವೇದಿಸಿ ಕೈಯಲ್ಲಿದ್ದ ಎಂಟಾಣೆಯನ್ನು ಅವರ ಪಾದದ ಬಳಿ ಇಟ್ಟು ನಿಟ್ಟುಸಿರಿಡುತ್ತಾ ನನ್ನ ಮಕ್ಕಳು ಬೆಳಗ್ಗಿನಿಂದ ಗಂಜಿ ಇಲ್ಲದೆ ಉಪವಾಸ ಬಿದ್ದಿದ್ದಾರೆ ಸ್ವಾಮಿ, ಎಂದನು ಇಂತಹ ಮೋಸಗಾರಿಕೆ ನಮ್ಮಲ್ಲಿ ನಡಿಯಲಿಕ್ಕಿಲ್ಲ. ಸೊಂಟಕ್ಕೆ ಸುತ್ತಿದ ಬಟ್ಟೆಯ ಅಂಚಿನಲ್ಲಿ ಎಷ್ಟು ಅಡಗಿಸಿಟ್ಟುಕೊಂಡಿರುವೆ ಎಂದು ಹೇಳುತ್ತಾ ಅವರಿಬ್ಬರೂ ಕಾಂತುವಿನ ಕೆನ್ನೆಗೊಂದು ಬಲವಾಗಿ ಅಪ್ಪಳಿಸಿ ಮುಗ್ಗಲಿಗೆ ಎರೆಡೆರಡು ತುಳಿದು ಎಂಟಾಣೆಯನ್ನು ತೆಗೆದು ಪಟೇಲರಿಗೆ ಕೊಟ್ಟರು. ಅವರು ಅದನ್ನು ತನ್ನ ದೂತರಿಗೇನೇ ಬಹುಮಾನವಾಗಿ ಕೊಟ್ಟು ಇನ್ನು ಮುಂದಕ್ಕೆ ಬೇರೆಯವರ ಒಡವೆಯನ್ನು ಕದ್ದು ಹೆಂಡತಿ ಮಕ್ಕಳನ್ನು ಸಾಕುವಂತಹ ನಿನ್ನಂತಹ ನೀಚನಿಗೆ ಇದೇ ತಕ್ಕ ಪ್ರಾಯಶ್ಚಿತ್ತವೆಂದು ಕಾಂತುವನ್ನು ಜರೆದು ಅಲ್ಲಿಂದ ಹೊರಟುಹೋದರು. ಮುಗ್ಗಲಿಗೆ ಬಿದ್ದ ಒದೆಗಳಿಂದ ನೋವನ್ನು ಸಹಿಸಲಾರದೆ ಮೂರ್ಛೆ ಹೋದ ಕಾಂತು ಮತ್ತೆ ಏಳಲಿಲ್ಲ. ಸೌದೆ ಮಾರಿ ರೇಶನ್ ತರುತ್ತೇನೆಂದು ಹೋಗಿರುವ ಕಾಂತುವಿನ ಬರೋಣವನ್ನು ನಿರೀಕ್ಷಿಸುತ್ತಾ ಮನೆಯಲ್ಲಿ ಹೆಂಡತಿ ಮಕ್ಕಳು ಮಾರ್ಗದ ಉದ್ದಕ್ಕೂ ದೃಷ್ಟಿಯನ್ನು ಬೀರುತ್ತಾ ಕೂತುಕೊಂಡಿದ್ದರು. ಆದರೆ ಸಿರಿವಂತರ ಸಾರ್ವಭಕ್ಷಕ ವೃತ್ತಿಯು ಕಾಂತುವಿನ ಬಡತನದ ಬವಣೆಯನ್ನು ಹೇಗೆ ಹಿಂಗಿಸಿತೆಂಬುದರ ಸಮಾಚಾರವೇನು ಗೊತ್ತು ಮನೆಯಲ್ಲಿದ್ದ ಆ ಮಡದಿ—ಮಕ್ಕಳಿಗೆ?

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರವರು ಮುದ್ರಿಸಿ ಪ್ರಕಟಿಸಿದರು.